ಕಲ್ಯಾಣ ಕಿರಣ

ಫೆಬ್ರವರಿ-2010
ಬೆಲೆ-ರೂ.10











॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ-40 ಬಸವ ಶಕೆ -876 ಆಜೀವ ಸದಸ್ಯತ್ವ 1000 ರೂ.
ಸಂಚಿಕೆ-2 ಫೆಬ್ರವರಿ- 2010 ವಾರ್ಷಿಕ ಚಂದಾ 100/- ರೂ.

ಯೋಗಿರಾಜ ಪೊರೆಯಯ್ಯ

ಗುರು ಶಿವನೆ ನಾ ನಿನ್ನ ಅನುದಿನವು ನೆನೆಯುವೆನು
ಪೊರೆಯಯ್ಯ ಮಹಾಯೋಗಿ ಮಂತ್ರ ಪುರುಷ ॥ ಪಲ್ಲವಿ ॥

ಅಂತರಾತ್ಮದಿ ದಿಟ್ಟಿ ಅನವರತ ನೀನಿಟ್ಟು
ಅನಿಮಿಷ ನೇತ್ರನು ಆಗಿ ನೀ ಮೆರೆದೆ.
ಯೋಗಿಗಳ ಸ್ಫೂರ್ತಿಯು ಆಗಿ ನೀನಿಹೆಯಯ್ಯ । ಈ
ಜಗದ ಪ್ರಪ್ರಥಮ ಯೋಗಿರಾಜ ॥ 1 ॥

ಧಿಮಿತಕಿಟ ಧಿಮಿತಕಿಟ ಹೆಜ್ಜೆಯಂ ಹಾಕುತ್ತಾ
ತಾಳ ಮದ್ದಳೆ ಸಹಿತ ನೀನು ಕುಣಿದೆ
ನಾಟ್ಯ ಶಾಸ್ತ್ರವ ಜಗಕೆ ನೀನಿತ್ತು ಮೆರೆದೆ
ನಟರಾಜ ನೀನೆಂಬ ಖ್ಯಾತಿ ಪಡೆದೆ ॥ 2 ॥

ಗಾನ ಗಂಗೆಯ ಹರಿಸಿ ನಾದಯೋಗಿಯು ಆದೆ
ಕಾಮನಂ ನೀನುರುಹಿ ವಿರಾಗಿಯಾದೆ ॥
ಭಸಿತ- ರುದ್ರಾಕ್ಷಿಗಳೆ ಆಭರಣವಾಗಿರಲು
ಸರಳ ವ್ರತ ಧರಿಸಿರುವ ಮಹತ್ಯಾಗಿಯಾದೆ ॥ 3 ॥

ಶರಣು ಬಂದವರಿಗೆ ಅಭಯ ಹಸ್ತವ ನೀಡಿ
ಮೂಲಿಗನು ನೀನಾದೆ ಶಿವಭಕ್ತಿ ಪಥಕೆ
ನೀನು ತಪಗೈಯ್ದ ದಿನ ಶಿವರಾತ್ರಿಯಾಯಿತ್ತು
ಬನ್ನಗಳ ತಾ ತೂಡೆದು ಭವಬಾಧೆ ಹರಿಯಿತ್ತು. ॥ 4 ॥

ಈ ಜಗದ ಪ್ರಪ್ರಥಮ ಯೋಗಿರಾಜನೆನಿಸಿ
ಮಡದಿ ಪಾರ್ವತಿಗೆ ಯೋಗವಿದ್ಯೆಯ ಕಲಿಸಿ
ಓಂಕಾರ ವಿಭೂತಿ ರುದ್ರಾಕ್ಷಿ ಹೊಂದಿದ
ಪಥವ ನೀಡಿದ ಶಿವಗೆ ಶರಣು ಸಲ್ಲಿಸುವೆ ॥ 5 ॥

-ಮಾತಾಜಿ

★ ಕಲ್ಯಾಣ ಕಿರಣ ★

ಕಿರಣಗನ್ನಡಿ

ಪೂಜ್ಯ ಶ್ರೀ ಮನ್ ನಿರಂಜನ ಮಹಾಜಗದ್ಗುರು
ಮಾತೆ ಮಹಾದೇವಿಯವರಿಗೆ 65ನೇಯ ವರ್ಧಂತಿಗಾಗಿ ನಮನ



ಜೈ ಮಾತೆ ಜಗದ್ಗುರುವೆ
ಮಾತೆ ಮಹಾದೇವಿ ಜೈ ಜೈ
ಅನುಭವ ಮಂಟಪಕೆ ಅಕ್ಕಮಹಾದೇವಿ
ಬಸವ ಮಂಟಪಕ್ಕಿಂದು ಮಾತೆ ಮಹಾದೇವಿ
ಮೂಡಿ ನಿಂತಿತು ಆ ಬಸವ ಕಲ್ಯಾಣ
ಕೂಡಲ ಸಂಗಮವಾಯ್ತು ನವ ಕಲ್ಯಾಣ
ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ಠಾವು
ನಾವೆಲ್ಲ ಕೂಡಿ ಜಯಘೋಷ ಮಾಡಿ
ನಲಿವೆವು ನಿಮ್ಮನ್ನು ಹಾಡಿ ಕೊಂಡಾಡಿ

Kalyana Kirana -Reg No.19988/70. Monthly Magazine Edited And Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, 2nd Block, Rajajinagar, Bangalore-10.
Ph: 9481249857, 9036351066, 9620058492

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666





ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಳತೆ ಗ್ರಾಮದ ಅಲ್ಲಮ ಪ್ರಭು ಗಿರಿಯಲ್ಲಿ 2010 ಮಾರ್ಚ್ 16, 17, 18ರಂದು ಐದನೆಯ ಲಿಂಗಾಯತ ಗಣಮೇಳ

ಶರಣ ಬಂಧುಗಳಲ್ಲಿ ಶರಣು ಶರಣಾರ್ಥಿ,

ವಿಶ್ವಗುರು ಬಸವಣ್ಣನವರು 12ನೆಯ ಶತಮಾನದಲ್ಲಿ ಅನುಭವ ಮಂಟಪ ಎಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಕಟ್ಟಿ, ಅದರಲ್ಲಿ ಶೂನ್ಯಪೀಠ ಎಂಬ ಧರ್ಮಪೀಠವನ್ನು ಸ್ಥಾಪಿಸಿ ಅದಕ್ಕೆ ವ್ಯೋಮಕಾಯ ಸಿದ್ಧರಾದ ಅಲ್ಲಮ ಪ್ರಭುದೇವರನ್ನು ಮೊದಲನೆಯ ಅಧಿಕಾರಿಯನ್ನಾಗಿ ಪೀಠಾರೋಹಣ ಮಾಡಿಸಿದರು. ಶ್ರೀ ಅಲ್ಲಮ ಪ್ರಭುದೇವರು ಮತ್ತು ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರರು ಧರ್ಮ ಪ್ರಚಾರಾರ್ಥ ಇಂದಿನ ಕರ್ನಾಟಕ, ಮಹಾರಾಷ್ಟ್ರದ ವಿವಿಧ ಸ್ಥಳಗಳಲ್ಲೆಲ್ಲ ಗಂಗೆ- ಯಮುನೆಯರಂತೆ ಸಂಚರಿಸಿ ಭಕ್ತರನ್ನು ಉದ್ಧರಿಸಿದ್ದಾರೆ. ಜೊತೆಗೂಡಿ ಸಂಚರಿಸಿದ ಉಭಯತರೂ ಒಂದು ವಿಶಿಷ್ಟ ಸ್ಥಳದಿಂದ ಪರಸ್ಪರ ಬೀಳ್ಕೊಟ್ಟು ಸಾಭಾರಿ ಜಂಗಮರಾದ ಶ್ರೀ ಸಿದ್ಧರಾಮೇಶ್ವರರು ಸೊಲ್ಲಾಪುರಕ್ಕೆ ಕರ್ತವ್ಯ ಮುಖಿಯಾಗಿ ವಾಪಸು ಹೊರಡುತ್ತಾರೆ. ನಿರಾಭಾರಿ ಜಂಗಮರಾದ ಶ್ರೀ ಅಲ್ಲಮ ಪ್ರಭುದೇವರು ಅಶ್ವಾರೋಹಿಯಾಗಿ ಶಿಷ್ಯರೊಡನೆ ಸಂಚಾರವನ್ನು ಮುಂದುವರಿಸುತ್ತಾರೆ. ಒಂದು ಸ್ಥಳದಲ್ಲಿ ತಪೋಮಗ್ನರಾಗಿ ತಂಗಿರುತ್ತಾರೆ. ಅದೇ ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಳತೆ ಗ್ರಾಮದ ಬಳಿ ಇರುವ ಅಲ್ಲಮ ಪ್ರಭು ಗಿರಿ. ಮರಾಠಿಯಲ್ಲಿ ಅಲ್ಲಮ ಪ್ರಭು ಡೋಂಗರ್ ಎನ್ನುತ್ತಾರೆ. ಇದು ಕೊಲ್ಹಾಪುರದಿಂದ 25 ಕಿ.ಮೀಟರ್ ದೂರದಲ್ಲಿ ಕೊಲ್ಹಾಪುರ -ಸಾಂಗ್ಲಿ-ಸೊಲ್ಲಾಪುರ ಹೆದ್ದಾರಿಯ ಮೇಲಿದೆ. ಸಮೀಪದಲ್ಲಿ ಇಚಲಕರಂಜಿ, ಮೀರಜ್, ಸಾಂಗ್ಲಿ ಮತ್ತು ವಡಗಾಂವ ಪಟ್ಟಣಗಳು ಇವೆ. ಮೀರಜ್‌ವರೆಗೆ ರೇಲ್ವೆ ಸೌಲಭ್ಯವಿದೆ. ಪ್ಯಾಸೆಂಜರ್ ರೇಲ್ವೆಗಾಡಿಗಳು ಹಾತ್ ಕಣಂಗಲೆ ಮೂಲಕ ಕೊಲ್ಹಾಪುರಕ್ಕೆ ಹೋಗುತ್ತವೆ ಮತ್ತು ಹಾತ್‌ಕಣಂಗಲೆಯಲ್ಲಿ ನಿಲ್ಲುತ್ತವೆ.

ಅಲ್ಲಮ ಪ್ರಭು ನಂದಾದೀಪ

ಶ್ರೀ ಅಲ್ಲಮ ಪ್ರಭುದೇವರು ಪೂಜೆಯ ಸಮಯದಲ್ಲಿ ಹಚ್ಚಿದ ಜ್ಯೋತಿಯನ್ನು ಅಲ್ಲಮ ಪ್ರಭು ಶರಣಾಲಯದ ಪೂಜಾರಿ ವಂಶಸ್ಥರು ನಂದಾದೀಪವಾಗಿ ಕಾಯ್ದುಕೊಂಡು ಬಂದಿರುವುದು ಸ್ಥಳ ವಿಶೇಷ. ಶ್ರೀ ಸಿದ್ಧರಾಮೇಶ್ವರರ ಶರಣಾಲಯವು ಸಹ ಪಕ್ಕದಲ್ಲೇ ಇದ್ದು ಕೆಲವು ಕಾಲ ಅವರು ಸಹ ಈ ಗಿರಿಯಲ್ಲಿ ತಂಗಿದ್ದಾರೆ. ಈ ಉಭಯತರೂ ಪೂಜೆ-ಧ್ಯಾನಗಳಿಗೆ ಬಳಸುತ್ತಿದ್ದ ಗವಿಯು ಶ್ರೀ ಸಿದ್ಧರಾಮೇಶ್ವರ ಶರಣಾಲಯದ ಕೆಳಗೆ ಇದೆ. ಅಲ್ಲಮ ಪ್ರಭುಗಿರಿಗೆ ಸುಮಾರು 4 ಕಿ.ಮೀ ದೂರದಲ್ಲಿ ಸಿದ್ಧರಾಮೇಶ್ವರ ಗಿರಿ (ಸಿದ್ದೋಬಾ ಡೋಂಗರ್)ಇದ್ದು ಎತ್ತರವಾದ ಆ ಗುಡ್ಡದ ಮೇಲೆ ಸಹ ಸಿದ್ಧರಾಮೇಶ್ವರ ಶರಣಾಲಯವಿದೆ. ಈ ಜಂಗಮ ಕ್ಷೇತ್ರಗಳು ಹೆಚ್ಚಿನ ಪ್ರಚಾರವನ್ನು ಪಡೆಯದೆ ಇರುವುದು ಮತ್ತು ಯಾವುದೇ ವಿಶೇಷ ಅಭಿವೃದ್ಧಿ ಹೊಂದದಿರುವುದು ವಿಷಾದನೀಯ ಸಂಗತಿಯಾಗಿದೆ.

ಬಸವ ಧರ್ಮ ಪೀಠದ ಧ್ಯೇಯೋದ್ದೇಶ

ಕೂಡಲ ಸಂಗಮದ ಬಸವ ಧರ್ಮ ಪೀಠ ಟ್ರಸ್ಟ್ ಶರಣರ ಸ್ಥಾನಗಳನ್ನು ಅಭಿವೃದ್ಧಿ ಪಡಿಸುವ ಆಶಯವನ್ನು ಹೊಂದಿದ್ದು ಅಲ್ಲಮ ಪ್ರಭು ಗಿರಿ(ಡೋಂಗರ್)ಯಲ್ಲಿ ಜಗದ್ಗುರು ಅಲ್ಲಮಪ್ರಭು ಶರಣಾಲಯಕ್ಕೆ ಹತ್ತಿರದಲ್ಲಿ 14 ಎಕರೆಯಷ್ಟು ಜಮೀನನ್ನು ಖರೀದಿಸಿದೆ. ಬೋರ್ ವೆಲ್, ನೀರಿನ ತೊಟ್ಟಿ, ಕಾರ್ಯಾಲಯ (Office) ಮತ್ತು ವಾಸಕ್ಕೆ 3 ಕೊಠಡಿ, ಒಂದು ಹಾಲ್ ಸಹ ಕಟ್ಟಿಸಲಾಗಿದೆ. ಈ ಸದ್ಯ ಪ್ರತಿ ಅಮವಾಸ್ಯೆಯಂದು ಶರಣ ಸಂಗಮ -ಪ್ರಾರ್ಥನೆ ಮತ್ತು ಅನುಭವ ಗೋಷ್ಠಿಯನ್ನು ನಡೆಸಲಾಗುತ್ತಿದ್ದು ಸುತ್ತಲಿನ ಪ್ರದೇಶದಿಂದ ಶರಣ ಬಂಧುಗಳು ಅಲ್ಲಮ ಗಿರಿಗೆ ಬರುತ್ತಾರೆ. ಮುಂದೆ ವಿಸ್ತಾರವಾದ ಕಾರ್ಯ ಯೋಜನೆಯ ಮಾಸ್ಟರ್ ಪ್ಲಾನ್ ಪ್ರಕಟಿಸಲಾಗುವುದು. ಮತ್ತು ಕಟ್ಟಡ ನಿಧಿಗೆ, ದಾಸೋಹ ನಿಧಿಗೆ ದೇಣಿಗೆಯನ್ನು ಸಂಗ್ರಹಿಸಲಾಗುವುದು.

ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ ಅಲ್ಲಮಪ್ರಭು ಯೋಗ ಪೀಠಾರೋಹಣ ಸಂಜೆ 5ಕ್ಕೆ

ಶೂನ್ಯ ಪೀಠಾಧೀಶ ಅಲ್ಲಮ ಪ್ರಭುದೇವರು ಮತ್ತು ಕಾಯಕ ಯೋಗಿ ಸಿದ್ಧರಾಮೇಶ್ವರರು ಪಾದವಿಟ್ಟ ಈ ಜಂಗಮ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕೆಂದು, ಲಿಂಗಾಯತ ಸಮಾಜದ ಸಂಘಟನೆಯ ದೃಷ್ಟಿಯಿಂದ ಮಹಾರಾಷ್ಟ್ರದಲ್ಲಿ ಬಸವ ಧರ್ಮಪೀಠದ ಶಾಖೆಯೊಂದನ್ನು

ಹೊಂದುವುದು ತೀರಾ ಅತ್ಯಗತ್ಯ ಎಂಬ ಮಹಾರಾಷ್ಟ್ರ ಶರಣ ಬಂಧುಗಳ ಬೇಡಿಕೆಯಂತೆ 2006ನೇ ಇಸವಿಯ ಚೈತ್ರ ಶುದ್ಧ ಪ್ರತಿಪದೆ ಯುಗಾದಿಯ ದಿನ ಅಲ್ಲಮಪ್ರಭು ಪೀಠಾರೋಹಣ ಸಂಸ್ಮರಣ ದಿನಕ್ಕೆ ಹೊಂದಿಕೊಂಡು ಮಾರ್ಚ್ ತಿಂಗಳಿನ 29 ಮತ್ತು 30ನೆಯ ದಿನಾಂಕಗಳಂದು ಪ್ರಥಮ ಲಿಂಗಾಯತ ಗಣ ಮೇಳವನ್ನು ಏರ್ಪಡಿಸಲಾಯಿತು.

ಕೂಡಲ ಸಂಗಮದ ಬಸವ ಧರ್ಮಪೀಠ, ಮಹಾರಾಷ್ಟ್ರ ರಾಷ್ಟ್ರೀಯ ಬಸವ ದಳಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ಅಲ್ಲಮ ಪ್ರಭು ಗಿರಿಯಲ್ಲಿ ಲಿಂಗಾಯತ ಗಣಮೇಳವನ್ನು ನಡೆಸಲಾಗುವುದು. ದಿ.16-3-2010 ಬೆಳಿಗ್ಗೆ -ಉದ್ಘಾಟನೆ, ಮಧ್ಯಾಹ್ನ - ಚಿಂತನಗೋಷ್ಠಿ, ಸಂಜೆ -ಪ್ರವಚನ, ಸಾಮೂಹಿಕ ಕೀರ್ತನ(ಭಜನೆ), ಅಲ್ಲಮಪ್ರಭು ತೊಟ್ಟಿಲು ಕಾರ್ಯಕ್ರಮ ಬುಧವಾರ ದಿ. 17-3-10ರಂದು ಸುಪ್ರಭಾತದಲ್ಲಿ ಇಷ್ಟಲಿಂಗಾರ್ಚನೆ, ಬೆಳಿಗ್ಗೆ 10-30ರಿಂದ ಸಮುದಾಯ ಪ್ರಾರ್ಥನೆ - ಸಿದ್ಧರಾಮೇಶ್ವರ ಗಿರಿಯಿಂದ ಜ್ಯೋತಿಯನ್ನು ತಂದು ತಿರುಗುತ್ತಿಯಿಂದ ಮೆರವಣಿಗೆ ಮೂಲಕ ಗುಡಿಗೆ ಹೋಗಲಾಗುವುದು. ನಂತರ ಅಲ್ಲಮ ಪ್ರಭು ಯೋಗ ಪೀಠಾರೋಹಣ ಪೂಜ್ಯ ಶ್ರೀ ಜಗದ್ಗುರು ಬಸವ ಕುಮಾರ ಸ್ವಾಮಿಗಳಿಂದ. ದಿ. 18-3-2010ರಂದು ಬೆಳಿಗ್ಗೆ 10-30ಕ್ಕೆ ಲಿಂಗಾಯತ ಗಣ ಮೇಳದ ಸಮಾರೋಪ ಸಮಾರಂಭ.

ಸ್ಥಳದ ಹೆಸರು : ಅಲ್ಲಮ ಪ್ರಭು ಗಿರಿ(ಡೋಂಗರ್), ಗ್ರಾಮ: ಅಳತೆ; ಇದು ಕೊಲ್ಹಾಪುರದಿಂದ ಸಾಂಗ್ಲಿಗೆ ಹೋಗುವ ದಾರಿಯ ಮೇಲೆ ಕೇವಲ 25 ಕಿ.ಮೀಟರ್ ದೂರದಲ್ಲಿ ಇದೆ. ಸುಪ್ರಸಿದ್ಧ ಕೈಗಾರಿಕಾ ನಗರ ಇಚಲ ಕರಂಜಿಯಿಂದಲೂ 20 ಕಿ.ಮೀಟರ್ ದೂರದಲ್ಲಿದೆ. ಈ ಸ್ಥಳದಿಂದ ಸ್ವಲ್ಪ ದೂರದಲ್ಲಿ ಜೈನರ ಸುಪ್ರಸಿದ್ಧ ಯಾತ್ರಾಸ್ಥಳಗಳಾದ ಕುಂತಗಿರಿ ಮತ್ತು ಬಾಹುಬಲಿ ಬೆಟ್ಟವಿದೆ. ವಡಗಾಂವ ನಗರವೂ ಸಮೀಪದಲ್ಲಿದೆ. ಅಲ್ಲಮ ಪ್ರಭು ಗಿರಿ ಇರುವ ಅಳತೆ ಗ್ರಾಮವು ಹಾತ್‌ಕಣಂಗಲೆ ತಾಲ್ಲೋಕಿನಲ್ಲಿದ್ದು ಹಾತ್‌ಕಣಂಗಲೆಯವರೆಗೆ ರೇಲ್ವೆ ಲೈನ್ ಸೌಲಭ್ಯವಿದೆ. ಪ್ಯಾಸೆಂಜರ್ ಟ್ರೇನ್, ಹರಿಪ್ರಿಯ ಎಕ್ಸ್‌ಪ್ರೆಸ್ ಹಾತ್‌ಕನಂಗಲೆಯಲ್ಲಿ ನಿಲುತ್ತವೆ. ಹಾತ್‌ಕಣಂಗಲೇ ಬಸ್‌ಸ್ಟಾಂಡ್ ಎದುರಿಗೆ ಉತ್ಸವ ಸಮಿತಿಯ ಕಾರ್ಯಾಲಯ ತೆರೆದಿದ್ದು ಊರಿಂದ ಬಂದವರು ಇಲ್ಲಿ ವಿಶ್ರಮಿಸಿಕೊಂಡು ಅಲ್ಲಮಗಿರಿಗೆ ಬರಬಹುದಾಗಿರುತ್ತದೆ. ವಾಹನಗಳ ವ್ಯವಸ್ಥೆ ಇರುತ್ತದೆ.

ಕಾರ್ಯಕ್ರಮದ ಸಮಯದಲ್ಲಿ ಬೆಟ್ಟದ ಮೇಲೆ ವಸತಿ ವ್ಯವಸ್ಥೆಯನ್ನು ತಾತ್ಕಾಲಿಕ ಶಾಮಿಯಾನಾ ಟೆಂಟ್‌ಗಳಿಂದಲೇ ಮಾಡಬೇಕು. ಕೋಣೆಗಳ ವ್ಯವಸ್ಥೆ ಬೇಕಾದವರಿಗೆ ಇಚಲ ಕರಂಜಿ - 20 ಕಿ.ಮೀ ಮತ್ತು ಕೊಲ್ಹಾಪುರ 25 ಕಿ.ಮೀಟರ್ ದೂರದಲ್ಲಿರುವ ನಗರಗಳು. ಅಲ್ಲಿಂದ ಬರಲು ಹೋಗಲು ಬಸ್ ವ್ಯವಸ್ಥೆ ಇರುತ್ತದೆ. ಟೆಂಪೋ ಸಹ ಸಿಗುತ್ತವೆ. ದೂರದ ಊರುಗಳಿಂದ ಬರುವವರು ದಿ. 15ರ ಸಂಜೆಯೊಳಗೆ ಬರಬೇಕೆಂದು, ಹತ್ತಿರದ ಸ್ಥಳಗಳಿಂದ ಬರುವವರು 16ರ ಬೆಳಿಗ್ಗೆ 10-30ಕ್ಕೆ ನಡೆಯುವ ಉದ್ಘಾಟನಾ ಕಾರ್ಯಕ್ರಮಕ್ಕೆ ತಪ್ಪದೆ ಹಾಜರಾಗಬೇಕೆಂದು ವಿನಂತಿಸುತ್ತೇವೆ.

ಧನ ಸಹಾಯಕ್ಕೆ ಮನವಿ

2010ರ ಮಾರ್ಚ್ 16, 17 ಮತ್ತು 18ರಂದು ನಡೆಯುವ ಐದನೆಯ ಲಿಂಗಾಯತ ಗಣ ಮೇಳಕ್ಕೆ ಧನ ಸಹಾಯ ಮಾಡುವವರಿಗೆ ಕೆಳಗಿನಂತೆ ಅವಕಾಶವಿದೆ.

ಉಪಾಹಾರದ ವೆಚ್ಚ ಭರಿಸುವವರು 15000 (ಹದಿನೈದು ಸಾವಿರ) ರೂಗಳು.

ಮಹಾಪೋಷಕರು	: 10000ರೂ ಮತ್ತು ಮೇಲೆ ಕೊಟ್ಟವರು	ಹಿತೈಷಿಗಳು	500 ರೂ
ಪೋಷಕರು	: 5000ರೂ ಮತ್ತು ಮೇಲೆ ಕೊಟ್ಟವರು	ಉತ್ಸವ ಸಮಿತಿ ಸದಸ್ಯರು	250 ರೂ
ದಾನಿಗಳು	: 1000ರೂ ಮತ್ತು ಮೇಲೆ ಕೊಟ್ಟವರು	ಪ್ರತಿನಿಧಿ ಶುಲ್ಕ	100 ರೂ

ಸ್ವಯಂ ಪ್ರೇರಣೆಯಿಂದ ಅವರವರ ಶಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು. ಚೆಕ್ / ಡಿ.ಡಿ ಕಳಿಸುವವರು ಲಿಂಗಾಯತ ಗಣ ಮೇಳ ಉತ್ಸವ ಸಮಿತಿ, ಇಚಲ ಕರಂಜಿ ಶಾಖೆ ಎಂದು ಬರೆಸಬಹುದು ಅಥವಾ ಬಸವ ಮಹಾಮನೆ ಚಾರಿಟಬಲ್‌ಟ್ರಸ್ಟ್ ಎಂದಾದರೂ ಬರೆಸಬಹುದು. ಪ್ರತಿ ವರ್ಷವೂ 1000 (ಒಂದು ಸಾವಿರ)ರೂ ಕೊಡುವ 770 ಜನ ಶರಣರ ಪಟ್ಟಿಯನ್ನು ಉತ್ಸವ ಸಮಿತಿಯವರು ಸಿದ್ಧಪಡಿಸುತ್ತಿದ್ದಾರೆ. ಸ್ವಯಂ ಪ್ರೇರಣೆಯಿಂದ ಯಾರು ಬೇಕಾದರೂ ತಮ್ಮ ಹೆಸರನ್ನು ಬರೆಸಬಹುದು.

ಪೂಜ್ಯ ಶ್ರೀ ಬಸವ ಲಿಂಗ ಸ್ವಾಮಿಗಳು
ಲಿಂಗಾಯತ ಗಣಮೇಳಾವ ಉತ್ಸವ ಸಮಿತಿ
ಅಲ್ಲಮ ಪ್ರಭು ಗಿರಿ
ಆಳತೆ ಗ್ರಾಮ, ತಾ-ಹಾತ್‌ಕಣಂಗಲೆ
ಜಿ-ಕೊಲ್ಹಾಪುರ, ಮಹಾರಾಷ್ಟ್ರ ರಾಜ್ಯ
ದೂರವಾಣಿ: (0)9011283186,
(0) 990202958, (0)9420585881

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಬಸವ ಮಂಟಪ
2035, 20ನೆಯ ಮುಖ್ಯ ರಸ್ತೆ
ಕಾರ್ಡ್ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23131476/23322790

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666





ಲಿಂಗಾಯತ ಧರ್ಮ ಜಾಗೃತಿ ಅಭಿಯಾನ

2011 ರ ಜನಗಣತಿಯಲ್ಲಿ ಧರ್ಮ ಅಂಕಣದಲ್ಲಿ

"ಲಿಂಗಾಯತ" ಎಂದೇ ಬರೆಸಲು ಕರೆ

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ; ನಿಮ್ಮ ಕ್ಷೇಮವನ್ನು ಹಾರೈಸುತ್ತೇವೆ.

1. ಜನಗಣತಿಯನ್ನು ಪ್ರತಿ ಹತ್ತು ವರ್ಷಗಳಿಗೊಮ್ಮೆ ಭಾರತ ಸರ್ಕಾರವು ನಡೆಸುತ್ತಿದ್ದು, ಇದು ಧರ್ಮದ ಆಧಾರದ ಮೇಲೆ ಇರುತ್ತದೆ. ಮುಂದಿನ ಜನಗಣತಿ 2011 ಫೆಬ್ರವರಿಯಲ್ಲಿ ನಡೆಯಲಿದೆ.

2. ಈಗಾಗಲೇ ಸ್ವತಂತ್ರ ಧರ್ಮಗಳೆಂಬ ಮಾನ್ಯತೆ ಪಡೆದ ಹಿಂದು, ಜೈನ, ಬೌದ್ಧ, ಸಿಖ್, ಇಸ್ಲಾಂ, ಕ್ರೈಸ್ತ ಧರ್ಮಾನುಯಾಯಿಗಳಿಗೆ ಸಂಕೇತಾಕ್ಷರಗಳಾಗಿ ಕ್ರಮವಾಗಿ H, J,B,S,M,C ಕೇಂದ್ರ ಸರ್ಕಾರವು ಮಾನ್ಯ ಮಾಡಿದೆ. ಮುಂಬರುವ ಜನಗಣತಿಯಲ್ಲಿ (2011) ಸಂಕೇತಾಕ್ಷರ (Code letter)ಗಳನ್ನೇ ಕೊಡಬಹುದು. ಅಥವಾ ವಿವಿಧ ಧರ್ಮಗಳಿಗೆ 1,2,3 ಎಂದು ಸಂಖ್ಯೆಗಳನ್ನೂ ಸಂಭವ ಹೆಚ್ಚು ಇದೆ.

3. ಯಾವ ಗುಣಲಕ್ಷಣ ಕಾರಣಗಳಿಂದ ಭಾರತದಲ್ಲೇ ಜನಿಸಿರುವ ಬೌದ್ಧ, ಜೈನ ಮತ್ತು ಸಿಖ್ ಧರ್ಮಗಳು ಸ್ವತಂತ್ರ ಧರ್ಮಗಳೆಂದು ಮಾನ್ಯತೆ ಪಡೆದಿವೆಯೋ ಅದೇ ಗುಣ ಲಕ್ಷಣ ಕಾರಣಗಳಿಗಾಗಿ ಲಿಂಗಾಯತವು ಸಹಿತ ಸ್ವತಂತ್ರ ಧರ್ಮವಾಗಿದೆ.

4. ಮೇಲ್ಕಾಣಿಸಿದ ಧರ್ಮಗಳು ಸ್ವತಂತ್ರ ಧರ್ಮಗಳೆಂದು ಸಂವಿಧಾನಾತ್ಮಕ ಮನ್ನಣೆ ಪಡೆದಿವೆ. ಮಾತ್ರವಲ್ಲ ಅಲ್ಪಸಂಖ್ಯಾತ ಧರ್ಮಗಳೆಂಬ ವಿಶೇಷ ಮಾನ್ಯತೆ ಪಡೆದು, ಅವುಗಳ ಅನುಯಾಯಿಗಳು ವಿಶೇಷ ಸವಲತ್ತುಗಳನ್ನು ಪಡೆದಿದ್ದಾರೆ.

5. ಲಿಂಗಾಯತ ಧರ್ಮೀಯರಲ್ಲಿ ಒಗ್ಗಟ್ಟು, ಏಕಾಭಿಪ್ರಾಯವಿಲ್ಲ; ಸಾಮಾಜಿಕ ಧಾರ್ಮಿಕ ಜಾಗೃತಿ ಇಲ್ಲ. ತಮ್ಮದೊಂದು ಸ್ವತಂತ್ರ ಧರ್ಮವಾಗಿದ್ದರೂ ಅದರ ಅರಿವಿಲ್ಲದೆ ಲಿಂಗಾಯತವು ಹಿಂದುದೊಳಗಣ ಒಂದು ಜಾತಿ ಎಂದೇ ಬಹಳ ಜನ ಲಿಂಗಾಯತರು ಮತ್ತು ಲಿಂಗಾಯತೇತರರು ತಿಳಿದಿದ್ದಾರೆ.

6. ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದ ಹೆಸರನ್ನು ಜನಗಣತಿಯಲ್ಲಿ ಬರೆಸಲು ಭಾರತದ ಸಂವಿಧಾನವು ಅವಕಾಶ ಮಾಡಿಕೊಟ್ಟಿದ್ದರೂ ಲಿಂಗಾಯತರು ಅದರ ಸದುಪಯೋಗ ಪಡೆದುಕೊಂಡಿಲ್ಲ. 1991ರ ಜನಗಣತಿಯಲ್ಲೂ ಎಲ್ಲಾ ಲಿಂಗಾಯತರು ಸರಿಯಾಗಿ ಬರೆಸಿಲ್ಲ. 2001ರ ಜನಗಣತಿಯ ವೇಳೆಯಲ್ಲಿ ಬಹಳಷ್ಟು ಜಾಗೃತಿ ಮಾಡಲಾಗಿ ಸ್ವಲ್ಪ ಸುಧಾರಣೆ ಕಂಡು ಬಂದರೂ, ಒಟ್ಟಾರೆ ಲಿಂಗಾಯತ -ವೀರಶೈವರ ಸಂಖ್ಯೆ 55,19,622 (ಐವತ್ತೈದು ಲಕ್ಷದ ಹತ್ತೊಂಬತ್ತು ಸಾವಿರದ ಆರು ನೂರ ಇಪ್ಪತ್ತೆರಡು) ಎಂದು 2001 ಜನಗಣತಿಯಲ್ಲಿ ನಮೂದಾಗಿದೆ.

7. 2001ರ ಜನಗಣತಿ ಪ್ರಕಾರ ಇಲಾಖೆ ಪ್ರಕಟಿಸಿರುವ 55,19622 ಸಂಖ್ಯೆ ಸರಿಯಾಗಿ ಇಲ್ಲ. ಜೊತೆಗೆ ವೀರಶೈವರ ಸಂಖ್ಯೆಯನ್ನು ಕೂಡಿಸಿ ಲಿಂಗಾಯತರ ಸಂಖ್ಯೆಯನ್ನು ತೆಗೆದಿರುವುದು ದೋಷಪೂರ್ಣ. ಏಕೆಂದರೆ ಆಂಧ್ರ, ತಮಿಳುನಾಡು, ಕೇರಳಗಳಲ್ಲಿ ವೀರಶೈವ ಎಂಬ ಸಮುದಾಯವೇ ಇದ್ದು ಅವರ ಆಚಾರ -ವಿಚಾರ -ನಂಬಿಕೆ- ಸಂಸ್ಕೃತಿ ಬೇರೆಯೇ

ಆಗಿವೆ ಎಂಬುದು ಗಮನಾರ್ಹ. ದೆಹಲಿಯಲ್ಲಿ 27ಜನ ಎಂದು, ತಮಿಳು ನಾಡಿನಲ್ಲಿ 15010 ಎಂದು ನಮೂದಾಗಿರುವುದನ್ನು ನೋಡಿದಾಗ ಈ ಸಂಖ್ಯೆ ಸರಿಯಿಲ್ಲವೆಂದು ಯಾರಾದರೂ ಊಹಿಸ ಬಹುದು.

ಇದಕ್ಕೆ ಕಾರಣ ಗಣತಿ ಮಾಡುವವರು ಮಾತ್ರವಲ್ಲದೆ ವಿವರಗಳನು ಕೊಡುವವರೂ ಸಹ ಕಾರಣರು ಎಂದು ಸ್ಪಷ್ಟವಾಗಿ ಹೇಳಬಹುದು. ಈಗಾಗಿರುವ ತಪ್ಪುಗಳನ್ನು ತಿದಿಕೊಂಡು 2011ರ ಜನಗಣತಿಯಲ್ಲಿ ಸರಿಯಾಗಿ ಬರೆಸಲು ಬಸವ ಧರ್ಮ ಪೀಠದ ವತಿಯಿಂದ "ಲಿಂಗಾಯತ ಧರ್ಮ ಜಾಗೃತಿ ಅಭಿಯಾನವನ್ನು" ಹಮ್ಮಿಕೊಳ್ಳಲಾಗಿದೆ.

ಲಿಂಗಾಯತ ಧರ್ಮದ ಲಕ್ಷಣಗಳು

1.	ಧರ್ಮಗುರು	-	ಧರ್ಮ ಸ್ಥಾಪಕರಾದ ವಿಶ್ವಗುರು ಬಸವಣ್ಣನವರು
2.	ಧರ್ಮ ಸಂಹಿತೆ	-	ಸಮಾನತೆ ಸಾರುವ ವಚನ ಸಾಹಿತ್ಯ
3.	ಧರ್ಮ ಭಾಷೆ	-	ಕನ್ನಡ
4.	ದೇವರ ಹೆಸರು	-	ಲಿಂಗದೇವ
5.	ಧರ್ಮಲಾಂಛನ	-	ಸೃಷ್ಟಿಕರ್ತ ಲಿಂಗದೇವನ ಕುರುಹಾದ ಇಷ್ಟಲಿಂಗ
6.	ಧರ್ಮಕ್ಷೇತ್ರ	-	ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ ಶರಣ ಭೂಮಿ ಬಸವ ಕಲ್ಯಾಣ
7.	ಧಾರ್ಮಿಕ ವಾರ್ಷಿಕ ಸಮಾವೇಶ	-	ಶರಣ ಮೇಳ, ಕಲ್ಯಾಣ ಪರ್ವ
8.	ಧಾರ್ಮಿಕ ವ್ರತ	-	ಶರಣ ವ್ರತ
9.	ಧರ್ಮ ಸಂಸ್ಕಾರ	-	ಇಷ್ಟಲಿಂಗ ದೀಕ್ಷೆ
10.	ಧಾರ್ಮಿಕ ಕೇಂದ್ರ	-	ಬಸವ (ಅನುಭವ) ಮಂಟಪ
11.	ಧಾರ್ಮಿಕ ವಿಧಿವಿಧಾನ	-	ಗುರು - ಲಿಂಗ - ಜಂಗಮದ ಅರ್ಚನೆ
12.	ವಾರದ ಸಮಾವೇಶ	-	ಶರಣ ಸಂಗಮ - ಸಾಮೂಹಿಕ ಪ್ರಾರ್ಥನೆ
13.	ಪವಿತ್ರ ಮಾಸ	-	ಶ್ರಾವಣ ಮಾಸ
14.	ಧರ್ಮ ಧ್ವಜ	-	ಷಟ್ಕೋನ ಮಧ್ಯೆ ಇಷ್ಟಲಿಂಗ
15.	ಪರಂಪರೆ	-	ಬಸವಣ್ಣನವರೇ ಆದಿ ಗುರುವಾಗಿ ಬಂದ ಶರಣ ಪರಂಪರೆ
16.	ಧಾರ್ಮಿಕ ಸೋದರತ್ವ	-	ಜಾತಿ ವರ್ಣ ವರ್ಗ ರಹಿತ ಶರಣ ಸಮಾಜ ನಿರ್ಮಾಣ
17.	ಧರ್ಮದ ಧ್ಯೇಯ	-	ಜಾತಿ ವರ್ಣ ವರ್ಗ ರಹಿತ ಧರ್ಮ ಸಹಿತ ಕಲ್ಯಾಣ ರಾಜ್ಯ ನಿರ್ಮಾಣ

ಹೀಗೆ ಸಿದ್ಧಾಂತ, ಸಾಧನೆ, ದರ್ಶನ ಶಾಸ್ತ್ರ ದೀಕ್ಷಾ ಸಂಸ್ಕಾರ ಎಲ್ಲದರಲ್ಲೂ ಬೇರೆಯೇ ಆಗಿರುವ ಲಿಂಗಾಯತವು ಸ್ವತಂತ್ರ ಧರ್ಮ. ಆದ್ದರಿಂದ 2011ರ ಜನಗಣತಿಯಲ್ಲಿ ಧರ್ಮ ಅಂಕಣದಲ್ಲಿ Others (ಇತರರು) ಎಂದಿರುವಲ್ಲಿ ಲಿಂಗಾಯತ ಎಂದು ಮಾತ್ರ ಬರೆಸಬೇಕು.

ಹಿಂದೂ ಲಿಂಗಾಯತ ಎಂದಾಗಲಿ, ವೀರಶೈವ ಲಿಂಗಾಯತ ಎಂದಾಗಲಿ, ವೀರಶೈವ / ಲಿಂಗಾಯತ ಎಂದಾಗಲಿ ದಾಖಲಿಸಬಾರದೆಂದು ಕೋರಿಕೆ. ಈ ಬಗ್ಗೆ ಹೆಚ್ಚಿನ ಮಾಹಿತಿ ಬೇಕಾದವರು 1. ಲಿಂಗಾಯತರು ಹಿಂದುಗಳಲ್ಲ 2. ಲಿಂಗಾಯತರು ವೀರಶೈವರಲ್ಲ ಎಂಬ ಪುಸ್ತಕಗಳನ್ನು ಓದಿರಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸುವ ವಿಳಾಸಗಳು :

ಬಸವ ಧರ್ಮ ಪೀಠ (ರಿ)
ಮಹಾಮನೆ ಮಹಾಮಠ,
ಕೂಡಲ ಸಂಗಮ- 587115
ತಾ- ಹುನಗುಂದ, ಜಿ-ಬಾಗಲಕೋಟೆ
9880296108 / 9663385657

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
2035, 20ನೇ ಮುಖ್ಯರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು -560010
ದೂ : 080-23131476

ಸಂಪಾದಕೀಯ : - ಮಾತಾಜಿ

ಗೋವಂಶ ಹತ್ಯೆ ನಿಷೇಧ ಕಾನೂನು ಜಾರಿಗಾಗಿ ಆಗ್ರಹಿಸಿ ಬೃಹತ್ ರ್‍ಯಾಲಿ

ಮಾರ್ಚ್ 22ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜ್ ಮೈದಾನ ಅಥವಾ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಹಲವಾರು ಸಂಘಟನೆಗಳು ಸೇರಿ ಒಕ್ಕೂಟವನ್ನು ಮಾಡಿಕೊಂಡು ಒಂದು ಬೃಹತ್ ರ್‍ಯಾಲಿಯನ್ನು ಆಯೋಜಿಸಿದ್ದು ಇದರಲ್ಲಿ ರಾಷ್ಟ್ರೀಯ ಬಸವ ದಳವೂ ಭಾಗಿಯಾಗಿದೆ. ಈ ಬೃಹತ್ ಪ್ರತಿಭಟನಾ ಪ್ರದರ್ಶನದ ಉದ್ದೇಶ ಗೋವಂಶ ಹತ್ಯೆ ನಿಷೇಧ ಕಾನೂನನ್ನು ಜಾರಿಗೆ ತರಲು ಸರ್ಕಾರವನ್ನು ಆಗ್ರಹಿಸಲಿಕ್ಕೆ.

ಗೋವಂಶ ಹತ್ಯೆ ನಿಷೇಧ ಎಂದರೇನು?

ಗೋ ಹತ್ಯೆಯ ನಿಷೇಧ ಕಾನೂನು ಈಗ ಜಾರಿಯಲ್ಲಿದ್ದರೂ ಅದನ್ನು ಕಾನೂನು ಪಾಲಕರು ಸರಿಯಾಗಿ ಪಾಲಿಸುತ್ತಿಲ್ಲ. ಕಾನೂನಿನಲ್ಲಿ ಗೋ ಹತ್ಯೆಯನ್ನು ಮಾತ್ರ ನಿಷೇಧಿಸಲಾಗಿದೆಯಾದರೂ ಕರುಗಳು, ಎತ್ತುಗಳ ಮತ್ತು ಎಮ್ಮೆ ಕೋಣಗಳ ಹತ್ಯೆಯು ನಿರಂತರವಾಗಿ ನಡೆದಿದೆ. ಆದ್ದರಿಂದ ಈಗಿನ ಹೋರಾಟದ ಉದ್ದೇಶ ಯಾವುದೇ ವಯಸ್ಸಿನ ಹಸು, ಎತ್ತು, ಹೋರಿ, ಹಸುವಿನ ಕರುಗಳು ಮತ್ತು ಎಮ್ಮೆ, ಕೋಣ ಹಾಗೂ ಅವುಗಳ ಕರುಗಳನ್ನು ಸಹ ಹತ್ಯೆ ಮಾಡದಿರುವಂತೆ ಕಾನೂನು ರಚಿಸುವುದಕ್ಕೆ ಸರ್ಕಾರವನ್ನು ಆಗ್ರಹಿಸುವುದು.

ಈ ಕಾನೂನಿನ ಅಗತ್ಯವಿದೆಯೆ? ಖಂಡಿತಾ ಇದೆ. ಮಾಂಸಾಹಾರಿಗಳ ಸಂಖ್ಯೆ ಜಾಸ್ತಿ ಇರುವುದರಿಂದ ಈ ಕಾನೂನಿನಿಂದ ಬಹಳ ಜನರ ಆಹಾರ ಪದ್ಧತಿಗೆ ತೊಂದರೆ ಬರುತ್ತದೆ ಎಂದು ಕೆಲವರ ವಾದ. ಇಂದು ಗೋವಂಶ ವಧೆಯು ಧಾರ್ಮಿಕ ಸಮಸ್ಯೆ ಎನ್ನುವುದಕ್ಕಿಂತಲೂ ಇದು ರಾಷ್ಟ್ರೀಯ ಸಮಸ್ಯೆಯಾಗಿದೆ. ವಿದೇಶಿ ಮತ್ತು ಸ್ವದೇಶಿ ಮಾಂಸಭಕ್ಷಕರಿಗಾಗಿ ಸಾವಿರಾರು, ಲಕ್ಷಾಂತರ ಗೋವುಗಳು ಮುದಿಯಾದವು ಅಷ್ಟೇ ಅಲ್ಲ ತರುಣ ಗೋವು, ಹೋರಿಗಳು ಯಾಂತ್ರೀಕೃತ ಕಸಾಯಿ ಖಾನೆಗಳ ಬಾಯಿಗೆ ಸಿಕ್ಕುತ್ತಿವೆ. ಸರ್ಕಾರಿ ಗೋಮಾಳಗಳು ಭೂಕಬಳಿಕೆದಾರರ ಸೊತ್ತಾಗಿ, ಮತ್ತೆ ಕೆಲವು ಭೂಹಿನ ಕಾರ್ಮಿಕರಿಗೆ ವಿತರಿಸಲ್ಪಟ್ಟು ದನಗಳನ್ನು ಮೇಯಿಸಲು ತೊಂದರೆ ಯಾಗುತ್ತಿದೆ ಎಂದು, ಅತಿವೃಷ್ಟಿ ಅನಾವೃಷ್ಟಿಯಿಂದ ರೈತರು ಕಂಗಾಲಾಗಿ ದನಗಳನ್ನು ಪೋಷಿಸಲು ಕಠಿಣವಾಗುತ್ತಿದೆ ಎಂದು ರಾಸುಗಳನ್ನು ಮಾರುತ್ತಲಿದ್ದಾರೆ. ಇದರಿಂದ ಗೋವಂಶ ಸಂತತಿ ತೀವ್ರವಾಗಿ ನಶಿಸುತ್ತಿದೆ, ಕೃತಕ ಗೊಬ್ಬರದ ಬಳಕೆಯಿಂದ ಕ್ರಿಮಿನಾಶಕಗಳ ಉಪಯೋಗದಿಂದ ನೆಲ ಮತ್ತು ಜಲ ವಿಷಯುಕ್ತವಾಗುತ್ತಿವೆ. ಬೆಳೆಯುವ ತರಕಾರಿ, ಹಣ್ಣುಗಳ ಮೇಲೆ ರಾಸಾಯನಿಕ ವಸ್ತುಗಳ ಪ್ರಭಾವವು ಅಧಿಕವಾಗುತ್ತಿದೆ. ಕೃತಕ ಗೊಬ್ಬರ, ಕ್ರಿಮಿನಾಶಕಗಳಿಂದಾಗಿ ಸಾಕಷ್ಟು ಕ್ರಿಮಿಕೀಟಗಳು ನಾಶವಾಗುತ್ತಿವೆ. ಹೊಲಗದ್ದೆಗಳ ನೀರು ನದಿಗಳನ್ನು ಸೇರಿ ನದಿಗಳ ನೀರೂ ಸಹ ವಿಷಯುಕ್ತವಾಗುತ್ತಿದೆ. ಆಧುನೀಕರಣಕ್ಕೆ ಬಲಿಯಾಗಿ ರೈತರು ಭೂಮಿಯನ್ನು ಸತ್ವಹೀನವಾಗಿ ಮಾಡಿಕೊಳ್ಳುವ ಅಪಾಯವನ್ನು ಎದುರಿಸುತ್ತಿದ್ದಾರೆ.

ಈಗೀಗ ಸ್ವಲ್ಪ ಎಚ್ಚರ ಮೂಡುತ್ತಿದ್ದು ವಿದೇಶಿ ಮೂಲದಿಂದ ಬಂದುದೆಲ್ಲ ಅಮೃತ ಎಂಬ ಭ್ರಾಂತಿಗೆ ಒಳಗಾಗಿದ್ದ ಭಾರತೀಯ ರೈತರು ಚಿಂತನೆಗೆ ತೊಡಗಿದ್ದಾರೆ. ಈಗ ಸಾವಯವ ಕೃಷಿ, ನೈಸರ್ಗಿಕ ಕೃಷಿಯತ್ತ ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ನೈಸರ್ಗಿಕ ಗೊಬ್ಬರ ತಯಾರಿಕೆಗೆ ಅತೀ ಮುಖ್ಯವಾದುದು ಸಗಣಿ, ಕೃಷಿ ಪ್ರಧಾನ ದೇಶವಾದ ಭಾರತ ತಾನು ಆಹಾರಧಾನ್ಯ ಮುಂತಾದವನ್ನು ಹೊರರಾಷ್ಟ್ರಗಳಿಗೆ ಮಾರಬೇಕೇ ವಿನಾ ಹೊರರಾಷ್ಟ್ರಗಳಿಂದ ಆಮದು ಮಾಡಿಕೊಳ್ಳುವುದು ನಾಚಿಕೆಗೇಡಿನ ಸಂಗತಿಯಾಗುತ್ತದೆ. ಗೋವಂಶದ ಹತ್ಯೆ 50 ವರ್ಷಗಳಲ್ಲಿ ವಿಪರೀತ ಸಾಗಿ ಜಾನುವಾರುಗಳ ಸಂಖ್ಯೆ ಕಡಿಮೆಯಾಗಿದೆ. ದೇಶೀಯ ಮಾಂಸಾಹಾರಿಗಳ ಬಾಯಿ ಚಪಲ

ಪೂರೈಸಲಷ್ಟೇ ಅಲ್ಲದೆ ವಿದೇಶಿ ಜನರ ನಾಲಿಗೆ ಚಪಲ ತೀರಿಸಲು ಸಹ ಭಾರತೀಯ ದೇಶಿ ಹಸುಗಳು ಯಾಂತ್ರೀಕೃತ ಕಸಾಯಿಖಾನೆಗಳಲ್ಲಿ, ಅನಧಿಕೃತ ವಧಾಲಯಗಳಲ್ಲಿ ವಧಿಸಲ್ಪಟ್ಟು, ಡಬ್ಬಗಳಲ್ಲಿ ತುರುಕಲ್ಪಟ್ಟು ಹೊರದೇಶಕ್ಕೆ ರಫ್ತಾಗುತ್ತಿವೆ.

ನಮಗಾದರೂ ಬಹಳ ದಿನಗಳ ಕಾಲ ಈ ಬಗ್ಗೆ ಅರಿವಿರಲಿಲ್ಲ. ನಾವೇನು ಗೋವನ್ನು (ಸಾಂಪ್ರದಾಯಿಕ ಹಿಂದುಗಳಂತೆ) ಪೂಜಿಸುವ ನಂಬಿಕೆಯವರಲ್ಲ. ಆದರೆ ಭಾರತದ ಆಹಾರದ ಪದ್ಧತಿಯ ದೃಷ್ಟಿಯಿಂದ, ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಗೋವಂಶವು ಉಳಿಯಬೇಕೆಂಬ ನಿಲುವಿಗೆ ಬಂದಿದ್ದೇವೆ.

ಭಾರತದ ಕೆಲವು ದೇಶೀ ತಳಿಯ ಎತ್ತುಗಳು ನೋಡಲು ಅತ್ಯಂತ ಸುಂದರ; ಉಳುಮೆಗೆ ಸೂಕ್ತ. ದೇಶೀಯ ತಳಿಯ ನಾಟಿ ಹಸುಗಳು ಹೆಚ್ಚು ಹಾಲು ಕೊಡದಿದ್ದರೂ ಅವುಗಳ ಹಾಲು ಬಹುರುಚಿ, ತುಪ್ಪ ಬಲು ಕಂಪು. ಎಮ್ಮೆಗಳ ಹಾಲು - ತುಪ್ಪದ ರುಚಿಯಂತೂ ಹೇಳುವಂತೆಯೇ ಇಲ್ಲ. ದೇಶಿ ತಳಿಗಳನ್ನು ಉಳಿಸಿಕೊಂಡು, ಬೆಳೆಸಬೇಕಾದುದು ಅತ್ಯಂತ ಅಗತ್ಯವೆನಿಸುತ್ತಿದೆ. ಆದ್ದರಿಂದ ರಾಷ್ಟ್ರೀಯ ಹಿತದೃಷ್ಟಿಯಿಂದ ಗೋವು ಒಂದೇ ಅಲ್ಲ ಗೋವಂಶದ ಇತರ ಅಂಗಗಳಾದ ಎತ್ತು (ಹೋರಿ), ಕರು, ಎಮ್ಮೆ ಕೋಣ ಇವೆಲ್ಲವನ್ನು ರಕ್ಷಿಸಬೇಕಾದುದು ಇಂದಿನ ಆವಶ್ಯಕತೆಯಾಗಿದೆ.

ಗೋವಿನ ಸಗಣಿ ಮಾತ್ರವಲ್ಲ ಅದರ ಮೂತ್ರವು ಅತ್ಯಂತ ಉಪಯುಕ್ತ. ಇದರಿಂದ ಅನೇಕ ಔಷಧಿಗಳನ್ನು ತಯಾರು ಮಾಡಲಾಗುತ್ತಿದೆ. ಕೆಲವರು ಕೇಳುತ್ತಾರೆ ಮುದಿಯಾದ ಗೋವುಗಳನ್ನು ಕಸಾಯಿಖಾನೆಗೆ ಕೊಡದೆ ಏನು ಮಾಡಬೇಕು ಎಂದು. ಜೀವನ ಪರ್ಯಂತರ ದುಡಿದ ಎತ್ತು ಆಕಳು ಮುಂತಾದುವನ್ನು ಹಿಂದಿನ ಕಾಲದಲ್ಲಿ ಸತ್ತಾಗ ಸಮಾಧಿ ಮಾಡಿ, ಮೇಲೊಂದು ಗಿಡವನ್ನು ನೆಡುತ್ತಿದ್ದುದನ್ನು ಹಳ್ಳಿಗಳಲ್ಲಿ ಕಂಡಿದ್ದೇನೆ. ಅಧ್ಯಯನದ ಪ್ರಕಾರ ಒಂದು ಗೊಡ್ಡಾದ, ನಿಷ್ಪ್ರಯೋಜಕವಾದ ಹಸು, ಎತ್ತು, ಎಮ್ಮೆ ಕೋಣ ಕೊಡುವ ಮೂತ್ರ ಮತ್ತು ಸಗಣಿ ಅದನ್ನು ಸಾಕುವ ಖರ್ಚಿಗಿಂತ ಹೆಚ್ಚಿನ ಉತ್ಪನ್ನವನ್ನು ಕೊಡುತ್ತದೆಯಂತೆ. ಅವುಗಳನ್ನು ಸದ್ಬಳಕೆ ಮಾಡುವ ಯೋಜನೆ ಕಂಡು ಹಿಡಿಯಬೇಕಷ್ಟೆ.

ಕೆಲವರು ನಿನ್ನೆ (4-2-2010) ಪತ್ರಿಕೆಗಳಲ್ಲಿ ಆಕ್ರೋಶ ವ್ಯಕ್ತಪಡಿಸಿ, ತಮ್ಮ ಮಾಂಸಾಹಾರ ಪದ್ಧತಿಗೆ ಈ ಮಸೂದೆಯಿಂದ ಚ್ಯುತಿ ಬರುತ್ತದೆ ಎಂದು ಗುಡುಗಿದ್ದಾರೆ. ಅವರೇನಾದರೂ ಸಸ್ಯಹಾರಿಗಳ ಅನ್ನ-ಪುಳಿಚಾರಿಗೆ ಅಡ್ಡಿ ಮಾಡಿದ್ದೇವಾ ಎಂದು ಕೇಳಿದ್ದಾರೆ. ಮಾಂಸಾಹಾರಿಗಳು ಕೇವಲ ಅದರ ಮೇಲೆಯೇ ಬದುಕಲಾರರು, ಸಸ್ಯಾಹಾರ ಬೇಕೇಬೇಕು. ಆದರೆ ಸಸ್ಯಾಹಾರಿಗಳು ಮಾಂಸಾಹಾರವಿಲ್ಲದೆ ಇರಬಲ್ಲರು. ಸದ್ಯದ ಆಗ್ರಹ ಕೇವಲ ಗೋವಂಶ ಹತ್ಯೆ ನಿಷೇಧಕ್ಕಾಗಿ ಮಾತ್ರ. ಅವರಿಗೆ ತಿನ್ನಲು ಬೇರೆ ಅನೇಕ ಪ್ರಾಣಿಗಳು ಇದ್ದೇ ಇವೆಯಷ್ಟೆ. ಮಾಂಸಾಹಾರವನ್ನು ಪೂರಾ ಬಿಟ್ಟರಂತೂ ಬಹಳ ಒಳ್ಳೆಯದು. ಬರ್ನಾಡ್ ಶಹಾ ಹೇಳುವಂತೆ "ನನ್ನ ಹೊಟ್ಟೆ ಒಂದು ಸ್ಮಶಾನವಲ್ಲ, ಸತ್ತ ಪ್ರಾಣಿಗಳನ್ನು ತುಂಬಲು" ಎಂಬುದು ಪರಮಸತ್ಯ.

10-2-10ರಂದು ಸಂಪುಟ ಸಭೆಯಲ್ಲಿ ಗೋವಂಶ ಹತ್ಯೆ ನಿಷೇಧಕ್ಕೆ ಒಮ್ಮತದ ನಿರ್ಣಯವನ್ನು ಕೈಗೊಳ್ಳಲಾಗಿದೆ. ಮುಂದಿನ ಅಧಿವೇಶನದಲ್ಲಿ ವಿಧಾನಸಭೆಯಲ್ಲಿ ಆಡಳಿತ ಪಕ್ಷದಿಂದ ಮಂಡನೆಯಾಗಲಿದೆ. ಸರ್ಕಾರವನ್ನು ಬೆಂಬಲಿಸಲು ಮಾರ್ಚ್ 22ರಂದು ನಡೆಯಲಿರುವ ಬೃಹತ್ ರ್‍ಯಾಲಿಯಲ್ಲಿ ಯಾರ್‍ಯಾರಿಗೆ ಆಸಕ್ತಿ ಮತ್ತು ಕಳಕಳಿ ಇದೆಯೋ ಅವರೆಲ್ಲರೂ ಭಾಗವಹಿಸಿರಿ. ರಾಷ್ಟ್ರೀಯ ಬಸವ ದಳದವರಿದ್ದರೆ ಸ್ಕಾರ್ಫ್ ಹಾಕಿಕೊಂಡು ಭಾಗವಹಿಸಿರಿ. ಕೆಲವು ಮೌಲ್ಯಗಳನ್ನು ಉಳಿಸಿಕೊಳ್ಳಲು ಹೋರಾಟ, ಪ್ರತಿಭಟನೆ ಅತ್ಯಗತ್ಯ. ವಿಧಾನಸಭೆಯಲ್ಲಿ ಈ ವಿಷಯವನ್ನು ಆಡಳಿತ ಪಕ್ಷವು ಮಂಡಿಸಿದಾಗ ಈ ಮಸೂದೆಗೆ ಬೆಂಬಲ ನೀಡಲು ಗ್ರಹಿಸಿ ನಿಮ್ಮ ಕ್ಷೇತ್ರದ ಶಾಸಕರಿಗೆ ಮನವಿ ಕೊಡಿರಿ.

"ಲಿಂಗಾಯತ" ಜನಗಣತಿ ಕರಪತ್ರಿಕೆಗಳನ್ನು ಹಂಚಲಿಕ್ಕಾಗಿ ಮುದ್ರಿಸಿ ಕಳಿಸಲಾಗುವುದು. ಅದರಲ್ಲಿ ದಾನಿಗಳ ಹೆಸರನ್ನು ಕಾಣಿಸಲಾಗುವುದು. ಆಸಕ್ತರು ಹಣ ಕಳಿಸಿ ಆರ್ಡರ್ ಕೊಡಿರಿ.

2000 (ಎರಡು ಸಾವಿರ) ಪ್ರತಿಗೆ	350 ರೂ (ಅಂಚೆ ವೆಚ್ಚ ಸೇರಿ)
5000 (ಐದು ಸಾವಿರ) ಪ್ರತಿಗೆ	575 ರೂ (ಸಾಗಾಣಿಕ ವೆಚ್ಚ ಸೇರಿ)
10000(ಹತ್ತು ಸಾವಿರ) ಪ್ರತಿಗೆ	1100ರೂ (ಸಾಗಾಣಿಕ ವೆಚ್ಚ ಸೇರಿ)

ದಾಸೋಹಿಗಳಿಗೆ ಮತ್ತು ಧರ್ಮಪ್ರಚಾರಕರಿಗೆ ಕರೆ

- ಮಾತಾಜಿ

2010ನೆಯ ಇಸವಿ ಪೂರ್ತಿ ಜನಗಣತಿ ಜಾಗೃತಿ ವರ್ಷವನ್ನಾಗಿ ರೂಪಿಸಲು ನಿರ್ಧರಿಸಲಾಗಿದೆ. 2011ರಲ್ಲಿ ಭಾರತ ಸರ್ಕಾರವು ಜನಗಣತಿಯನ್ನು ಮಾಡಲಿದೆ. ಲಿಂಗಾಯತ ಧರ್ಮೀಯರು "ಲಿಂಗಾಯತ" ಎಂದು ಧರ್ಮ (Religion) ಅಂಕಣದಲ್ಲಿ ಬರೆಸಬೇಕೇ ವಿನಾ ಹಿಂದು ಲಿಂಗಾಯತ, ವೀರಶೈವ, ವೀರಶೈವ ಲಿಂಗಾಯತ ಇತ್ಯಾದಿ ಬರೆಸಬಾರದು ಎಂದು ಮನವರಿಕೆ ಮಾಡಲು ಕೆಲವೊಂದು ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಅದರಲ್ಲಿ ಬಸವ ಧರ್ಮ ಪೀಠದಿಂದ ಎರಡು ಮುಖ್ಯ ಕಾರ್ಯಕ್ರಮಗಳೆಂದರೆ

1. ಜ್ಯೋತಿ ಯಾತ್ರೆ 2. ಪ್ರಚಾರಕರ ಮೂಲಕ ಜಾಗೃತಿ

ಪೂಜ್ಯ ಮಾತಾಜಿಯವರು ಮತ್ತು ಪೂಜ್ಯ ಸ್ವಾಮೀಜಿಗಳ ನೇತೃತ್ವದಲ್ಲಿ ವಿವಿಧ ರಾಜ್ಯಗಳಲ್ಲಿ ಲಿಂಗಾಯತ ಧರ್ಮ ಜಾಗೃತಿ ಯಾತ್ರೆ ಹಮ್ಮಿಕೊಳ್ಳುವುದು. ಸ್ವಯಂ ಸೇವಕ ಧರ್ಮ ಪ್ರಚಾರಕರನ್ನು ನೇಮಕ ಮಾಡಿಕೊಂಡು ವಿವಿಧ ಜಿಲ್ಲೆಗಳಲ್ಲಿ ಪ್ರಚಾರ ಮಾಡಿಸುವುದು.

ಶರಣ ಬಂಧುಗಳ ಭಾಗಿತ್ವ

ಈ ಕಾರ್ಯದಲ್ಲಿ ಶರಣ ಬಂಧುಗಳು ಭಾಗಿಗಳಾಗಬೇಕು.

1. ಲಿಂಗಾಯತ ಎಂದು ಬರೆಸಲು ಕರೆ ಎಂಬ ಕರಪತ್ರಗಳನ್ನು (ಶರಣ ಮೇಳದಲ್ಲಿ ಹಂಚಲಾಗಿದೆ) ಕನಿಷ್ಠ 2000, 5000, 10,000 ಹೀಗೆ ಮುದ್ರಿಸಲು ದೇಣಿಗೆ ಕೊಡುವ ಮೂಲಕ.
2. ತಾವೂ ತಮ್ಮ ಬಂಧು-ಬಳಗ, ಮಿತ್ರರಿಗೆ ಕರಪತ್ರಗಳನ್ನು ಕಳಿಸುವುದು.
3. ಸಭೆಸಮಾರಂಭ, ಮದುವೆ, ಲಿಂಗೈಕ್ಯ ಸಂಸ್ಮರಣೆ ಇತ್ಯಾದಿ ನಡೆದಲ್ಲಿ ಕರಪತ್ರ ವಿತರಿಸುವುದು.
4. ಶರಣ ಶರಣೆಯರು ಯಾರಿಗೆ ಸಾಧ್ಯವೋ ಅವರು ಜ್ಯೋತಿ ಯಾತ್ರೆಯಲ್ಲಿ ಭಾಗಿಗಳಾಗುವುದು. ಜ್ಯೋತಿ ಯಾತ್ರೆಯಲ್ಲಿ ಸಂಚರಿಸಲು ಬಹಳಷ್ಟು ಶರಣ ಬಂಧುಗಳ ಅಗತ್ಯವಿರುತ್ತದೆ.
5. 20 ರಿಂದ 50 ವರ್ಷ ವಯಸ್ಸಿನ ಅವಧಿಯವರು ತಾವೂ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಳ್ಳಬಹುದು. ಇವರಿಗೆ ಪ್ರತಿ ತಿಂಗಳು 3000 (ಮೂರು ಸಾವಿರ) ರೂಗಳ ಗೌರವ ಧನವನ್ನು 2010ನೆಯ ಇಸವಿ ಪೂರ್ತಿ ಕೊಡಲಾಗುವುದು. ಇವರಿಗೆ ಬೇರೆ ಬೇರೆ ಜಿಲ್ಲೆಗಳಿಗೆ ಆಯಾ ಜಿಲ್ಲೆಯ ರಾಷ್ಟ್ರೀಯ ಬಸವ ದಳದವರ ಮಾರ್ಗದರ್ಶನದಲ್ಲಿ ಪ್ರಚಾರ ಕಾರ್ಯ ಮಾಡಲು ಕಳಿಸಿಕೊಡಲಾಗುವುದು. ಊಟ-ವಸತಿಯ ಜವಾಬ್ದಾರಿ ಸ್ಥಳೀಯರದು. ಆಸಕ್ತಿ ಇರುವವರು ಅರ್ಜಿ ಸಲ್ಲಿಸಬಹುದು. ದೂರವಾಣಿ ಮೂಲಕ ಮಾತನಾಡಬಹುದು.
6. ಶ್ರೀಮಂತರು ಒಬ್ಬ ಪ್ರಚಾರಕರ ಮಾಸಿಕ ಗೌರವ ಧನ ಕೊಡಲು ಸಂಕಲ್ಪ ಮಾಡಬೇಕು. ಇನ್ನು ಸುಮಾರು 10 ತಿಂಗಳು, 30,000 (ಮೂವತ್ತು ಸಾವಿರ) ಆಗುವುದು. ಅಂಥ ಉತ್ಸಾಹಿ ಪ್ರಚಾರಕರು ದೊರೆತಾಗ ಅವರ ಪೂರ್ಣ ವಿವರವನ್ನು ದಾನಿಗಳಿಗೆ ಕಳಿಸಿಕೊಡಲಾಗುವುದು. ಆದ್ದರಿಂದ ದಾನಿಗಳು ಸದ್ಯದಲ್ಲಿ ತಮ್ಮ ಹೆಸರನ್ನು ಬರೆಸಿ ಇಟ್ಟದ್ದರೆ ಸಾಕು ಮೊದಲೇ ಹಣ ಕೊಡಬೇಕಿಲ್ಲ. ಪ್ರತಿ ತಿಂಗಳು ಪ್ರಚಾರಕರಿಗೆ ನೇರವಾಗಿ ಕೊಡಬಹುದು.

ಈ ಒಂದು ವರ್ಷದ ಅವಧಿಯನ್ನು ಲಿಂಗಾಯತ ಧರ್ಮ ಜಾಗೃತಿ ಕಾರ್ಯಕ್ಕೆ ತನುವಿನಿಂದ, ಮನದಿಂದ, ಧನದಿಂದ ದುಡಿದು, ಸಾರ್ಥಕ ಪಡಿಸಿಕೊಳ್ಳಲು ಸ್ವಯಂ ಸೇವಕರು ಮತ್ತು ದಾನಿಗಳು ಮುಂದೆ ಬರಬೇಕೆಂದು ಆಶಿಸುತ್ತೇವೆ. ಶರಣ ಚನ್ನಬಸವಣ್ಣನವರು ಒಬ್ಬರ ಖರ್ಚು ಕೊಡಲು ನಿರ್ಧರಿಸಿದ್ದಾರೆ.

ದಿ.5-02-2010

ಸಂಪರ್ಕಿಸುವ ದೂರವಾಣಿ
080- 22923736
9663385657
94495 88669

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಬಸವ ಮಂಟಪ, 2035
20ನೇ ಮುಖ್ಯ ರಸ್ತೆ, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು- 560010

ಗಂಗಾವತಿಯ ಸಮಗಾರ ಹರಳಯ್ಯ ಸಮಾಜದವರ ಮಾದರಿ ಕೃತಿ

- ಚನ್ನಬಸವಣ್ಣ

ಕೊಪ್ಪಳ ಜಿಲ್ಲೆ ಗಂಗಾವತಿಯ ರಾಷ್ಟ್ರೀಯ ಬಸವ ದಳದವರು ಶರಣ. ಹರಳಯ್ಯ ಸಮಾಜದವರೊಡನೆ ಒಡನಾಡುತ್ತ ಬಸವ ಮಂಟಪವನ್ನು ಕಟ್ಟಲು ಪ್ರೇರಣೆ ನೀಡಿದರು. ಅವರುಗಳು ಸಂತೋಷದಿಂದ ಒಪ್ಪಿ ಬಸವಾಲಯ (ಗರ್ಭಗುಡಿ)ವನ್ನು ಮುಂದೆ ಒಂದು ಪ್ರಾರ್ಥನಾ ಮಂದಿರವನ್ನು ನಿರ್ಮಿಸಿದರು. ಅದಕ್ಕೆ ಶ್ರೀಗುರು ಬಸವ ಮಂಟಪ ಎಂದು ಹೆಸರಿಟ್ಟು ಅದರೊಳಗೆ ಶ್ರೀಗುರು ಬಸವಣ್ಣನವರ ಮೂರ್ತಿಯನ್ನು ಪ್ರತಿಷ್ಠಾಪಿಸಲು ನಿರ್ಧರಿಸಿದರು. ದಿ.25-1-2010 ರಂದು ಬಸವ ಧರ್ಮದ ಮಹಾಜಗದ್ಗುರು ಪೀಠದ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರನ್ನು ಮತ್ತು ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ದ್ವಿತೀಯ ಪೀಠಾಧೀಶರಾದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರನ್ನು ಗೌರವ ಪೂರ್ವಕವಾಗಿ ಬರಮಾಡಿಕೊಂಡು ಮೆರವಣಿಗೆಯಲ್ಲಿ ಬಸವ ಮೂರ್ತಿಯನ್ನು ಮತ್ತು ಪೂಜ್ಯ ಮಾತಾದ್ವಯರನ್ನು ನಗರದ ಪ್ರಮುಖ ಬೀದಿಗಳಲ್ಲಿ ಕರೆದುಕೊಂಡು ಶ್ರೀಗುರು ಬಸವ ಮಂಟಪಕ್ಕೆ ಬಂದರು. ಶ್ರೀಗುರು ಬಸವ ಮಂಟಪದ ಶಿಲಾಫಲಕವನ್ನು ಪೂಜ್ಯರ ಕಡೆಯಿಂದ ಅನಾವರಣ ಮಾಡಿಸಿದರು. ನಂತರ ಸಭೆಯು ಜರುಗಿತು. ಅಲ್ಲಮ ಪ್ರಭುದೇವರ ನುಡಿ, ''ಗುಹೇಶ್ವರಾ, ಮಹಾಮಹಿಮ ಸಂಗನ ಬಸವಣ್ಣನು ಎನಗೆಯೂ ಗುರು, ನಿನಗೆಯೂ ಗುರು, ಜಗವೆಲ್ಲಕ್ಕೂ ಗುರುಕಾಣಾ.'' ಎಂದು ಹೇಳಿದಂತೆ ಗುರು ಬಸವಣ್ಣನವರು ಎಲ್ಲರಿಗೂ ಗುರು. ಇದನ್ನು ಸಾಬೀತು ಮಾಡುವಂತೆ ಸಮಗಾರ ಹರಳಯ್ಯ ಸಮಾಜದವರು ಶ್ರೀ ಗುರು ಬಸವ ಮಂಟಪವನ್ನು ಕಟ್ಟಿದ್ದಾರೆ. ಇದು ಎಲ್ಲ ಜಾತಿ ಜನಾಂಗದವರಿಗೆ ಮಾದರಿ. ಏಕೆಂದರೆ ಗುರು ಬಸವಣ್ಣನವರು ಎಲ್ಲ ಮಾನವರ ಉದ್ಧಾರಕ್ಕಾಗಿ ಶ್ರಮಿಸಿದವರು. ಮೇಲ್ಜಾತಿಯವರು ತೋರುವ ತಿರಸ್ಕಾರದಿಂದ, ಸಾಮಾಜಿಕ ಅವಹೇಳನದಿಂದ ನೊಂದು ದಲಿತರು ಕ್ರೈಸ್ತ, ಇಸ್ಲಾಂಗೆ ಮತಾಂತರವಾಗುತ್ತಿದ್ದಾರೆ. ಈ ತಪ್ಪು ಕೆಲಸವನ್ನು ಮಾಡಬಾರದು. ನಾವು ಏಸುಕ್ರಿಸ್ತರನ್ನು, ಮೊಹಮದ್ ಪೈಗಂಬರರನ್ನೂ ಗೌರವಿಸುತ್ತೇವೆ. ಆದರೆ ನಮ್ಮ ದೇಶದ ಹಿತದೃಷ್ಟಿಯಿಂದ ವಿದೇಶಿ ಧರ್ಮಗಳಿಗೆ ಆಗುವ ಮತಾಂತರವನ್ನು ಇಷ್ಟಪಡುವುದಿಲ್ಲ. ದಲಿತರ ಉದ್ಧಾರಕ್ಕಾಗಿಯೇ ಕಲ್ಯಾಣ ಕ್ರಾಂತಿ; ಧರ್ಮಪಿತ ಬಸವಣ್ಣನವರ ಗಡಿಪಾರು, ಹರಳಯ್ಯ -ಮಧುವರಸರ-ಶೀಲವಂತರಿಗೆ ಎಳೆಹೂಟೆ ಶಿಕ್ಷೆ, ಅಸಂಖ್ಯಾತರ ವಧೆ ನಡೆಯಿತು. ಮಾತೃಹೃದಯಿ ಬಸವಣ್ಣನವರ ಕಳಕಳಿಯನ್ನರಿತು ನೀವು ಈ ಧರ್ಮಕ್ಕೆ ಬನ್ನಿರಿ. ಒಂದೇ ಸಲಕ್ಕೆ ಮಾಂಸಾಹಾರ ತೊರೆಯಲಾರದವರು ಮೊದಲು ಬಸವಾಯತ ದೀಕ್ಷೆ ಪಡೆಯಿರಿ. ರುದ್ರಾಕ್ಷಿ ಧರಿಸಿ, ದಿನಾಲು ಜಪ ಮಾಡಿರಿ. ಮಾಂಸಾಹಾರ ಬಿಟ್ಟು ಸಸ್ಯಾಹಾರಕ್ಕೆ ಬದ್ಧರಾಗುವ ಸಂಕಲ್ಪ ಮಾಡಿದಾಗ ಇಷ್ಟಲಿಂಗ ದೀಕ್ಷೆಯನ್ನು ಪಡೆಯಬಹುದು. ಭಾರತದಲ್ಲೇ ಹುಟ್ಟಿದ ಯಾವ ಧರ್ಮವನ್ನು ಬೇಕಾದರೂ ಸ್ವೀಕಾರ ಮಾಡಿರಿ. ಕ್ರಾಂತಿಪುರುಷ ಬಸವಣ್ಣನವರ ಕಳಕಳಿ, ಮಾತೃಹೃದಯವನ್ನು ಅರ್ಥಮಾಡಿಕೊಳ್ಳಿರಿ.'' ಎಂದು ಪೂಜ್ಯ ಮಾತಾಜಿಯವರು ಮಾತನಾಡಿದರು.

ದಿ. 26-1-10ರಂದು ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರು ಬೆಳಿಗ್ಗೆ ಬಸವೇಶ್ವರ ಪೂಜಾವ್ರತವನ್ನು ನೆರವೇರಿಸಿದರು. ನಂತರ ಪೂಜ್ಯ ಮಾತಾಜಿಯವರು 108 ಮಂತ್ರ ಹೇಳಿ ಶರಣರಿಂದ ಗುರುಬಸವಣ್ಣನವರ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿಸಿದರು. ಬಸವ ಮೂರ್ತಿಗೆ ಚಿತ್ಕಳೆ ತುಂಬಿ ಮಹಾಮಂಗಲವನ್ನು ಮಾಡಲಾಯಿತು. ನಂತರ ಅನುಭವ ಗೋಷ್ಠಿ ಜರುಗಿತು. ಪೂಜ್ಯ ಮಾತಾಜಿಯವರ ದಿವ್ಯ ಸನ್ನಿಧಿಯಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಬಸವ ಧ್ವಜಾರೋಹಣ ಮಾಡಿದರು. ಗಂಗಾವತಿಯ ಶಾಸಕ ಪರಣ್ಣ ಮುನವಳ್ಳಿ, ಗಣ್ಯರಾದ ಅನ್ಸಾರಿ, ಸಮಗಾರ ಹರಳಯ್ಯ ಸಮಾಜದ ರಾಜ್ಯಾಧ್ಯಕ್ಷರಾದ ಹಾವೇರಿಯ ಜಗದೀಶ ಬೆಟಗೇರಿ ಮತ್ತು ಇತರ ಗಣ್ಯರನ್ನು ಶಾಲು ಹೊದಿಸಿ ಸತ್ಕರಿಸಲಾಯಿತು. ಪೂಜ್ಯ ಶ್ರೀ ಮಾತೆ ಸತ್ಯಾದೇವಿಯವರಿಂದ ಇಷ್ಟಲಿಂಗ ದೀಕ್ಷೆಯನ್ನು ಕೆಲವರು ಪಡೆದರು, ನೂರಾರು ಜನ ಬಸವಾಯತ ದೀಕ್ಷೆಯನ್ನು ಪಡೆದರು.

ದೀಕ್ಷೆಯನ್ನು ಪಡೆದುಕೊಂಡವರಿಗೆ ಪೂಜ್ಯ ಮಾತಾಜಿ ಹೀಗೆ ಸಂದೇಶ ನೀಡಿದರು: ''ಲಿಂಗಾಯತ ದೀಕ್ಷೆಯನ್ನು ಅನೇಕರು ಪಡೆದಿದ್ದೀರಿ. ತಪ್ಪದೆ ಪೂಜೆ ಮಾಡಿರಿ. ವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆ ಮಾಡಿರಿ. ನಿಮ್ಮ ಮಕ್ಕಳನ್ನು ತಪ್ಪದೆ ಬಸವ ಮಂಟಪಕ್ಕೆ ಕರೆತನ್ನಿ. ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳು ಈ ಬಸವ ಮಂಟಪಕ್ಕೆ ಬರಬೇಕು. ನೀವು ಅವರು ಕಟ್ಟಿರುವ

ಬಸವ ಮಂಟಪಕ್ಕೆ ಪ್ರಾರ್ಥನೆಗೆ ಹೋಗಬೇಕು. ನೀವು ನಿಮ್ಮ ಮಕ್ಕಳಿಗೆ ತಪ್ಪದೆ ಶಾಲೆ ಕಲಿಸಿರಿ. ಕರ್ನಾಟಕ ಸರ್ಕಾರವು ಎಲ್ಲವನ್ನು ಉಚಿತವಾಗಿ ಕೊಟ್ಟು ಸರ್ಕಾರಿ ಶಾಲೆಗಳಲ್ಲಿ ಕಲಿಸುತ್ತದೆ. ನಿಮಗೆ ಇನ್ನೂ ಹೆಚ್ಚಿನ ಸೌಲಭ್ಯಗಳಿವೆ, ಸ್ಕಾಲರ್‌ಷಿಪ್ ಇವೆ. ತಾಯಿ ತಂದೆ ಎಷ್ಟೇ ಕಷ್ಟಪಟ್ಟಾದರೂ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ವಿದ್ಯೆಯೇ ದೊಡ್ಡ ಸಂಪತ್ತು.

ಲಿಂಗಾಯತ ಧರ್ಮ ಸ್ವೀಕಾರ ಮಾಡಿದ ಮಾತ್ರಕ್ಕೆ ಅಥವಾ ಬೇರೆಯವರು ಚಪ್ಪಲಿ ಹೊಲಿಯುವ ಕಸುಬು ಕೀಳು ಎಂದು ಅಂದ ಮಾತ್ರಕ್ಕೆ ನೀವು ನೊಂದುಕೊಳ್ಳಬೇಡಿರಿ. ಇದು ಪವಿತ್ರ ಕಾಯಕ. ಎಲ್ಲರ ಪಾದಗಳಿಗೆ ರಕ್ಷಣೆ ಕೊಡುವ ಕಾಯಕ. ಯಾರಿಗೇನೂ ಮೋಸ ಮಾಡುವುದಿಲ್ಲ. ಪ್ರಾಣಿಯನ್ನು ಕೊಂದು ಹಿಂಸೆ ಮಾಡುವುದಿಲ್ಲ. ಸತ್ತ ದನದ ಚರ್ಮದಿಂದ ಚಪ್ಪಲಿ ಹೊಲಿಯುತ್ತೀರಿ. ಲಿಂಗಾಯತ ಧರ್ಮವನ್ನು ಸ್ವೀಕರಿಸಿದ್ದರಿಂದ ಮಾಂಸಾಹಾರ ಬಿಟ್ಟರೆ ಸಾಕು, ಚಪ್ಪಲಿ ಹೊಲಿಯುವ ಕಸುಬು ಬಿಡಬೇಕಿಲ್ಲ. ಇವತ್ತು ಮೇಲ್ಜಾತಿಯವರೆಂದು ಹೇಳಿಕೊಳ್ಳುವ ಬ್ರಾಹ್ಮಣರು, ಲಿಂಗಾಯತರು ಪಾಪದ ಭಯವಿಲ್ಲದೆ ಸಾವಿರಾರು ಕೋಳಿಗಳ ಜೀವ ಹತ್ಯೆಗೆ ಕಾರಣವಾಗುವ ಕೋಳಿ ಫಾರಂ ನಡೆಸುತ್ತಾರೆ. ಅಂಥ ಪಾಪವನ್ನೇನು ನೀವು ಮಾಡುತ್ತಿಲ್ಲವಷ್ಟೆ?

ಇನ್ನು ಶಾಲೆಯ ಪ್ರವೇಶ ಪತ್ರ ಮುಂತಾಗಿ ತುಂಬುವಾಗ ಲಿಂಗಾಯತ ಎಂದು ತುಂಬಿರಿ ಎಂದು ನಿಮಗೆ ಹೇಳುವ ಧೈರ್ಯ ನಮಗಿಲ್ಲ. ಏಕೆಂದರೆ ನಿಮ್ಮದು ಪರಿಶಿಷ್ಟ ಜಾತಿಯಲ್ಲಿ ಸೇರ್ಪಡೆಯಾಗಿ ವಿಶೇಷ ಸವಲತ್ತು ಪಡೆಯುತ್ತಿರುವ ವರ್ಗ. ಇದರಿಂದ ವಂಚಿತರನ್ನಾಗಿ ಮಾಡಲು ನಮಗೆ ಇಷ್ಟವಿಲ್ಲ. ಸಾಮಾಜಿಕ, ಧಾರ್ಮಿಕ ಸ್ಥಾನಮಾನಕ್ಕಾಗಿ ಇಷ್ಟಲಿಂಗದೀಕ್ಷೆ ಪಡೆದಿದ್ದೀರಿ. ಸದ್ಯ ಸವಲತ್ತುಗಳಿಗಾಗಿ ನಿಮ್ಮ ಪೂರ್ವಜಾತಿಯನ್ನೇ ಬರೆಸಿರಿ. ನಾವು ಒಂದು ರಾಜಮಾರ್ಗವನ್ನು ಹುಡುಕುತ್ತಿದ್ದೇವೆ. ಲಿಂಗಾಯತ ಧರ್ಮ ಒಂದು ಸ್ವತಂತ್ರ ಧರ್ಮ ಎಂದು ಸಾಂವಿಧಾನಾತ್ಮಕ ಮನ್ನಣೆ ಪಡೆದು, ಅದಕ್ಕೆ ಅಲ್ಪಸಂಖ್ಯಾತ ಧರ್ಮದ ಸ್ಥಾನ ಸಿಕ್ಕರೆ ಆಗ ಇದರೊಳಗೆ ಬರುವ ಎಲ್ಲ ಜಾತಿ -ಉಪಜಾತಿಗಳವರಿಗೆ ಸಮಾನ ಮತ್ತು ವಿಶೇಷ ಸೌಲಭ್ಯ ಸಿಗುತ್ತದೆ.

ಏನು ಮಾಡುವುದು, ವೀರಶೈವವಾದಿಗಳು ಇದಕ್ಕೆ ದೊಡ್ಡ ಅಡ್ಡಿಯಾಗಿದ್ದಾರೆ. ಏಕೆಂದರೆ ವೀರಶೈವ ಹಿಂದು ಧರ್ಮದ ಒಂದು ಅಂಗ, ಅದು ಶೈವದ ಒಂದು ಶಾಖೆ. ಲಿಂಗಾಯತ ಧರ್ಮ ಸ್ವತಂತ್ರ ಧರ್ಮ. ಯಾವ ಗುಣಲಕ್ಷಣಗಳಿಂದ ಭಾರತದಲ್ಲೇ ಹುಟ್ಟಿದ್ದರೂ ಜೈನ, ಬೌದ್ಧ, ಸಿಖ್ ಧರ್ಮಗಳು ಸ್ವತಂತ್ರ ಮತ್ತು ಅಲ್ಪಸಂಖ್ಯಾತ ಧರ್ಮಗಳೆಂದು ಪರಿಗಣಿತವಾಗಿವೆಯೋ ಅದೇ ಕಾರಣಕ್ಕೆ ಲಿಂಗಾಯತ ಧರ್ಮವೂ ಮಾನ್ಯತೆ ಪಡೆಯಬೇಕು. ವೀರಶೈವವನ್ನು ತಂದು ತೂರಿಸಿ ಅಖಿಲ ಭಾರತ ವೀರಶೈವ ಮಹಾಸಭೆ ಮಹಾನ್ ಅಪರಾಧವನ್ನು ಮಾಡುತ್ತಿದೆ. ಇದರಿಂದ ಯಾರ ಹಿತಸಾಧನೆಯಾಗುತ್ತದೆಯೋ ತಿಳಿಯುತ್ತಿಲ್ಲ. ನಿನ್ನೆ ಮೆರವಣಿಗೆಯಲ್ಲಿ ಬರುವಾಗ, ಇಂದು ಕಾರಿನಲ್ಲಿ ಬರುವಾಗ ನೋಡಿದೆ, ಚನ್ನಬಸವೇಶ್ವರ ಲಿಂಗಾಯತ ಖಾನಾವಳಿ ಎಂಬ ಬೋರ್ಡಿತ್ತು. ಲಿಂಗಾಯತ ಖಾನಾವಳಿ ಎಂದೇ ಇದೆ; ಏಕೆ ವೀರಶೈವ ಬಳಕೆಯಾಗಿಲ್ಲ? ಶ್ರೀ ಭೀಮಣ್ಣ ಖಂಡ್ರೆಯವರ ಶಾಲೆಯ ಸರ್ಟಿಫಿಕೇಟಲ್ಲಿ ಲಿಂಗಾಯತ ಎಂದೇ ಇದೆ. ಇದು ಗೊತ್ತಿದ್ದೂ ಅವರು ವೀರಶೈವ ಬಳಸಿ ಲಿಂಗಾಯತ ಧರ್ಮ - ಸಮಾಜಗಳಿಗೆ ಅನ್ಯಾಯ ಮಾಡುವುದೇಕೆ?

ಆದ್ದರಿಂದ ಮುಂಬರುವ 2011ರ ಜನಗಣತಿಯಲ್ಲಿ ಸಂಕೇತಾಕ್ಷರಗಳ ಬದಲಿಗೆ ಸಂಖ್ಯೆಗಳನ್ನು ಕೊಡುವ ಸಂಭವವಿದೆ. ಮಕ್ಕಳ ಗಣತಿ ಮಾಡಿದ ಫಾರ್ಮಿನಲ್ಲಿ ಹಿಂದು, ಮುಸ್ಲಿಂ ಕ್ರೈಸ್ತ, ಬೌದ್ಧ ಜೈನ, ಸಿಖ್ ಜೊತೆಗೆ ಹೊಸದಾಗಿ ಪಾರ್ಸಿ ಸೇರ್ಪಡೆಯಾಗಿ, ಮತ್ತು ಇತರರು (and others) ಎಂಬ ಅಂಕಣ 8 ನೆಯದಾಗಿದೆ. ಇದರಲ್ಲೇ ಲಿಂಗಾಯತರು ಲಿಂಗಾಯತ ಎಂದು ಬರೆಸಬೇಕು. ಮುಸ್ಲಿಂ, ಕ್ರೈಸ್ತ, ಜೈನ, ಬೌದ್ಧ, ಸಿಖರಲ್ಲಿ ನಮ್ಮಲ್ಲಿಯಂತೆ ಎಲ್ಲ ಜಾತಿಗಳವರು ಬಂದು ಸೇರಿದ್ದರೂ ಅವರು ಒಂದೇ ಹೆಸರು ಬರೆಸುತ್ತಾರೆ. ನಾವು ಅದರಂತೆ ಹಿಂದು ಲಿಂಗಾಯತ, ಲಿಂಗಾಯತ ವೀರಶೈವ, ವೀರಶೈವ ಲಿಂಗಾಯತ ಎಂದೆಲ್ಲ ಬರೆಸದೆ ಕೇವಲ ಲಿಂಗಾಯತ ಒಂದನ್ನೆ 8 ನೆಯ ಅಂಕಣದಲ್ಲಿ ಬರೆಸಬೇಕು. ಇದನ್ನು ಪ್ರತಿಯೊಬ್ಬರೂ ಪ್ರಚಾರ ಮಾಡಿರಿ'' ಎಂದು ಕರೆ ನೀಡಿದರು.

ಸುತ್ತಮುತ್ತಲಿನ ರಾಷ್ಟ್ರೀಯ ಬಸವ ದಳದವರಲ್ಲದೆ ಬೆಂಗಳೂರು, ಬಳ್ಳಾರಿ ಮತ್ತು ಕೊಪ್ಪಳದ ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಮೆರವಣಿಗೆ ಮತ್ತು ಕಾರ್ಯಕ್ರಮದಲ್ಲಿ ಭಾಗವಹಿಸಿ ಶೋಭೆ ತಂದರು. ಹರಳಯ್ಯ ಸಮಾಜದ ಶರಣೆಯರು ಕಲಶ - ಆರತಿಗಳೊಡನೆ ಮೆರವಣಿಗೆಯಲ್ಲಿ ಉತ್ಸಾಹದಿಂದ ಸಾಗಿದ್ದು ಮೆರವಣಿಗೆಗೆ ವಿಶೇಷ ಕಳೆ ತಂದುಕೊಟ್ಟಿತು. ಶರಣ ಸಂಗಪ್ಪನವರು ಸಭೆಯ ನಿರೂಪಣೆ ಮಾಡಿದರು.

- ಮಾತಾಜಿ

ಬಸವ ವಚನಾಮೃತ

331. ನಿರ್ವಂಚಕ ಭಕ್ತಿ

ಆಮಿಹಿಲಾಳು ಭೋಜ ದೇವುಲಾಳು.
ಆನು ಸೂಳೆ, ನಮ್ಮಕ್ಕನೂ ಸೂಳೆ.
ಬೆಳ್ಳಿಗೆಯಾವಿನ ಕರುವೆಂದಡೆ ಬಳ್ಳವಾಲ ಕರೆವುದೆ?
ಲಿಂಗದೇವನ ಶರಣರ ಮುಂದೆ ನಾನು ಕಾದೆಹೆ ಬಾಬಿಸಲೆ.

ಈ ವಚನದಲ್ಲಿ ಒಂದೆರಡು ಪದಗಳಿಗೆ ಅರ್ಥವೇ ತಿಳಿಯುವುದಿಲ್ಲ, ಹೀಗಾಗಿ ಕಷ್ಟಪಟ್ಟು ವ್ಯಾಖ್ಯಾನಿಸಬೇಕಾಗುತ್ತದೆ.

ಒಬ್ಬ ರಾಜನಲ್ಲಿ ಇಬ್ಬರು ಭಟರಿದ್ದರು, ಅವರು ಆಮಿಹಿಲಾಳು ಮತ್ತು ಭೋಜ ದೇವುಲಾಳು. ಮೊದಲನೆಯವನು ವಂಚಕ, ಎರಡನೆಯವನು ಪ್ರಾಮಾಣಿಕ ಇಬ್ಬರಿಗೂ 2 ಸಾವಿರ ಹೊನ್ನು ಸಂಬಳವಿತ್ತು. ಒಮ್ಮೆ ರಾಜನು ದೀಪಕ್ಕೆ ಕಟ್ಟಿದ ಮಕ್ಕಳನ್ನು ತೆಗೆದು ಬತ್ತಿಯನ್ನು ಚಾಚು ಎಂದು ಆಮಿಹಿಲಾಳಿಗೆ ಹೇಳಿದ. ಆಗ ಅವನು ತನ್ನಂತಹ ದೊಡ್ಡ ಹುದ್ದೆಯಲ್ಲಿರುವವನು ಆಳುಗಳು ಮಾಡುವ ಕೆಲಸ ಮಾಡಬೇಕೆ ಎಂದು ಮಾಡಲು ನಿರಾಕರಿಸಿ ಬೇರೆಯವರಿಂದ ಮಾಡಿಸಿದನು. ಅದೇ ರೀತಿ ಮತ್ತೊಮ್ಮೆ ಭೋಜದೇವುಲಾಳಿಗೆ ಹೇಳಿದಾಗ ಆತ ರಾಜಾಜ್ಞೆ ಎಂದು ಶ್ರದ್ಧೆಯಿಂದ ದೀಪವನ್ನು ಸರಿಪಡಿಸಿದ. ಮತ್ತೊಮ್ಮೆ ಹಗೆಗಳು ರಾಜಧಾನಿಯನ್ನು ಮುತ್ತಿದಾಗ ಯುದ್ಧಕ್ಕೆ ಹೋಗಲು ರಾಜನು ಉಭಯತರಿಗೂ ತಿಳಿಸಿದನು. ಆಮಿಹಿಲಾಳು ಆಗಲೂ ತಪ್ಪಿಸಿಕೊಂಡ; ಭೋಜದೇವುಲಾಳು ರಾಜಾಜ್ಞೆ ಎಂದು ಯುದ್ಧಕ್ಕೆ ಹೋಗಿ ಕಾದಾಡಿ ಗೆಲುವನ್ನು ಸಂಪಾದಿಸಿಕೊಂಡು ಬಂದನು. ಇದರಿಂದ ಸುಪ್ರೀತನಾದ ರಾಜನು ಆಮಿಹಿಲಾಳನ್ನು ದೇಶ ಬಿಟ್ಟೋಡಿಸಿದ; ಭೋಜದೇವುಲಾಳಿಗೆ ಇನ್ನೂ ಹೆಚ್ಚಿನ ಹುದ್ದೆ ಕೊಟ್ಟು ಸತ್ಕರಿಸಿದ.

ಇದೇ ರೀತಿ ಕೆಲವರು ಪ್ರಾಮಾಣಿಕ ಭಕ್ತರಾದರೆ ಮತ್ತೆ ವಂಚಕಭಕ್ತಿಯು ನಾನೂ ಸಹಾ ಅಂಥ (ಭೋಜ ದೇವುಲಾಳುವಿನಂತಹ) ಏಕ ನಿಷ್ಠೆ ಇರದ ವೇಶ್ಯೆಯ ಪ್ರೀತಿಯಂತೆ ದೇವನನ್ನು ಪ್ರೀತಿಸುವ ವಂಚಕನು. ನಾನೂ ಮತ್ತು ಅಖಂಡ ನಿಷ್ಠೆ ಇರದ ನನ್ನ ಬುದ್ಧಿ ಎರಡೂ ವಂಚಕತನ ಉಳ್ಳವು. ನಾನಿನ್ನೂ ಬಹಳ ಪಕ್ವವಾಗಬೇಕು. ಸುಂದರವಾದ ಬಿಳಿಯ (ಜಾತಿ) ಹಸುವಿನ ಕರುವಾದ ಮಾತ್ರಕ್ಕೆ ಅದೇನಾದರೂ ಒಂದು ಬಳ್ಳದಷ್ಟು ಹಾಲು ಕೊಡಬಲ್ಲುದೆ? ಕರುವು ತನ್ನ ಬಾಲ್ಯವನ್ನು ಕಳೆದು ಪ್ರೌಢಾವಸ್ಥೆಗೆ ಬರಬೇಕು ತಾನೆ? ಹಾಗೆ ನಾನು ಪರಿಪಕ್ವಗೊಂಡ ನಿಜ ಶರಣರ ಮುಂದೆ ಹೆಮ್ಮೆಯಿಂದ ಬೀಗಿ ಕಾದ (ವಾದಿಸ) ಬಲ್ಲೆನೆ? ನಾನಿನ್ನೂ ಎಳಚು!!

332. ಶರಣರು ಮದಕರಿಗಳಂತೆ

ಆನೆಯು ಆ ದಾರಿಯಲ್ಲಿ ಹೋಯಿತ್ತೆಂದಡೆ
ಆಡೂ ಆ ದಾರಿಯಲ್ಲಿ ಹೋಯಿತ್ತೆನ್ನಬಹುದೆ?
ಸಂಗನ ಶರಣರಿಗೆ ಆನು ಸರಿಯೆಂದು ಗಳಹಲುಬಹುದೆ?
ಜಂಗಮಕ್ಕೆ ಮಾಡುವ ಭಕ್ತರಿಗೆ ಆನು ಸರಿಯೆ ಹೇಳಾ, ಲಿಂಗದೇವಾ? -330

ಆನೆಗೆ ಯಾರೂ ದಾರಿ ಮಾಡಿಕೊಡಬೇಕಾಗಿಲ್ಲ, ಅದು ಮಾಡಿದುದೇ ದಾರಿಯಾಗುತ್ತದೆ. ಹೆಮ್ಮರಗಳಿದ್ದರೆ ಅವನ್ನು ಎಳೆದೊಗೆದು, ಸೊಪ್ಪು ಸದೆಯನ್ನು ತರಿಚಿ ಹಾಕಿ, ಕಂಟಗಳನ್ನು ತುಳಿದು ಮುನ್ನಡೆಯುತ್ತದೆ. ಆನೆಯ ಧೀಮಂತಿಕೆಯನ್ನು ನೋಡಿ ಆಡೂ ಸಹ ತಾನು ಅದೇ ರೀತಿ ಸಾಗಲು ಹೋದರೆ ಮೈಯನ್ನೆಲ್ಲ ತರಚಿಕೊಂಡು ಘಾಸಿಯಾಗಬೇಕಾಗುತ್ತದೆ. ಅದರಂತೆ ನಿಜ ಶರಣರು ಆದರ್ಶದ ದಾರಿಯನ್ನು ನಿರ್ಮಾಣ ಮಾಡಿ ಅದರಲ್ಲಿ ಸಾಗುತ್ತಾರೆ, ಮಾದರಿಯಾಗಿ ನಿಲ್ಲುತ್ತಾರೆ. ಅವರಿಗೆ ತನ್ನನ್ನು ಹೋಲಿಸಿಕೊಂಡು ತಾನೂ ಅವರಂತೆ ಅನುಕರಣೆ ಮಾಡಹೋದರೆ ವೃಥಾ ಆಯಾಸ ಮಾತ್ರ. ಕೆಲವರು ಭಕ್ತರು ಗುರು ಲಿಂಗ ಜಂಗಮಕ್ಕೆ ತನು ಮನಧನಗಳನ್ನರ್ಪಿಸಿ ದಾಸೋಹ ಮಾಡುವ ಸಂಕಲ್ಪ ತೊಡುತ್ತಾರೆ. ಅದರಂತೆ ಪೂರೈಸುತ್ತಾರೆ. ಅದೇ ರೀತಿ ನಾನೂ ಮಾಡಬಲ್ಲೆನೆಂದು

ಹೇಳಿಕೊಂಡರೆ ಲಿಂಗದೇವರು ಮೆಚ್ಚುವುದುಂಟೆ?

333. ಅಸಹಜ ಹೋಲಿಕೆ

ಆ ಕರಿಯಾಕೃತಿಯ ಸೂಕರನ ಹೋಲಿಸಿದಡೆ
ಅದು ಕರಿಯಾಗಲರಿವುದೆ ?
ಭೂ ನಾಗನಾಕೃತಿಯನು ವ್ಯಾಳೇಶನ ಹೋಲಿಸಿದಡೆ
ವ್ಯಾಳೇಶನಾಗಲರಿವುದೆ ?
ನಾನು ಭಕ್ತನಾದಡೇನಯ್ಯಾ,
ನಮ್ಮ ಲಿಂಗದೇವನ ಸದ್ಭಕ್ತರ ಹೋಲಲರಿವೆನೆ ? - ಬ.ವ.ದೀ.331

ಆನೆಯ ಮೈಬಣ್ಣ ಹಂದಿಯ ಮೈ ಬಣ್ಣ ಹೆಚ್ಚು ಕಡಿಮೆ ಒಂದೆ. ಇನ್ನು ಆಕಾರವೂ ಸ್ವಲ್ಪ ಹೋಲುವುದು. ಗಾತ್ರದಲ್ಲಿ ಮಾತ್ರ ವ್ಯತ್ಯಾಸವಿದ್ದಂತೆ ತೋರುವುದು. ಹಾಗೆಂದು, ಆನೆಯ ಆಕೃತಿಯನ್ನು ಹಂದಿಯೊಡನೆ ಹೋಲಿಸಿದರೆ ಹಂದಿ ಗಾಂಭೀರ್ಯದಲ್ಲಿ ತೇಜಸ್ಸಿನಲ್ಲಿ ಆನೆಯಾಗಬಲ್ಲುದೆ? ಅದೇ ರೀತಿ ಭೂಮಿಯ ಮೇಲೆ ಹರಿದಾಡುವ ಹಾವನ್ನು ಭೂಮಿಯನ್ನು ಹೊತ್ತ ಸರ್ಪಕ್ಕೆ ಹೋಲಿಸಿದರೆ ಅದು ವ್ಯಾಳೇಶನಾಗಲು ಸಾಧ್ಯವೆ?

ನಾನು ಭಕ್ತ ಎಂದು ಆಚರಣೆ ಮಾಡುತ್ತಿದ್ದೇನೆ.ಆದರೆ ಲಿಂಗದೇವನ ನಿಜಶರಣರನ್ನು ಹೋಲಲು ಸಾಧ್ಯವೆ ?

(ಕಿಂಕರ ಭಾವದಿಂದ ತಮ್ಮನ್ನು ತಾವು ತಗ್ಗಿಸಿಕೊಂಡು ಮಾತನಾಡುವುದು ಧರ್ಮಪಿತ ಬಸವಣ್ಣನವರ ಸ್ವಭಾವ)

334. ನಗೆ ಪಾಟಲಿನ ಭಕ್ತಿ

ಮೋಟನ ಮೌಳಿ, ಮೂಕೊರತಿಯ ಶೃಂಗಾರ
ಬೇಟ ಕುರುಡಂಗೆ ನಗೆಗೆಯಾಯಿತ್ತು,
ನಮ್ಮ ಲಿಂಗದೇವನ ಶರಣರ ಮುಂದೆ
ಆನು ಭಕ್ತನೆಂಬ ನಾಚಿಕೆ ಸಾಲದೆ? - ಬ.ವ.ದೀ.332

ಕಳ್ಳತನ ಮಾಡಿದವರಿಗೆ ಮುಂಗೈಗಳನ್ನು ಕತ್ತರಿಸುವ ಶಿಕ್ಷೆ ವಿಧಿಸಲಾಗುತ್ತಿತ್ತು. ಶಿಕ್ಷೆಯಿಂದ ಮೋಟಾದ ಕೈಗಳುಳ್ಳವನೇ ಆಗಿರಲಿ, ಶಾರೀರಿಕ ದೋಷದಿಂದ ಮುಂಗೈ ಸೀದು ಸಣ್ಣಗಾಗಿರುವವನೇ ಆಗಿರಲಿ; ಅಂಥ ಅಂಗವಿಕಲ ತಲೆಯ ಮೇಲೊಂದು ಕಿರೀಟವನ್ನು ಇಟ್ಟುಕೊಂಡು ಅಡ್ಡಾಡಿದರೆ ಅದು ಎಷ್ಟು ಹಾಸ್ಯಾಸ್ಪದ! ಅದೇ ರೀತಿ ಹಾದರ ಮಾಡಿದ್ದಕ್ಕೆ ಮೂಗು ಕತ್ತರಿಸಲ್ಪಟ್ಟ ಶಿಕ್ಷೆ ಹೊಂದಿದವಳು ಭಾರಿ ಅಲಂಕಾರ ಮಾಡಿಕೊಂಡು ವಯ್ಯಾರ ಮಾಡಹೋದರೆ ಅದು ಸಹ ಎಷ್ಟು ಹಾಸ್ಯಾಸ್ಪದ! ಅದೇ ರೀತಿ ಕುರುಡನು ಪ್ರೇಮ ಸಲ್ಲಾಪವನ್ನು (ಸಾರ್ವಜನಿಕವಾದ ಸ್ಥಳದಲ್ಲಿ) ಮಾಡಹೋದರೆ ಅದು ಇತರರಿಗೆ ನಗಲು ಆಸ್ಪದ ನೀಡುತ್ತದೆ.

ಹಾಗೆಯೇ ನಿಜ ಶರಣರನ್ನು ಅನುಕರಣೆ ಮಾಡುವಂತೆ ನಾನು (ಕೆಲವರು) ಭಕ್ತನೆಂದು ನಟಿಸಹೋಗುವುದೂ ನಗೆ ಪಾಟಲಿಗೆ ಕಾರಣವಾಗುತ್ತದೆ.

335. ವಿಕೃತ ವೇಷ

ಮೂಗಿಲ್ಲದ ಮುಖಕ್ಕೆ ಶೃಂಗಾರವೆ ?
ವಿಕೃತ ವೇಷಧಾರಿಯಾನು; ಭಂಡನು! ಲಜ್ಜೆ ಭಂಡನು !
ಲಿಂಗದೇವನ ಶರಣರಲ್ಲಿ
ಹಾವ ತೋರಿ ಹವಿಯ ಬೇಡುವಂತೆ. - ಬ.ವ.ದೀ.333

ವ್ಯಕ್ತಿಯ ಮುಖದಲ್ಲಿ ಅಂದವನ್ನು ಹೆಚ್ಚಿಸುವುದು ಮೂಗು. ಅದೇ ಕತ್ತರಿಸಲ್ಪಟ್ಟಾಗ ಬೇರೆ ಏನು ಅಲಂಕಾರ ಮಾಡಿಕೊಂಡರೂ ಅದು ನಗೆ ಪಾಟಲಿಗೆ ಕಾರಣವಾಗುತ್ತದೆ. ಅಸಹಜವಾದ ವಿಕೃತ ವೇಷ ಎನಿಸುತ್ತದೆ. ಶರಣರ ಸೇವೆ ಮಾಡಿ ಅವರಿಂದ ಅನುಗ್ರಹವನ್ನು ಪಡೆಯುವ ನಾಟಕ

ಮಾಡುತ್ತೇನೆ. ಆದರೆ ನಾನು ಅನುಸರಿಸುವ ಮಾರ್ಗ ಹಾವ ತೋರಿ ಹವಿಯ ಬೇಡುವ ಮಾರ್ಗ. ತುಪ್ಪವನ್ನು ಕೊಡುವಿರೋ ಇಲ್ಲವೊ? ಕೊಡದಿದ್ದರೆ ಹಾವನ್ನು ಎಸೆಯುತ್ತೇನೆ.' ಎಂದು ಬೆದರಿಸುವ ಮಾರ್ಗ. ಅಂದರೆ ಇದು ಕೆಟ್ಟುದನ್ನು ಮಾಡಿ ಒಳ್ಳೆಯ ಫಲವನ್ನು ಬೇಡುವ ವಿಧಾನ.

(ಭಂಡರು! ಲಜ್ಜೆಭಂಡರು ಕೆಲವರು ಮಠಾಧಿಪತಿಗಳ ಸುತ್ತ ಸೇರಿಕೊಳ್ಳುತ್ತಾರೆ. ಕೆಲವೊಮ್ಮೆ ಅವರ ದೌರ್ಬಲ್ಯ-ದೋಷಗಳನ್ನು ತಿಳಿದುಕೊಂಡು ಬೆದರಿಕೆ ಹಾಕುತ್ತ ಅವರಿಂದ ಹೆಚ್ಚಿನ ಸಂಪಾದನೆ ಮಾಡಿಕೊಳ್ಳುತ್ತಾರೆ.

ಮತ್ತೆ ಕೆಲವು ಸಲ ಹೀಗಾಗುತ್ತದೆ; (ಲೌಕಿಕ) ಶಿಕ್ಷಣ ಸಂಸ್ಥೆಗಳನ್ನು ವಿಪರೀತ ಬೆಳೆಸಿದಾಗ ಅವುಗಳ ನಿರ್ವಹಣೆಗೆ ಬುದ್ಧಿವಂತ ಲೌಕಿಕರನ್ನು ಅವಲಂಬಿಸಬೇಕಾಗುತ್ತದೆ. ಆಗ ಸ್ವಾಮಿಗಳು, ಮಠಾಧೀಶರು ಆಡಳಿತಾಧಿಕಾರಿಗಳ ವಿಷ ವರ್ತುಲದಲ್ಲಿ ಸಿಕ್ಕಿ ಬಿಡುತ್ತಾರೆ. ಅವರನ್ನು ಎದುರು ಹಾಕಿಕೊಳ್ಳಲು ಸಾಧ್ಯವಿಲ್ಲದ ಪರಿಸ್ಥಿತಿ ಒದಗುತ್ತದೆ. ಹೊರಗಡೆಯ ಜನರ ಕಣ್ಣಿಗೆ ಬಹಳ ವಿನಯ ಶಾಲಿಗಳಾಗಿ ಮಠಾಧೀಶರಿಗೆ ಬಹಳ ಗೌರವ ಕೊಡುವಂತೆ ವರ್ತಿಸಿದರೂ ಅಂತರಂಗದಲ್ಲಿ ಬೆದರಿಕೆಯ ಅಸ್ತ್ರವನ್ನು ಪ್ರಯೋಗಿಸುತ್ತ 'ಹಾವನ್ನು ತೋರಿ ತುಪ್ಪವನ್ನು ಬೇಡುವಂತಹ ವಾತಾವರಣವನ್ನು ಅಂಥವರು ರೂಢಿಸಿಕೊಂಡಿರುತ್ತಾರೆ.'

336. ಮಾವಿನಕಾಯಿಯ ಮಧ್ಯೆ ಎಕ್ಕೆಯಕಾಯಿ

ಮಾವಿನಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯಾ.
ಆನು ಭಕ್ತನೆಂತೆಂಬೆ ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ!
ಲಿಂಗದೇವನ ಶರಣರ ಮುಂದೆ ನಾನೆಂತು ಭಕ್ತನಪ್ಪೆನಯ್ಯಾ? - ಬ.ವ.ದೀ.334

ಅನುಭವ ಮಂಟಪದಲ್ಲಿ ಶರಣರ ಸಮೂಹವನ್ನು ನೋಡಿ ನೋಡಿ ಧರ್ಮಪಿತ ಬಸವಣ್ಣನವರು ಹಿಗ್ಗಿ ಹರ್ಷಿಸುತ್ತಾರೆ. ತಾವು ಸರ್ವಾಂಗ ಪರಿಪೂರ್ಣ ವ್ಯಕ್ತಿತ್ವವನ್ನು ಹೊಂದಿದ್ದರೂ ಇತರರಲ್ಲಿರುವ ಒಂದೊಂದು ಸದ್ಗುಣವನ್ನೇ ಹಿರಿದಾಗಿ ಕಂಡು ಹೊಗಳುತ್ತಾರೆ. ತಮ್ಮನ್ನು ತಾವು ತಗ್ಗಿಸಿಕೊಂಡು ತಾವೇ ಎಲ್ಲರಿಗಿಂತಲೂ ದೋಷಪೂರ್ಣರೆಂದು ಭಾವಿಸಿಕೊಳ್ಳುತ್ತಾರೆ.

ಒಂದು (ಅನುಭವ ಮಂಟಪ ಎಂಬ) ಬುಟ್ಟಿ ಇದೆ. ಅದರ ತುಂಬಾ ರಸಭರಿತವಾದ (ಶರಣರೆಂಬ) ಮಾವಿನ ಹಣ್ಣುಗಳಿವೆ. ಅವುಗಳ ಮಧ್ಯೆ ಒಂದು ಕಹಿ ಫಲವಾದ ಎಕ್ಕೆಯ ಕಾಯಿ ಇದ್ದರೆಂತೋ ಹಾಗೆ ನಾನು ಇದ್ದೇನೆ. ಶರಣರ ಮುಂದೆ ನಾನೇತರ ಭಕ್ತ ಎಂದು ನಾಚಿಕೆ ಇಲ್ಲದೆ ಹೇಳಲಿ? ಅವರು ನಿಜಕ್ಕೂ ಘನವಂತರು!

337. ಮರದ ನೆರಳಲಿದ್ದು ತನ್ನ ನೆಳಲು ಹುಡುಕುವುದೆ?

ಮರದ ನೆಳಲಲ್ಲಿದ್ದು ತನ್ನ ನೆಳಲನರಸಬಹುದೆ ?
ನಿಮ್ಮ ಶರಣರ ಮುಂದೆ ನಾನೇತರ ಭಕ್ತನಯ್ಯಾ?
ನಿಮ್ಮ ಶರಣರ ಮುಂದೆ ನಾನೇತರ ಯುಕ್ತನಯ್ಯಾ
ಆನು ಭಕ್ತನೆಂಬ ನುಡಿ ಸುಡದೆ ಲಿಂಗದೇವಾ? -ಬ.ವ.ದಿ. 335

ದಟ್ಟವಾಗಿ ಬೆಳೆದ ಒಂದು ಮರವಿದ್ದು ಅದರ ನೆರಳು ಅಷ್ಟೇ ಗಾಢವಾಗಿರುತ್ತದೆ. ಅಂಥ ಗಿಡದ ಕೆಳಗೆ ನಿಂತ ವ್ಯಕ್ತಿ ತನ್ನ ನೆರಳನ್ನು ಹುಡುಕಲು ಹೋಗದೆ ನೆಮ್ಮದಿಯಾಗಿ ವಿಶ್ರಾಂತಿ ಪಡೆಯಬೇಕು. ಅದೇ ರೀತಿ ತನಗಿಂತ ಉನ್ನತವಾದ ಸಾಧನೆ ಮಾಡಿದ ಗುರುವಿನ ಆಶ್ರಯದಲ್ಲಿ, ಶರಣರ ಆಶ್ರಯದಲ್ಲಿ ಕಾರ್ಯೋನ್ಮುಖನಾಗಬೇಕೇ ವಿನಾ ತನ್ನ ಕೀತಿವಾರ್ತೆ, ಪ್ರತ್ಯೇಕತೆಯನ್ನು ಬಯಸಬಾರದು. ನಾನು ಭಕ್ತ ನಾನು ಮಹಾನ್ ಸಾಧಕ ಎಂಬ ಅಹಂ ವ್ಯಕ್ತಿಯ ವ್ಯಕ್ತಿತ್ವವು ನಾಶವಾಗುವುದಕ್ಕೆ, ಪ್ರಗತಿಯು ಕುಂಠಿತವಾಗಲು ಕಾರಣವಾಗುತ್ತದೆ ಎನ್ನುತ್ತಾರೆ ಧರ್ಮಪಿತ ಬಸವಣ್ಣನವರು.

ಗುರು ಬಸವಣ್ಣನವರ ಕೆಲವು ಮಾತುಗಳನ್ನು ಉಕ್ತಿ (Quotation) ಯಂತೆ, ಗಾದೆ (prov-erb) ಯಂತೆ ಉಲ್ಲೇಖಿಸಬಹುದು. ಪ್ರತಿ ವಚನದಲ್ಲಿಯೂ ಅಂತಹ ವಾಕ್ಯಗಳು ಸಿಗುತ್ತವೆ. ಉದಾ: "ಆತ ಮಾವಿನಕಾಯಿಯೊಳಗೆ ಒಂದು ಎಕ್ಕೆ ಕಾಯಿ ಇದ್ದಂತೆ. ಎಂದರೆ ಹಲವಾರು ಸಜ್ಜನರು, ಸಾತ್ವಿಕ

ಮಧ್ಯೆ. ಈತನೊಬ್ಬ ದುರ್ಜನ ಸೇರಿಬಿಟ್ಟಿದ್ದಾನೆ ಎಂದು ಅರ್ಥ. ಅದೇ ರೀತಿ ಮರದ ನೆಳಲಲ್ಲಿದ್ದು ತನ್ನ ನೆಳಲನ್ನರಸಬಹುದೆ?" ಎಂಬ ಮಾತು. ಒಂದು ಸಂಸ್ಥೆ ಅಥವಾ ಸಂಘಟನೆಯ ಆಶ್ರಯದಲ್ಲಿದ್ದೂ ಪ್ರತ್ಯೇಕವಾಗಿ ಬೆಳೆಯುವ ಸ್ವಾರ್ಥ ಮನೋಭಾವ ಹೊಂದಬಹುದೆ? ಎಂಬ ಅರ್ಥವನ್ನು ಈ ಮಾತು ಕೊಡುತ್ತದೆ.

ಕ್ರೈಸ್ತ, ಮುಸ್ಲೀಮ್ ಸಮಾಜಗಳಲ್ಲಿ ಚರ್ಚ್ ಮತ್ತು ಮಸೀದಿಗಳನ್ನು ಬಿಟ್ಟು ಯಾವ ಪಾದ್ರಿ ಅಥವಾ ಮೌಲ್ವಿ ಬೆಳೆಯಲು ಇಷ್ಟಪಡುವುದಿಲ್ಲ ಮತ್ತು ಸಮಾಜವೂ ಅದನ್ನು ಒಪ್ಪಿಕೊಳ್ಳುವುದಿಲ್ಲ. ಆದರೆ ಹಿಂದು ಮತ್ತು ಲಿಂಗಾಯತ ಸಮಾಜದಲ್ಲಿ ಪ್ರತ್ಯೇಕತಾ ಮನೋಭಾವ ಬಹಳ. ಸಂಸ್ಥೆಗಳನ್ನು ಬೆಳೆಸಬೇಕು ಎಂಬುದಕ್ಕಿಂತ ತಾನು ಬೆಳೆಯಬೇಕು ಎಂಬ ಸ್ವಾರ್ಥವೇ ಅಧಿಕ. ಎಂಥ ಸಣ್ಣ ಸಾಧಕನಾದರೂ ತಾನೇ ಒಂದು ಮಠವನ್ನು ಕಡೆಗೆ ಒಂದು ಕೋಣೆಯಾದರೂ ಸಾಕು, ಪ್ರತ್ಯೇಕ ಕಟ್ಟಿಕೊಳ್ಳಬೇಕು ಎಂಬ ಮನೋಭಾವ.

ಸಿಖ್, ಕ್ರೈಸ್ತ, ಇಸ್ಲಾಂ ಧರ್ಮಗಳ ಜನರಲ್ಲಿ ತಮ್ಮ ಧರ್ಮದ ತತ್ವಗಳಿಗೆ ಬದ್ಧತೆ ಇದೆ. ಸಾಂಪ್ರದಾಯಿಕ ವೈದಿಕ-ಹಿಂದು ತತ್ವಗಳಿಗಿಂತ ಈ ಧರ್ಮಗಳು ಬೇರೆಯಾಗಿ ಇರುವುದರಿಂದ ಸಾಂಪ್ರದಾಯಿಕ ಹಿಂದುಗಳಿಂದ ಕೆಲವೊಮ್ಮೆ ವಿರೋಧಗಳು ಎದುರಾಗುತ್ತವೆ. ಪೂಜ್ಯ ದಯಾನಂದ ಸರಸ್ವತಿಯವರು ವೇದೋಕ್ತ ಧರ್ಮವನ್ನು ಉಳಿಸಬೇಕೆಂದು ಅತೀವ ಶ್ರಮಪಟ್ಟರು. ಜಾತೀಯತೆ, ಮೂಢನಂಬಿಕೆ, ಬಹುದೇವತೋಪಾಸನೆಯಿಂದ ಬೇಸತ್ತು ಅನೇಕ ಹಿಂದುಗಳು ಮತಾಂತರವಾಗುವುದನ್ನು ನೋಡಿ, ಅದನ್ನು ತಪ್ಪಿಸಬೇಕೆಂದು ಎಲ್ಲರಿಗೂ ಜನಿವಾರ ನೀಡುವುದನ್ನು ಆರಂಭಿಸಿದರು. ಜೋತಿಷ್ಯ-ಗ್ರಹಚಾರ ಫಲ ಮುಂತಾದ ಮೂಢನಂಬಿಕೆ ಖಂಡಿಸಿ, ಏಕದೇವೋಪಾಸನೆ ಪ್ರತಿಪಾದಿಸಿದರು. ಆದರೆ ಇಂದು ಪುರೋಹಿತಶಾಹಿಗೆ ಧರ್ಮದ ಉಳುವಿಗಿಂತ ತಮ್ಮ ಹೊಟ್ಟೆಯ ಪಾಡೇ ಮುಖ್ಯ. ಹೀಗಾಗಿ ದಯಾನಂದ ಸರಸ್ವತಿಯವರನ್ನು ವಿರೋಧಿಸಿದರು, ಅವರಿಗೆ ಕಡೆಗೂ ವಿಷಪ್ರಾಶನ ಮಾಡಿದರು.

ಲಿಂಗಾಯತ ಧರ್ಮದ ಕಟ್ಟಾ ಅನುಯಾಯಿಗಳಾದ ಶರಣರಿಗೂ ಬಹಳ ತೊಂದರೆ ಸಂಪ್ರದಾಯ ನಿಷ್ಠರಿಂದ ಆಯಿತು. ಆದರವರು ತತ್ವಕ್ಕೆ ಬದ್ಧರಾದರು. ಆ ತಾತ್ವಿಕ ಬದ್ಧತೆಯನ್ನು ಸಿಖ್, ಕ್ರೈಸ್ತ, ಮುಸಲೀಮರಲ್ಲಿ ನೋಡುತ್ತೇವೆ. ಆದರೆ ಬಹುಪಾಲು ಲಿಂಗಾಯತ ಧರ್ಮದ ಕೀರ್ತನಕಾರರು, ಆಧುನಿಕ ಪ್ರವಚನಕಾರರು ಹಿಂದು ಪುರೋಹಿತಶಾಹಿಗೆ ಹೆದರಿ ತಮ್ಮ ಧರ್ಮದ ತತ್ವಗಳನ್ನು ಮುಚ್ಚಿಟ್ಟು, ತಿಪ್ಪೇಸಾರಿಸುವ ಮಾತುಗಳನ್ನಾಡಿ ಜನಾಕರ್ಷಣೆ ಮಾಡುತ್ತಾರೆ. ಇದರಿಂದ ಲಿಂಗಾಯತರಿಗೆ ತಮ್ಮ ಧರ್ಮದ ಸ್ವರೂಪ ತಿಳಿಯದೆ ಮಾನಸಿಕವಾಗಿ ದುರ್ಬಲರಾಗುತ್ತಿದ್ದಾರೆ; ತತ್ವನಿಷ್ಠೆ ಬೆಳೆಸಿಕೊಳ್ಳುತ್ತಿಲ್ಲ. ಇದಕ್ಕೆಲ್ಲ ಉತ್ತರ ನೀಡಿದ್ದಾರೆ ಧರ್ಮಪಿತರು, "ಮರದ ನೆರಳಲ್ಲಿದ್ದೂ ತನ್ನ ನೆರಳ ಅರಸಿಕೊಳ್ಳಬಹುದೆ?" ಎಂದು.

338. ವ್ಯಕ್ತಿಗಿಂತ ಸಮುದಾಯ ಹಿರಿದು

ಎನಗಿಂತ ಕಿರಿಯರಿಲ್ಲ ಶಿವಭಕ್ತರಿಗಿಂತ ಹಿರಿಯರಿಲ್ಲ.
ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ!
ಲಿಂಗದೇವಾ, ಎನಗಿದೇ ದಿಬ್ಯ! - ಬ.ವ.ದೀ.336

ಗುರು ಬಸವಣ್ಣನವರ ವಚನಗಳಲ್ಲಿ ಬಹು ಜನಪ್ರಿಯ ಮತ್ತು ಮಹತ್ವಪೂರ್ಣ ವಚನವಿದು. ಮೊದಲನೆಯ ಸಾಲು ಎಲ್ಲರ ಬಾಯಿಯಲ್ಲಿ ಉಲಿಯುತ್ತದೆ. ಗುರು ಬಸವಣ್ಣನವರು ತಮ್ಮನ್ನು ತಾವು ಕಿರಿಯರಾಗಿಸಿಕೊಂಡು ಒಂದು ಮಹತ್ವಪೂರ್ಣ ಸಂದೇಶವನ್ನು ನೀಡಿದ್ದಾರೆ.

ಎನಗಿಂತ ಎಂಬ ಪದವು ವ್ಯಕ್ತಿಯನ್ನು ಪ್ರತಿನಿಧಿಸಿದರೆ, ಶಿವಭಕ್ತರಿಗಿಂತ ಎಂಬುದು ಸಮುದಾಯವನ್ನು, ಸಂಸ್ಥೆಯನ್ನು ಪ್ರತಿನಿಧಿಸುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತನಗಿಂತ ಸಮಷ್ಟಿಯು ಹಿರಿದು ಎಂದು ತಿಳಿದುಕೊಂಡು ಅದರ ಹಿತಕ್ಕಾಗಿ ಕಿಂಕರತೆಯಿಂದ ಸೇವೆ ಮಡಬೇಕು. ಓರ್ವನು ಸಂಸ್ಥೆಯೊಂದರ ಅಧ್ಯಕ್ಷನಾಗಿರುತ್ತಾನೆ ಎಂದುಕೊಳ್ಳುವ. ಅವನು ಸಂಸ್ಥೆಗಿಂತ ಶ್ರೇಷ್ಠ ಎಂದುಕೊಂಡಾಗ ಸಂಸ್ಥೆ ಹಿರಿದು ಎಂದುಕೊಂಡಾಗ ಅದರ ಅಭಿವೃದ್ಧಿಗಾಗಿ ಸಮರ್ಪಣ ಮನೋಭಾವದಿಂದ ದುಡಿಯುತ್ತಾನೆ. ರಾಷ್ಟ್ರಾಧ್ಯಕ್ಷರು ಅಥವಾ ಪ್ರಧಾನಿ ಶ್ರೇಷ್ಠರು ಎಂದುಕೊಂಡರೆ ಅವರಿಗಿಂತಲೂ ರಾಷ್ಟ್ರ ಹಿರಿದು. ಸರ್ವಾಧಿಕಾರಿಯಾಗಿ ವರ್ತಿಸಿ ಸಂಸ್ಥೆಯ ನಾಶಕ್ಕೆ ಕಾರಣನಾಗುತ್ತಾನೆ. ತನಗಿಂತ ಸಂಸ್ಥೆ ಹಿರಿದು

ಎಂದುಕೊಂಡಾಗ ಅದರ ಅಭಿವೃದ್ಧಿಗಾಗಿ ಸಮರ್ಪಣ ಮನೋಭಾವದಿಂದ ದುಡಿಯುತ್ತಾನೆ. ರಾಷ್ಟ್ರಾಧ್ಯಕ್ಷರು ಅಥವಾ ಪ್ರಧಾನಿ ಶ್ರೇಷ್ಠರು ಎಂದು ಕೊಂಡರೆ ಅವರಿಗಿಂತಲೂ ರಾಷ್ಟ್ರ ಹಿರಿದು.

ಈ ಪರಮ ಸತ್ಯವನ್ನು ಗುರು ಬಸವಣ್ಣನವರು ಲಿಂಗದೇವನ ಸಾಕ್ಷಿಯಾಗಿ ನುಡಿಯುತ್ತಾರೆ. ತಮ್ಮ ಅಂತರಾತ್ಮ ಸಾಕ್ಷಿಯಾಗಿ ನುಡಿಯುತ್ತಾರೆ. ಇಷ್ಟು ಮಾತ್ರವಲ್ಲ ಈ ರೀತಿ ವರ್ತಿಸುವುದೇ ತಮಗೆ ಹಿತಕಾರಕ, ಸಂತೋಷದಾಯಕ ಎಂದು ಪುನರುಚ್ಚರಿಸುತ್ತಾರೆ. ಇದು ಪಂಚ ಆಚಾರಗಳಲ್ಲಿ ಒಂದಾದ ಭೃತ್ಯಾಚಾರ, ಸಮಾಜ ಸೇವೆಯ ಸೂತ್ರ. ವ್ಯಕ್ತಿಯು ನಾನು ದೊಡ್ಡವನು, ಶ್ರೇಷ್ಠ ಎಂದಾಗ ಜಗಳವು ಬರುತ್ತದೆ. ನಾನು ಕಿರಿಯ, ನೀನೇ ಶ್ರೇಷ್ಠ ಎಂದಾಗ ಜಗಳವು ಬರುತ್ತದೆ. ನಾನು ಕಿರಿಯ, ನೀನೇ ಶ್ರೇಷ್ಠ ಎಂದಾಗ ಜಗಳವು ನಿವಾರಣೆಯಾಗಿ ಸೌಹಾರ್ದ ಸಂಬಂಧ ಬೆಳೆಯುತ್ತದೆ.

ಬೈಬಲಿನಲ್ಲಿ ಒಂದು ಸಂದೇಶವಿದೆ. ನೀನು ಕೆಳಗಿನ ಸ್ಥಾನವನ್ನು ಆರಿಸಿಕೋ ನಿನ್ನಲ್ಲಿ ಯೋಗ್ಯತೆ ಇದ್ದರೆ ಯಾರಾದರೂ ಬಂದು ನಿನ್ನನ್ನು ಕರೆದೊಯ್ದು ಮೇಲಿನ ಸ್ಥಾನದಲ್ಲಿ ಕೂರಿಸುವರು. ಆಗ ನಿನ್ನ ಗೌರವ ಹೆಚ್ಚಾಗುತ್ತದೆ. ನೀನು ಹೋಗಿ ಹೆಚ್ಚಿನ ಸ್ಥಾನದಲ್ಲಿ ಕುಳಿತರೆ ನಿನ್ನಲ್ಲಿ ಅದಕ್ಕೆ ತಕ್ಕಅರ್ಹತೆ ಇಲ್ಲದೆ ಇದ್ದರೆ ಅಲ್ಲಿಂದ ಕೆಳಗಿಳಿಸುವರು. ಆಗ ನಿನ್ನ ಗೌರವ ಕೆಳಗಿಳಿಯುತ್ತದೆ.

339. ವೇಷಧಾರಿ ಭಕ್ತ

ಆನು ಭಕ್ತನಲ್ಲಯ್ಯಾ; ಆನು ವೇಷಧಾರಿಯಯ್ಯಾ
ಕಾಟುಗ, ಕೆತ್ತುಗ, ಪೋಲುಗನೆಂಬುದು ಎನ್ನ ಹೆಸರು!
ಲಿಂಗದೇವಾ, ನಿಮ್ಮ ಶರಣರ ಮನೆಯ ಮಗ ನಾನಯ್ಯಾ. - ಬ.ವ.ದೀ.337

ನಾನು ಭಕ್ತ ಅರ್ಥಾತ್ ನಿಷ್ಠಾವಂತ ಸೇವಕನಲ್ಲ, ವೇಷಧಾರಿ ಮಾತ್ರ! ಹೊರಗೆ ನಿಷ್ಠಾವಂತ ಸೇವಕನೆಂಬಂತೆ ನಟಿಸುತ್ತೇನೆ. ಅಂತರಂಗದಲ್ಲಿ ನಿಷ್ಠೆಯಿಲ್ಲ. ನಾನು ಕಾಟುಗ ಅಂದರೆ ಒಡೆಯರಿಗೆ ಕಾಟ ಕೊಡುವವನು; ಕೆತ್ತುಗ ಅಂದರೆ ನಿಧಾನವಾಗಿ ವಂಚಿಸುವವನು, ಪೋಲುಗ -ಸಾಕಷ್ಟು ಅಪವ್ಯಯ, ಹಾನಿ ಮಾಡುವವನು. ಲಿಂಗದೇವಾ, ನಿಮ್ಮ ನಿಷ್ಠಾವಂತ ಶರಣರ ಮನೆಯ ಮಗನಾಗಿ ಸೇವೆ ಮಾಡಬಯಸುತ್ತೇನೆ.

340. ಡಾಂಭಿಕ ಭಕ್ತ

ಡಂಬು ಡಳಹು ಎನ್ನದಯ್ಯಾ;
ಡಂಭಕನೆಂಬವ ನಾನಯ್ಯಾ.
ಎನ್ನಲೇನನರಸುವಿರಿ?
ನಿಮ್ಮ ನಂಬಿಯೂ ನಂಬದ ಡಂಭಕ ನಾನು,
ಹಾವ ತೋರಿ ಹವಿಯ ಬೇಡುವಂತೆ ಎನ್ನ ಭಕ್ತಿ
ಲಿಂಗದೇವಾ.
- ಬ.ವ.ದೀ.338

ನನ್ನದು ಹುರುಳಿಲ್ಲದ ವ್ಯಕ್ತಿತ್ವ, ಹೊರಗೆ ಮಾತ್ರ ಆಡಂಬರ; ನಾನು ಬಹು ಡಾಂಭಿಕ ಆದ್ದರಿಂದ ನನ್ನಲ್ಲಿ ಯಾವ ಸದ್ಗುಣವನ್ನೂ ಹುಡುಕಲು ಹೋಗಬೇಡ. ನಿನ್ನನ್ನು ನಂಬಿದ್ದೇನೆಂದು ಹೊರಗೆ ತೋರಿಸಿಕೊಳ್ಳುತ್ತೇನೆ. ಅಂತರಂಗದಲ್ಲಿ ದೃಢ ನಿಶ್ಚಯವಿಲ್ಲ. ಮನೆಯ ಮುಂದೆ ಹಾವು ಹಿಡಿದು ನಿಂತು, "ನನಗೆ ತುಪ್ಪ (ಹವಿ) ಕೊಡುವಿರೋ ಇಲ್ಲವಾದರೆ ಮನೆಯೊಳಕ್ಕೆ ಹಾವನ್ನು ಬಿಡುತ್ತೇನೆ' ಎಂದು ಬೆದರಿಸುವವನಂತೆ ನನ್ನ ಭಕ್ತಿ; ನೀನು ಅನುಗ್ರಹಿಸುವಂತೆ ಒತ್ತಾಯವನ್ನು ಹೇರುತ್ತಿದ್ದೇನೆ. ಇದು ನಿಜ ಭಕ್ತಿಯೇ ಅಲ್ಲವಷ್ಟೆ?

341. ಒಡೆಯ ಸೇವಕ ಸಂಬಂಧ

ಚನ್ನ ಚೇರಮರ ಬಂಟ ನಾನಯ್ಯಾ
ಎನ್ನ ಚಾಗುಬೊಲ್ಲನ ಕಾವಗೋವನೆಂಬರು
ಲಿಂಗದೇವನ ಶರಣರೊಡೆಯರಾಗಿ
ತಮ್ಮ ತೊತ್ತಿನ ಮಗನೆಂದು ಒಲಿದಂತೆ ನುಡಿವರು. - ಬ.ವ.ದೀ.339

ಮಾದಾರ ಚನ್ನಯ್ಯ, ಶಿವನಿಗೆ ಅಂಬಲಿಯನ್ನು ಕುಡಿಸಿದ ಶಿವಭಕ್ತ. ಚೇರಮರಾಯ ಶಿವಭಕ್ತಿಯ ಸಾಧನೆಗಾಗಿ ರಾಜ್ಯದ ಅಧಿಕಾರವನ್ನೇ ತೊರೆದು ವಿರಾಗಿಯಾಗಿ, ಸದಾ ಶಿವನ ನೃತ್ಯವನ್ನು ದಿವ್ಯ ದೃಷ್ಟಿಯಿಂದ ನೋಡಿ ಆನಂದಿಸುತ್ತ ದೇವಾಲಯದಲ್ಲೇ ಉಳಿದಾತ. ಇಂಥವರ ಕೇವಲ ನಾನು. ಚಾಗುಬೊಲ್ಲ ಎಂದರೆ ಉಘೆ, ಚಾಂಗು ಭಲಾ ಎಂದು ಗುರುಪೀಠ, ರಾಜರ ಆಸ್ಥಾನದಲ್ಲಿ ಘೋಷ ಮಾಡುವವರು. ಇಂಥವರ ಮನೆಯನ್ನು ಕಾಯುವ ಗೋವ ನಾನು. ನಿಜ ಶರಣರು ಯಾರುಂಟೋ ಅವರೇ ನನ್ನ ಒಡೆಯರು. ಅವರು ನಾನು ಅವರ ಸೇವಕನ ಮಗನೆಂದು ಪ್ರೀತಿಯಿಂದ ನುಡಿಸುವ ಒಲವು, ಅಧಿಕಾರ ಉಳ್ಳವರು.

342. ಶರಣರೇ ಒಡೆಯರು

ಕಾಲಲೊದೆದು ಬಡಿದು ಜಡಿವರಯ್ಯಾ,
ಭಕ್ತಿಯಯ್ದದೆಂದು.
ಜರಿವರಯ್ಯಾ, ನುಡಿವರಯ್ಯಾ
ಲಿಂಗದೇವನ ಶರಣರೊಡೆಯರಾಗಿ. - ಬ.ವ.ದೀ.340

ಗುರು - ಶಿಷ್ಯ ಸಂಬಂಧ, ಮಾಲಿಕ - ಸೇವಕ ಸಂಬಂಧದಲ್ಲಿ ಶಿಷ್ಯರು, ವಟುಗಳು, ಸೇವಕರು ತಪ್ಪು ಮಾಡಿದಾಗ ಗುರುಗಳ, ಮಾಲಿಕರು ಶಿಕ್ಷಿಸುವುದುಂಟು. ಹಿಂದಿನ ಕಾಲದಲ್ಲಿ ಗುರುಗಳು ಎಷ್ಟೇ ದಂಡಿಸಿದರೂ ಶಿಷ್ಯರು, ವಿದ್ಯಾರ್ಥಿಗಳು ಜ್ಞಾನಾರ್ಜನೆಯ ಆಸೆಯಿಂದ ಹರ್ಷದಿಂದ ಶಿಕ್ಷೆಯನ್ನು ಸ್ವೀಕರಿಸುತ್ತಿದ್ದರು. ಅಲ್ಲಮ ಪ್ರಭುದೇವರ ವಚನ ಬೇರೆ ಬೇರೆ ಕಾಲದ ಪರಿಸ್ಥಿತಿಯನ್ನು ಹೀಗೆ ಹೇಳುತ್ತದೆ :

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ
ಆಗಲೀ ಮಹಾಪ್ರಸಾದವೆಂಬೆನಯ್ಯ!
ತ್ರೇತ್ರಾಯುಗದಲ್ಲಿ ಶ್ರೀ ಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ
ಆಗಲೀ ಮಹಾಪ್ರಸಾದವೆಂಬೆನಯ್ಯ!
ದ್ವಾಪರಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ
ಆಗಲೀ ಮಹಾಪ್ರಸಾದ ಎಂಬೆನಯ್ಯ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲೀ ಮಹಾಪ್ರಸಾದ ಎಂಬೆನಯ್ಯ
ಗುಹೇಶ್ವರ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ನಾನು ಬೆರಗಾದೆನಯ್ಯಾ!

ಕೆಲವು ಋಷಿಮುನಿಗಳು ಜ್ಞಾನಿಗಳಿದ್ದರೂ ಕೋಪಿಷ್ಟರಾಗಿದ್ದರು. ಮತ್ತೆ ಕೆಲವರು ಸುಧಾರಿಸಲಿ ಎಂದು ಶಿಷ್ಯರನ್ನು ಶಿಕ್ಷಿಸುತ್ತಿದ್ದರು. ಕಾಲಲ್ಲಿ ಒದೆದು, ಕೋಲಿನಿಂದ ಬಡಿದು, ಮುಷ್ಟಿಯಿಂದ ಗುದ್ದುತ್ತಿದ್ದರು. ಮೂದಲಿಸಿ ಮಾತನಾಡುತ್ತಿದ್ದರು, ಹತ್ತು ಹಲವು ದೂಷಣೆಯ ಮಾತನಾಡುತ್ತಿದ್ದರು. ಇಷ್ಟೆಲ್ಲ ಮಾಡಿದರೂ ಶರಣರೇ ನಿಜ ಒಡೆಯರಾಗಿ ಆ ಎಲ್ಲ ವರ್ತನೆಗಳನ್ನು ಸಹಿಸಿಕೊಂಡು ಸಂತೋಷದಿಂದ ಸೇವೆ ಮಾಡುತ್ತೇನೆ.

ಇಲ್ಲಿ ಇನ್ನೂ ಒಂದು ಊಹಿಸಬಹುದು. ಬಸವ ಮಹಾಮನೆಗೆ ಅಸಂಖ್ಯಾತ ಜನರು ಬರುತ್ತಿದ್ದರು. ಅದರಲ್ಲಿ ಸ್ವಾಮಿಗಳು, ವಿರಕ್ತರು, ದೀಕ್ಷಾವಂತರು ಎಲ್ಲರೂ ಬರುತ್ತಿದ್ದರು. ಕೆಲವೊಮ್ಮೆ ಅವರು ಸೇವಕರ ಮೇಲೆ ಅಧಿಕಾರ ಚಲಾಯಿಸ ಹೋಗುತ್ತಿದ್ದರು. ಸೇವೆ ಮಾಡುವ ಸಿಬ್ಬಂದಿಯಲ್ಲಿ ತಪ್ಪು ಹುಡುಕಿ ಹರಿಹಾಯುತ್ತಿದ್ದರು, ಜಡಿಯುತ್ತಿದ್ದರು. ಸೇವಕರಿಗೆ ಕಿರಿಕಿರಿಯಾಗಿ ನೋವಾಗುವುದುಂಟು. ಅಂಥ ಪ್ರಸಂಗದಲ್ಲಿ ನೊಂದ ಸೇವಕರನ್ನು ಗುರು ಬಸವಣ್ಣನವರು ಹೀಗೆ ಸಮಾಧಾನ ಮಾಡಿರಬಹುದು. ಈ ವಿಚಾರವನ್ನು ಪುಷ್ಟೀಕರಿಸುವ ಭಾವ ಮುಂದಿನ ವಚನದಲ್ಲಿದೆ.

343. ಶರಣರೇ ಒಡೆಯರು

ನಡೆವರಯ್ಯಾ ಒಡೆಯರು ತನು -ಮನ-ಧನದ ಮೇಲೆ
ನುಡಿವರಯ್ಯಾ ಒಂದು ನಿಮಿಷ ಬಾರದಿದ್ದಡೆ;

ಜರಿವರಯ್ಯಾ ಒಡೆಯರು ಮನಬಂದ ಪರಿಯಲಿ;
ಶಿವ ಶಿವಾ! ಅಣಿವರಯ್ಯಾ ಮಂಡೆಯನೂರಿ
ಲಿಂಗದೇವಾ ನಿಮ್ಮ ಶರಣರು. - ಬ.ವ.ದೀ.341

ಒಬ್ಬವ್ಯಕ್ತಿ ತನ್ನ ತನು ಮನ ಧನಗಳನ್ನರ್ಪಿಸಿ ದೇವನಿಗೆ, ಗುರುವಿಗೆ, ಜಂಗಮಕ್ಕೆ ಶರಣರಿಗೆ ಶರಣಾದ ಮೇಲೆ ಅವರು ವ್ಯಕ್ತಿಯ ತನು ಮನ ಧನಗಳನ್ನು ಪ್ರೇಮ ಪೂರ್ವಕವಾಗಿ ಬಳಸಿಕೊಳ್ಳುವರು.

ಗುರುವು ಶಿಷ್ಯನನ್ನು, ಮಾಲಿಕ ಸೇವಕನನ್ನು ಕರೆದ ತಕ್ಷಣ ಬರದೇ ಇದ್ದರೆ ದೂಷಿಸುವರು, ಕಠಿಣ ಮಾತುಗಳಿಂದ ಜರಿಯುವರು, ತಲೆಯ ಮೇಲೆ ಅಣಿ (ಕುಟ್ಟು)ವರು. ಅವರು ಪ್ರಾಣದ ಮೇಲೂ ಒಡೆಯರು. ಆದ್ದರಿಂದ ಆ ರೀತಿ ಉಗ್ರ ಕೋಪವನ್ನು ತೋರಿದಾಗ ಸಾಧಕರು, ಸೇವಕರು ಬೇಸರಿಸಬಾರದು. ತಮ್ಮ ವ್ಯಕ್ತಿತ್ವವನ್ನು ಪೂರ್ಣಗೊಳಿಸಲು ಇತರರ ಇಂಥ ವರ್ತನೆ ಸಹಕಾರಿಯಾಗುತ್ತವೆ ಎಂದು ಭಾವಿಸುವ ಚಿತ್ತ ಸಮತೆ ರೂಢಿಸಿಕೊಳ್ಳಬೇಕು.

ಈ ಮಾತುಗಳನ್ನು ಉಪದೇಶ ರೂಪದಲ್ಲಿ ತಮ್ಮ ಮೇಲೆ ಹಾಕಿಕೊಂಡು ಧರ್ಮಪಿತರು ಹೇಳಿದ್ದಾರೆಂದು ನಾವು ಊಹಿಸಬಹುದು. ಏಕೆಂದರೆ ಶರಣರು ಅತ್ಯಂತ ಗೌರವ ಸ್ಥಾನದಲ್ಲಿ ಧರ್ಮಪಿತ ಬಸವಣ್ಣನವರನ್ನು ಇಟ್ಟಿದ್ದಾರೆ. ಅವರ ಮಂಡೆಯ ಮೇಲೆ ಅಣಿವುದಾಗಿ ಭಾವಿಸಲಾರೆವು. ಇನ್ನು ಸಾಧಕರಾಗಿದ್ದಾಗ ಗುರು ಸೇವೆ ಮಾಡುವಾಗ ಈ ಅನುಭವ ಹೊಂದಿದ್ದಾರೆಂದರೆ ಅದೂ ಸಹ ಅಸಂಭವ. ಏಕೆಂದರೆ ಗುರು ಬಸವಣ್ಣನವರಂಥ ಸೂಕ್ಷ್ಮ ಸಂವೇದಿ ಮನಸ್ಸು ಇರುವವರು ಗುರುಗಳು ನಿರೀಕ್ಷಿಸುವ ಮುನ್ನವೇ ಅವರ ಮನೋಗತ ಅಪೇಕ್ಷೆಗಳನ್ನು ಪೂರೈಸುವರು.

ವೈವಿಧ್ಯವಾದ ಜನಗಳಿಂದ ತುಂಬಿದ ಮಹಾಮನೆಯಲ್ಲಿ ಇರುವ ಜನರಿಂದ ಬಹುಶಃ ಅಂಥ ಒರಟು ವರ್ತನೆ ಆದಾಗ ಅದನ್ನು ಸಹಿಸಿಕೊಳ್ಳಬೇಕು. ಅಂಥ ಜನರೇ ಧರ್ಮದ ಜೀವಾಳ ಎಂದು ಕೆಲಸಗಾರರನ್ನು ಸಮಾಧಾನ ಪಡಿಸಿದ್ದಾರೆಂಬುದು ಸೂಕ್ತ ವಿವರಣೆಯಾಗದಿರದು!!

344. ಸದ್‌ಭಕ್ತರೇ ಒಡೆಯರು

ಅರ್ಥಪ್ರಾಣ ಅಭಿಮಾನಕ್ಕೆ ಒಡೆಯರು ಸದ್ಭಕ್ತರಲ್ಲದೆ
ಎನಗಾರೂ ಇಲ್ಲವಯ್ಯಾ,
ಲಿಂಗದೇವಾ, ನೀವೇ ಪ್ರಮಾಣು. - ಬ.ವ.ದೀ.342

ಈ ಮಾತು ಬಹಳ ಮಹತ್ವಪೂರ್ಣ. ಧರ್ಮಪಿತ ಬಸವಣ್ಣನವರು ಗುರುವೂ ಅಹುದು ಪ್ರಧಾನಿಯೂ ಅಹುದು. ಗುರು (ಪೀಠಾಧಿಪತಿ) ಎಷ್ಟೇ ದೊಡ್ಡವರಿರಲಿ, ಅವನಿಗಿಂತ ಮಿಗಿಲು ಸದ್ಭಕ್ತರು. ಆದ್ದರಿಂದ ಗುರುವು ಗಳಿಸುವ ಅರ್ಥಕ್ಕೆ ಒಡೆಯರಾರು? ಸದ್ಭಕ್ತರು! ಆದ್ದರಿಂದ ಸದ್ಭಕ್ತರ ಕೈಯಲ್ಲಿದೆ ಗುರುವಿನ ಅರ್ಥ, ಪ್ರಾಣ ಮತ್ತು ಅಭಿಮಾನ. ಪ್ರಧಾನಿ ಬಸವಣ್ಣನವರು ಉನ್ನತ ಹುದ್ದೆಯಲ್ಲಿರುವುದು ನಿಜ, ಆದರೆ ಅವರ ದೃಷ್ಟಿಯಲ್ಲಿ ಅವರ ಒಡೆಯರು ಪ್ರಜೆಗಳು; ಪ್ರಜೆಗಳ ಸ್ವಾಮ್ಯತ್ವ ರಾಜ ಅಥವಾ ಮಂತ್ರಿಯ ಅರ್ಥ, ಪ್ರಾಣ ಅಭಿಮಾನದ ಮೇಲಿದೆ. ಮಾತ್ರವಲ್ಲ ಇವುಗಳ ರಕ್ಷಕರೂ ಪ್ರಜೆಗಳೆ!

ಗುರು ಬಸವಣ್ಣನವರ ವಚನಗಳನ್ನು ಸಾಂಪ್ರದಾಯಿಕ ಶೈಲಿಯಲ್ಲಿ ಅರ್ಥ ಮಾಡದೆ ಅವುಗಳ ಧ್ವನ್ಯಾರ್ಥವನ್ನು ಗ್ರಹಿಸಿದಾಗ ಈ ವಚನದಲ್ಲಿ ಪ್ರಜಾಪ್ರಭುತ್ವದ ವ್ಯಾಖ್ಯಾನ ತೋರಿ ಬರುತ್ತದೆ. ಅವರು ಗೃಹಸ್ಥರಾಗಿದ್ದರೂ ತನ್ನ ಕುಟುಂಬ ಪರಿವಾರಕ್ಕೆ ಸಂಪತ್ತು ಸಂಗ್ರಹಿಸದೆ ಎಲ್ಲವೂ ಶರಣರದೆ ಎಂಬ ಮನೋಭಾವವನ್ನು ತಾಳಿದ್ದರು. ಗುರು ಬಸವಣ್ಣನವರ ಈ ನಿಲುವು ವಿರಕ್ತ ಮಠಾಧೀಶರಿಗೆ, ಎಲ್ಲ ಸ್ವಾಮಿಗಳಿಗೆ ಮಾರ್ಗದರ್ಶಕ ಸೂಚಿಯಾಗಬೇಕು.

ನನ್ನ ಸಮಸ್ತಕ್ಕೂ ಸದ್ಭಕ್ತರೇ ಒಡೆಯರು ಎಂದು ಘೋಷಿಸಿದ ಗುರು ಬಸವಣ್ಣನವರು ಲಿಂಗದೇವನ ಸಾಕ್ಷಿಯಾಗಿ ಹೇಳುತ್ತಾರೆ, "ಭೃತ್ಯನು ಅಪರಾಧವನ್ನು ಮಾಡಿ ಸಿಕ್ಕಿಬಿದ್ದರೆ ಒಡೆಯನು ದಂಡವನ್ನು ಕಟ್ಟಿ ಬಿಡಿಸಿಕೊಂಡು ಬರಬೇಕಾಗುತ್ತದೆ. ಹಾಗೆ ನಾನು ನುಡಿದ ಮಾತು ಪಾಲಿಸದೆ ಇದ್ದರೆ ಲಿಂಗದೇವಾ, ನಿನಗೆ ಅಪವಾದ ಉಂಟಾಗುತ್ತದೆ." ಎಂದು.

(ಮುಂದುವರಿಯುವುದು)

ಐತಿಹಾಸಿಕ 23ನೇ ಶರಣ ಮೇಳ
ಸಮಗ್ರ ವರದಿ

- ಕರಿಬಸಪ್ಪ ಕೋರಿಶೆಟ್ಟರು

ಸತ್ಯ ಶರಣರು ಉಳುವಿಗೆ ಸಾಗಿ ಬಸವಯ್ಯ
ಮಿಥ್ಯಾದಿ ಕಲ್ಯಾಣ ಹಾಳೋ ಬಸವಯ್ಯ
ಮತ್ತೆ ನೀವು ಬರುವುದಕ್ಕೆ ಬಸವಯ್ಯ
ಸತ್ಯ ಏಳು ನೂರು ಎಪ್ಪತ್ತು ವರುಷ ಬಸವಯ್ಯ

ಇದು ನಮ್ಮ ಆದಿ ಶರಣರ ಕಾಲಜ್ಞಾನದ ನುಡಿ; ಧರ್ಮ ಸಂಸ್ಥಾಪಕರಾದ ಗುರು ಬಸವಣ್ಣನವರು ವರ್ಣಾಂತರ ವಿವಾಹ ಮಾಡಿಸಿದ್ದಕ್ಕಾಗಿ ಗಡಿಪಾರು ಶಿಕ್ಷೆಯನ್ನು ಹೊಂದಿ ಕಲ್ಯಾಣ ವನ್ನು ತೊರೆದಾಗ ಮುಗ್ಧ ಸಂಗಯ್ಯನವರು ನುಡಿದ ಪವಿತ್ರ ವಾಣಿ.

ನಾವೊಂದು ವಿಷಯವನ್ನು ಗಮನಿಸಬೇಕು ಮಹಾತ್ಮರು - ಶರಣರು ಮಾಡಿದ ಸಂಕಲ್ಪ ಎಂದಿಗೂ ಹುಸಿಯಾಗುವುದಿಲ್ಲ, ಅದಕ್ಕೆ ಎಷ್ಟೇ ಅಡೆತಡೆಗಳು ಸಾಮಾನ್ಯ ವ್ಯಕ್ತಿಗಳಿಂದ ಬಂದರೂ ಸಹ ಅವೆಲ್ಲ ಕಾಲಚಕ್ರದಲ್ಲಿ ಸಿಕ್ಕು ನಶಿಸಿ ಮತ್ತೆ ಶರಣರ ಸಂಕಲ್ಪವೇ ವಾಸ್ತವಕ್ಕೆ ಬರುವುದು ಹಾಗೆಯೇ ನಮ್ಮ ಶರಣ ಮೇಳ ಉತ್ಸವವೂ ಸಹ; ಇದೊಂದು ಆದಿ ಶರಣರ ಸಂಕಲ್ಪ. ವೀರಗಣಾಚಾರಿ ಮಡಿವಾಳ ಮಾಚಿತಂದೆಗಳವರ ಕಾಲಜ್ಞಾನದ ವಿವಿಧ ವಚನಗಳಲ್ಲಿ ಈ ಶರಣಮೇಳ ನಡೆಯುವದರ ಬಗ್ಗೆ ಸೂಚ್ಯವಾಗಿ ನುಡಿದಿರುವುದನ್ನು ಅಧ್ಯಯನ ಶೀಲರಾದ ತಾವೆಲ್ಲ ಶರಣ ಬಂಧುಗಳು ಅರಿತಿರಬಹುದು. ಹಾಗೆಯೇ ಬಸವ ಧರ್ಮ ಪೀಠ ಸ್ಥಾಪನೆ, ಮಹಿಳಾ ಜಗದ್ಗುರು ಪೀಠ ಸ್ಥಾಪನೆ - ಇವುಗಳಲ್ಲಿ ನಮ್ಮೆಲ್ಲರ ಪಾತ್ರ ನಿಮಿತ್ತಮಾತ್ರ ಆದರೆ ಆದಿ ಪ್ರಮಥರ ಸತ್ಸಂಕಲ್ಪದ ದೈವೀ ತರಂಗಗಳೇ ಈ ಎಲ್ಲ ಘಟನಾವಳಿಗಳ ಹಿಂದಿನ ಶಕ್ತಿ.

1988ರಿಂದ ಪ್ರಾರಂಭವಾಗಿ ಸತತ 23ನೇ ವರ್ಷಕ್ಕೆ ಪಾದಾರ್ಪಣೆಗೈದ ಈ ಮಹೋತ್ಸವದಲ್ಲಿ ಪಾಲ್ಗೊಂಡು ನಲಿನಲಿದಾಡುವದೇ ನಮ್ಮ ಜೀವನದ ಸುವರ್ಣ ಘಳಿಗೆಗಳಲ್ಲಿ ಒಂದು. ಐದು ದಿನಗಳ ಶರಣ ಮೇಳ ನಮ್ಮ ಮನದ ಮಾಲಿನ್ಯವನ್ನು ತೊಳೆದು ಪರಿಶುದ್ಧತೆಯನ್ನು ಮೂಡಿಸುತ್ತದೆ. ವಿಕಾರಗಳನ್ನು ಕಿತ್ತು ವಿಕಾಸಗೊಳಿಸುತ್ತದೆ. ಸಂಕುಚಿತ ಮನಃಸ್ಥಿತಿಯನ್ನು ವಿಶಾಲಗೊಳಿಸುತ್ತದೆ. ಮತ್ತೆ ಮತ್ತೆ ಹೊಸ ಹುರುಪು - ಉತ್ಸಾಹಗಳೊಂದಿಗೆ ಬದುಕನ್ನೆದುರಿಸುವ ಛಲವನ್ನು ಕಲಿಸುತ್ತದೆ. ಇಂಥ ಶರಣ ಮೇಳದಲ್ಲಿ ಪಾಲ್ಗೊಂಡು ಹಾಡಿ ಪಾಡಿ ನಲಿಯುವ ನಮ್ಮಲ್ಲಿ ಯಾವುದೇ ಜಾತಿ - ಸೀಮೆ - ಅಂತಸ್ತು ಭಾಷೆಗಳ ಭೇದವಿಲ್ಲ. ವಿಪ್ರನಿಂದ ಅಂತ್ಯಜನವರೆಗೆ ಸರ್ವರೂ ನಮ್ಮ ಧರ್ಮ ಬಂಧುಗಳೇ ಎಂಬ ಹೃದಯ ವೈಶಾಲ್ಯತೆ, ಆಂಧ್ರ - ಮಹಾರಾಷ್ಟ್ರ, ತಮಿಳುನಾಡು ಎಂಬ ಗಡಿ ಭೇದವಿಲ್ಲದೇ ನಾವೆಲ್ಲ ಅಪ್ಪ ಬಸವಣ್ಣನವರ ಮಹಾಮನೆಯ ಮಕ್ಕಳು ಎಂಬ ಸಹೋದರತ್ವ, ಬಯಲುಸೀಮೆ-ಮಲೆನಾಡು ಎಂಬ ವ್ಯತ್ಯಾಸ ಮಾಡುವ ಸಂಕುಚಿತ - ಸೀಮಿತ ಬುದ್ಧಿಯನ್ನು ನಿವಾರಿಸಿ ನಾವೆಲ್ಲ ಒಂದೇ ಎಂಬ ಪ್ರಾಂಜಲ ಮನಃಸ್ಥಿತಿ - ಇವನ್ನೆಲ್ಲ ತಿಳಿಸಿ ನಮಗೆ ಬದುಕಲು ಕಲಿಸುವ ಏಕೈಕ ಸಮಾವೇಶವೇ ಈ ಶರಣ ಮೇಳ.

ಧರ್ಮ ಸಂಸ್ಥಾಪಕರಾದ ಗುರು ಬಸವಣ್ಣನವರ ತಪೋಭೂಮಿ, ವಿದ್ಯಾಸ್ಥಾನ-ಲಿಂಗೈಕ್ಯ ಕ್ಷೇತ್ರವಾದ ಲಿಂಗಾಯತ ಧರ್ಮೀಯರ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ 2010ರ ಜನವರಿ 11ರಿಂದ 15ರವರೆಗೆ ಸಮಾವೇಶಗೊಂಡಿದ್ದ ಶರಣ ಮೇಳ ಉತ್ಸವದ ಕೆಲವು ಪ್ರಮುಖ ಘಟನೆ ನೋಡೋಣ ಬನ್ನಿ.......

ಜನವರಿ 11ರಿಂದ ಉತ್ಸವ ಪ್ರಾರಂಭವಾದರೂ ಸಹ ಅದು ವಿಧ್ಯುಕ್ತವಾಗಿ ವಚನ ಪಠಣದೊಂದಿಗೆ ಶುಭಾರಂಭಗೊಳ್ಳುವುದು ಜನವರಿ 9ರಿಂದ. ಅಂದು ಬೆಳಿಗೆ 8 ಘಂಟೆಗೆ ಬಸವ ಧರ್ಮ ಪೀಠದ ಮಹಾಮನೆ ಮಹಾಮಠದ ಆವರಣದಲ್ಲಿನ ವಚನ ಮಂಟಪದಲ್ಲಿ ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯ ಪಠಣ ಪ್ರಾರಂಭಗೊಂಡು ದಿ.15ರ ರಾತ್ರಿ 10 ಗಂಟೆಗೆ ಮಂಗಲಗೊಳ್ಳುತ್ತದೆ. ಹಾಗೆಯೇ ದಿ. 9ರಂದು ಶರಣ (ಶನಿ)ವಾರ ಬೆಳಿಗ್ಗೆ 8 ಘಂಟೆಗೆ ಬಸವ

ಧರ್ಮ ಪೀಠಾಧ್ಯಕ್ಷರಾದ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ.ಮಹಾದೇವಿಯವರು ಪ್ರಪ್ರಥಮವಾಗಿ ವಚನ ಪಠಣಗೈದು ಶುಭಾರಂಭ ಮಾಡಿದರು.

ಅಲ್ಲಿಂದ ಮುಂದೆ ಶರಣ ಬಂಧುಗಳು ಒಬ್ಬೊಬ್ಬರಾಗಿ ವಚನ ಪಠಣ ಗೈಯುತ್ತಿದ್ದುದು ವಿಶೇಷವಾಗಿತ್ತು. ಇದು ಅಮೃತ ಸರದ ಸ್ವರ್ಣ ಮಂದಿರದಲ್ಲಿ ಸಿಖ್ ಧರ್ಮ ಬಂಧುಗಳು ತಮ್ಮ ಧರ್ಮಗ್ರಂಥವಾದ "ಗ್ರಂಥ ಸಾಹೀಬ್" ಅನ್ನು ನಿರಂತರ ಪಠಣ ಮಾಡುವ ದೈವೀ ದೃಶ್ಯವನ್ನು ನೆನಪಿಸುವಂತಿತ್ತು. ಈ ಪಠಣಕ್ಕೆ ಅವರು 'ಗುರು ಬಾನಿ' ಪಠಣ ಎನ್ನುತ್ತಾರೆ. 'ಗುರು ಬಾನಿ' ಎಂದರೆ ಗುರು ವಾಣಿ ಎಂದರ್ಥ. ಅಂದರೆ ಸಿಖ್ ಧರ್ಮ ಸಂಸ್ಥಾಪಕ ಗುರುನಾನಕ್ ಬೋಧಿಸಿದ ವಾಣಿ ಎಂದು ಮತ್ತು "ಗ್ರಂಥ ಸಾಹೀಬ್" ಬರೆಯಲ್ಪಟ್ಟ ಭಾಷೆಯಾದ ಪಂಜಾಬಿಯನ್ನು ಅವರು ಪಂಜಾಬಿ ಭಾಷೆ ಎಂದು ಸಂಬೋಧಿಸದೆ ಗುರು ಮುಖಿ ಭಾಷೆ ಎಂದು ಸಂಬೋಧಿಸುತ್ತಾರೆ. ಅವರಲ್ಲಿರುವ ಇಂತಹ ಧಾರ್ಮಿಕ ಶಿಸ್ತನ್ನು ನಮ್ಮ ಧರ್ಮೀಯರಲ್ಲಿ ಮೂಡಿಸಬೇಕೆಂಬ ಅದಮ್ಯ ಹಂಬಲದಿಂದ ಪೂಜ್ಯ ಮಾತಾಜಿಯವರು "ಶರಣ ಭಾಷೆ"ಯಾದ ಕನ್ನಡವಲ್ಲಿರುವ ವಚನ ಸಾಹಿತ್ಯವನ್ನು ಕಡ್ಡಾಯವಾಗಿ ಪಠಣಗೈಯುವ ಧಾರ್ಮಿಕ ಶಿಸ್ತನ್ನು ಜಾರಿಗೊಳಿಸಿದ್ದಾರೆ. ಈ ವಚನ ಸಾಹಿತ್ಯದ ಉಳಿವಿಗಾಗಿ ತನ್ನ 24ನೆಯ ವಯಸ್ಸಿನಲ್ಲಿ ಸಹ್ಯಾದ್ರಿ ಪರ್ವತ ಶ್ರೇಣಿಗಳ ಘನಘೋರ ಅರಣ್ಯ ಮಧ್ಯದ ಗುಹೆಗಳಲ್ಲಿ ಪ್ರಾಣದ ಹಂಗು ತೊರೆದು ಪ್ರಯತ್ನಿಸಿದ ಚಿನ್ಮಯಜ್ಞಾನಿ ವೀರ ವೈರಾಗ್ಯನಿಧಿ ಚನ್ನಬಸವಣ್ಣನವರ ಆ ಚೇತನಕ್ಕೆ ಮಾತಾಜಿಯವರ ಈ ಕಾರ್ಯದಿಂದ ಎಷ್ಟೊಂದು ಸಂತೋಷ ವಾಗಿರಬಹುದಲ್ಲವೇ.......?

ದಿ. 11ರಂದು ಬೆಳಿಗ್ಗೆ ಧರ್ಮ ಸಂಸ್ಥಾಪಕರಾದ ಗುರು ಬಸವ ತಂದೆಯ ಪೂಜೆಯೊಂದಿಗೆ ಬೃಹತ್ ವೇದಿಕೆಯ ದೈವೀಕರಣಗೊಳಿಸಿ ಚಾರಿತ್ರಿಕ ಉತ್ಸವವನ್ನು ವಿಧ್ಯುಕ್ತವಾಗಿ ಶುಭಾರಂಭ ಮಾಡಲಾಯಿತು. ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ ದಿವ್ಯ ಸನ್ನಿಧಿಯಲ್ಲಿ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಆದಿ ಪ್ರಮಥರ ಪೂಜೆ ನೆರವೇರಿಸಿದರು.

ಅಂದು ಇಡೀ ದಿನ ಅನುಭವ ಮಂಟಪದ ಮಾದರಿಯಲ್ಲಿಯೇ ಧಾರ್ಮಿಕ ಸಾಮಾಜಿಕ, ರಾಷ್ಟ್ರೀಯ ಮಹತ್ವದ ವಿಷಯಗಳ ಚಿಂತನ-ಮಂಥನ, ಆತ್ಮೀಯ ಸಂವಾದ ಜರುಗಿತಲ್ಲದೆ ಶರಣ ಬಂಧುಗಳ ಸಹಮತದೊಂದಿಗೆ ಅಂಗೀಕಾರಗೊಂಡ ನಿರ್ಣಯಗಳನ್ನು ದಿ. 15ರ ಸಮಾರೋಪ ಸಮಾರಂಭದಲ್ಲಿ ಶರಣ ಮೇಳದ ನಿರ್ಣಯಗಳೆಂದು ಘೋಷಿಸಲಾಯಿತು.

ಮೀಸಲಾತಿ ವ್ಯವಸ್ಥೆಯ ಮರು ವಿಮರ್ಶೆ ಅಗತ್ಯ -ಮಾತಾಜಿ

12ನೇ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ತತ್ವಗಳನ್ನು ಪ್ರತಿಪಾದಿಸುವ ಯಾವ ಮಠಾಧೀಶರೂ ಸಹ ಹಿಂದುಳಿದವರ ಬಗ್ಗೆ ಅಷ್ಟೊಂದು ಕಾಳಜಿ ವಹಿಸಲಿಲ್ಲ. ಹೀಗಾಗಿ ನಿಮ್ನಾತಿ ನಿಮ್ನವರ್ಗದ ಜನರು ತಮ್ಮ ಬದುಕನ್ನು ಸರ್ವಾಂಗ ಸುಂದರವಾಗಿ ರೂಪಿಸಿಕೊಳ್ಳಲು ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಪ್ರಸ್ತುತ ಮೀಸಲಾತಿ ಪದ್ಧತಿಯ ಮರು ವಿಮರ್ಶೆ ಅಗತ್ಯವಿದೆ ಎಂದು ಪೂಜ್ಯ ಮಾತಾಜಿ ಯವರು ಅಭಿಪ್ರಾಯ ಪಟ್ಟರು. ಅವರು ದಿ.12ರಂದು ಬೆಳಿಗ್ಗೆ ಹಿಂದುಳಿದ ವರ್ಗಗಳ ನೇತಾರರ ಸಮಾವೇಶದ ದಿವ್ಯ ಸನ್ನಿಧಿವಹಿಸಿ ಆಶೀರ್ವಚನ ನೀಡುತ್ತಿದ್ದರು. ದಲಿತ ವರ್ಗಕ್ಕೆ ಧ್ವನಿ ನೀಡಿದವರೇ ಆದಿ ಪ್ರಮಥ ಗುರು ಬಸವಣ್ಣನವರು ಎಂದರು. ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀ ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಶ್ರೀ ಅಶೋಕ್ ಕಾಟವೆಯವರು ಮಾತನಾಡಿ ಪೂಜ್ಯ ಮಾತಾಜಿಯವರ ಅಭಿಪ್ರಾಯದಂತೆ ಹಿಂದುಳಿದ ವರ್ಗದವರಲ್ಲಿ ನಾಯಕತ್ವದ ಕೊರತೆ ಎದ್ದು ಕಾಣುತ್ತಿದೆ. ಈವರೆಗೆ ಬೆಳೆದು ಬಂದ ನಾಯಕರು ಒಂದು ನಿರ್ದಿಷ್ಟ ಮಟ್ಟಕ್ಕೆ ಬೆಳೆದು ನಂತರ ಹಿಂದುಳಿದ ವರ್ಗದವರನ್ನು ಕೈ ಬಿಟ್ಟಿದ್ದಾರೆ. ಹೀಗಾಗಿ ಹಿಂದುಳಿದವರ ಉನ್ನತಿಯ ಬಗ್ಗೆ ಯಾವ ಚಳುವಳಿಯು ನಡೆಯಲಿಲ್ಲ. ದಿ.ದೇವರಾಜು ಅರಸು ಅವರು ಹಿಂದುಳಿದವರ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದರು. ಹೀಗಾಗಿ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ಅನೇಕ ಯೋಜನೆ

ರೂಪಿಸಿದರಲ್ಲದೆ ನಿಗಮ ಮಂಡಳಿಗಳನ್ನು ಸ್ಥಾಪಿಸಿದರು. ನಾವೆಲ್ಲ ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಇನ್ನೂ ಹಿಂದುಳಿದವರ ಕಲ್ಯಾಣದ ಬಗ್ಗೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಗಮನ ಸೆಳೆಯೋಣ ಎಂದರು.

ಕರ್ನಾಟಕ ರಾಜ್ಯ ಹೆಳವ ಸಮಾಜದ ಅಧ್ಯಕ್ಷ ಈ.ಕೃಷ್ಣಪ್ಪನವರು ಮಾತನಾಡಿ 12ನೇ ಶತಮಾನದಲ್ಲಿ ಹಿಂದುಳಿದವರಿಗೆ ಸಾಮಾಜಿಕ ನ್ಯಾಯ ಸಿಕ್ಕಿತ್ತು. ಆದರೆ ಕಲ್ಯಾಣ ಕ್ರಾಂತಿಯ ತರುವಾಯ ಈ ವರ್ಗಗಳಿಗೆ ನೇತಾರರೇ ಇಲ್ಲದಂತಾಯಿತು. ನಾಯಕತ್ವದ ಕೊರತೆಯಿಂದಾಗಿ ಸಂಘಟನೆ ಪ್ರಗತಿ ಆಗಲಿಲ್ಲ. ಸಾಮಾಜಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ರಂಗಳಲ್ಲಿ ಅಸ್ಪೃಶ್ಯರ ಬೆಳವಣಿಗೆ ಕುಂಠಿತವಾಯಿತು. ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯವು ದಲಿತ, ಅಸ್ಪೃಶ್ಯ ಜನರಿಂದ ಬರೆಯಲ್ಪಟ್ಟಿತು ಎಂದರೆ ಎಂತಹ ಆಶ್ಚರ್ಯವಲ್ಲವೆ? ವಚನಗಳೆಲ್ಲ ಕನ್ನಡದ ವೇದೋಪನಿಷತ್ತುಗಳು. ಅದು ದಲಿತ ಹಿಂದುಳಿದ ವರ್ಗದವರ ಸೊತ್ತು ಎಂಬುದನ್ನು ಚಪಲ ಚಿತ್ತರಾದ ಹಿಂದುಳಿದ ವರ್ಗವರು ಮರೆತಿದ್ದಾರೆ. ಪ್ರಜ್ಞಾವಂತ ಸಮುದಾಯದವರು ಗುರು ಬಸವಣ್ಣನವರನ್ನು ನಂಬಿ ಅವರ ವಿಚಾರಗಳನ್ನು ಅಳವಡಿಸಿಕೊಂಡು ಪ್ರಜ್ಞಾವಂತ ನಾಗರಿಕರಾಗಿ ಸಮಾಜದ ಮುಖ್ಯ ವಾಹಿನಿಯಲ್ಲಿದ್ದಾರೆ. ಆದರೆ ಹಿಂದುಳಿದವರ ಬದುಕು ಬದಲಾವಣೆಯಾಗಲೇ ಇಲ್ಲ. ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವದಲ್ಲಿ ಸಂವಿಧಾನಾತ್ಮಕ ಹಕ್ಕುಗಳು ಮತ್ತು ಮೀಸಲಾತಿಗಳು ಸೂಕ್ತರೀತಿಯಲ್ಲಿ ಹಂಚಿಕೆಯಾಗಲಿಲ್ಲ. ಹೀಗಾಗಿ ಹಿಂದುಳಿದವರು ಮತ್ತು ಮುಂದುವರೆದವರು ಎಂಬ ವ್ಯತ್ಯಾಸ ಸರಿಪಡಿಸಲು ಆಗಿಲ್ಲ. ಎಷ್ಟೋ ಆಯೋಗಗಳು ರಚನೆಯಾಗಿ ಸರ್ಕಾರಕ್ಕೆ ವರದಿ ಸಲ್ಲಿಸಿದರೂ ಯಾವ ಆಯೋಗದ ವರದಿಯೂ ಸಂಪೂರ್ಣ ಜಾರಿಯಾಗದ ಕಾರಣ ಹಿಂದುಳಿದವರ ಅಭಿವೃದ್ಧಿ ಮರೀಚಿಕೆಯಾಗಿದೆ. ಈ ವರ್ಗದಲ್ಲಿರುವ ನಾಯಕತ್ವದ ಕೊರತೆಯನ್ನು ಅಶೋಕ ಕಾಟವೆಯವರೇ ನೀಗಿಸಬೇಕು ಎಂದರು. ಸರ್ಕಾರದ ಪರವಾಗಿ ಅಶೋಕ ಕಾಟವೆ ಭಾಗವಹಿಸಿದ್ದರು. ಅವರು ಹಿಂದುಳಿದ ವರ್ಗದವರ ಪರ ನಿಂತಿದ್ದೇ ಆದರೆ ಅವರಿಗೆ ಸಂಪೂರ್ಣ ಬಲ, ಸಹಕಾರ ನೀಡುವುದಾಗಿ ತೀರ್ಮಾನಿಸ ಲಾಯಿತು. ಪೂಜ್ಯ ಮಾತಾಜಿಯವರ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಎಲ್ಲ ಮುಖಂಡರು ಮುಖ್ಯಮಂತ್ರಿಗಳನ್ನು ಭೇಟಿಮಾಡಲು ನಿರ್ಧರಿಸಲಾಯಿತು. ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷ ಎನ್. ಮೂರ್ತಿ ಬಸವ ಧ್ವಜಾರೋಹಣ ನೆರವೇರಿಸಿದರು. ಅಖಿಲ ಭಾರತ ಅಹಿಂದ(ಶಕ್ತಿ) ಪರಿಷತ್ ಅಧ್ಯಕ್ಷ ಎಂಜೇರಪ್ಪ ಮಡಿವಾಳ ಸ್ವಾಗತಿಸಿದರು. ಹಿಂದುಳಿದ ವರ್ಗಗಳ ಮಹಿಳೆಯರ ಸಮಸ್ಯೆಗಳ ವಿಷಯವಾಗಿ ಸವದತ್ತಿ ತಹಸೀಲ್ದಾರ್ ಶಾರದಾ ಕೋಲ್‌ಕಾರ್ ಮಾತನಾಡಿದರು. ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಗುರುಸ್ವಾಮಿ, ಗುಲಬರ್ಗಾದ ಕಾಯಕ ಶರಣರ ಒಕ್ಕೂಟದ ಅಧ್ಯಕ್ಷ ಭೀಮಪ್ಪ ಬೋನಾಳ, ಕ.ರಾಜ್ಯ ವನ್ನಿಯಾರ್ ಸಂಘದ ರಾಜ್ಯಾಧ್ಯಕ್ಷ ಎನ್. ಮಹಾಲಿಂಗಂ, ಪದ್ಮಶಾಲಿ ಸಮಾಜ ಅಭಿಲೇಖನಾಧಿಕಾರಿ ರಘು ಎಸ್. ಸೆಟ್ಟಿಗಾರ್ ಮತ್ತು ಮುಖಂಡ ನಟರಾಜ ಎಸ್. ಬಾಗಲಕೋಟೆ ಹೆಳವ ಸಮಾಜದ ಅಧ್ಯಕ್ಷ ಸದಾನಂದ ಹೆಳವರ್, ಹರಳಯ್ಯ ಸಮಾಜದ ಅಧ್ಯಕ್ಷ ಚಂದ್ರಶೇಖರ್ ಗಬ್ಬೂರ್‌ಕರ್, ಹರಳಯ್ಯ ಧರ್ಮ ಜಾಗೃತಿ ವೇದಿಕೆ ಅಧ್ಯಕ್ಷ ಸೈದಪ್ಪ ಸಂಗಮು, ಅಖಿಲ ಭಾರತ ತೊಗಟ ವೀರ ಕ್ಷತ್ರಿಯ ಮಹಾ ಮಂಡಳಿಯ ಅಧ್ಯಕ್ಷ ಎಂ.ಲಕ್ಷ್ಮಿನಾರಾಯಣ ಮತ್ತು ಜಂಟಿ ಕಾರ್ಯದರ್ಶಿ ಡಿ.ಸಿ.ಚೌಡಶೆಟ್ಟಿ, ಶ್ರೀಮದ್ ವೀರಾಟ ವಿಶ್ವಕರ್ಮ ವೇದಿಕೆಯ ಅಧ್ಯಕ್ಷ ರಾಜಗೋಪಾಲಾ ಚಾರ್, ಕುರುಬ ಸಮಾಜದ ಮುಖಂಡ ಜಿ.ಪಿ.ವೆಂಕಟರಾಜು, ಯಾದವ ಸಮಾಜದ ಮುಖಂಡ ಜಿ.ವೇಣುಯಾದವ, ರಾಜ್ಯ ದೊಂಬಿ ದಾಸರ ಸಂಘದ ಗೌರವಾಧ್ಯಕ್ಷ ಬಿ.ಎಸ್.ನಾರಾಯಣ ಸ್ವಾಮಿ, ಗುಲಬರ್ಗಾದ ಹೆಳವ ಸಮಾಜದ ಅಧ್ಯಕ್ಷ ಮಲ್ಲಿಕಾರ್ಜುನ ಹೆಳವರ್, ಅಮೃತ ಹೆಳವರು, ಶಿವಾನಂದ ಪಂಚಂಗಿ ಉಪಸ್ಥಿತರಿದ್ದರು.

ಬೆಂಗಳೂರಿನ ವಚನ ವಾಚಸ್ಪತಿ ಯಡೆಯೂರ ಮೂಡಲಗಿರಿ ಪ್ರವಚನ ನೀಡಿದರು. ಪೂಜ್ಯ ಚನ್ನಬಸವಾನಂದ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಸಂಜೆ 6-30ಕ್ಕೆ ರಾಷ್ಟ್ರೀಯ ಬಸವ ದಳದ 23ನೆಯ ಮಹಾಧಿವೇಶನ ಪೂಜ್ಯ ಮಾತಾಜಿಯವರ ದಿವ್ಯಸನ್ನಿಧಿಯಲ್ಲಿ ಶುಭಾರಂಭಗೊಂಡು ರಾಷ್ಟ್ರೀಯ ಬಸವ ದಳ ಸಂಘಟನೆಯ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಪ್ರಾಸ್ತಾವಿಕವಾಗಿ ಮಾತನಾಡಿದ ಪೂಜ್ಯ ಚನ್ನಬಸವಾನಂದ

ಸ್ವಾಮೀಜಿ ರಾಷ್ಟ್ರೀಯ ಬಸವ ದಳವನ್ನು ನಾವಿಂದು ಗ್ರಾಮೀಣ ಮಟ್ಟದಲ್ಲಿ ಸಂಘಟನೆ ಮಾಡಬೇಕಾಗಿದೆ. ಸಂಘಟನೆ ಎಂದರೆ ರಾಷ್ಟ್ರೀಯ ಬಸವ ದಳವೇ ಎಂಬುದನ್ನು ನಮ್ಮ ವಿರೋಧಿಗಳೂ ಒಪ್ಪಿಕೊಂಡಿದ್ದಾರೆ. ನಮಗೆ ಪರ್ಯಾಯವಾಗಿ ಅನೇಕ ಕೇಂದ್ರಗಳನ್ನು ಮಾಡ ಹೊರಟವರು ನಗೆ ಪಾಟಲಿಗೆ ಗುರಿಯಾಗಿರುವುದನ್ನು ಕಾಣುತ್ತಿದ್ದೇವೆ. ಏಕೆಂದರೆ ನಾವು ಸಂಘಟನೆ ಮಾಡುತ್ತಿರುವುದು ನಮ್ಮ ಅಪ್ಪ ಬಸವಣ್ಣನವರ ತತ್ವಗಳನ್ನು ಅಕ್ಷರಶಃ ತನು-ಮನ ಮುಟ್ಟಿ ಪ್ರಚಾರ ಗೈಯುವುದಕ್ಕಾಗಿ ಹೊರತು ಯಾರೊಬ್ಬರಿಗೂ ಪರ್ಯಾಯ ವ್ಯವಸ್ಥೆ ರೂಪಿಸಲಿಕ್ಕೆ ಅಲ್ಲ. ಆದ್ದರಿಂದ ನಮ್ಮಲ್ಲಿ ತತ್ವನಿಷ್ಠ ಧರ್ಮ ನಿಷ್ಠ ಶರಣ-ಶರಣೆಯರು ಮಾತ್ರ ಸಂಘಟಿತಗೊಳ್ಳುತ್ತಾರೆ. ನಮ್ಮವರೆಲ್ಲ ಗಟ್ಟಿಕಾಳುಗಳೇ. ಹೀಗಿರುವಾಗ ರಾಷ್ಟ್ರೀಯ ಬಸವ ದಳ ಸಂಘಟನೆಯನ್ನು ದುರ್ಬಲಗೊಳಿಸಲು ಯಾರೆಷ್ಟೇ ಪ್ರಯತ್ನ ಪಟ್ಟರೂ ಅವರಿಗೆ ನಿರಾಶೆ ಕಟ್ಟಿಟ್ಟ ಬುತ್ತಿ. ನಮ್ಮ ಸಂಘಟನೆಯ ಹೆಸರಿನಲ್ಲಿಯೇ ಇರುವ ಪದಗಳನ್ನು ತಾವು ಗಮನಿಸಬೇಕು. ರಾಷ್ಟ್ರೀಯ ಪದವು ದೇಶಭಕ್ತಿಯನ್ನು ಪ್ರತಿಬಿಂಬಿಸಿದರೆ ಬಸವ ಪದವು ಧರ್ಮಗುರು ನಿಷ್ಠೆಯನ್ನು ಪ್ರತಿಬಿಂಬಿಸುತ್ತದೆ. ದಳ ಎಂಬ ಪದವು ಸುವ್ಯವಸ್ಥಿತ ಜೋಡಣೆ ಎಂಬುದಾಗಿ ಸಾರುತ್ತದೆ. ಉದಾ: ನಾವು ಹೂವಿನ ದಳಗಳು ಎನ್ನುತ್ತೇವೆ. ಏಕೆಂದರೆ ಅವುಗಳ ಆಕರ್ಷಕ ಶಿಸ್ತುಬದ್ಧ ಜೋಡಣೆ ಪುಷ್ಪದ ಸೌಂದರ್ಯವನ್ನು ಇಮ್ಮಡಿಗೊಳಿಸುತ್ತದೆ. ಆದ್ದರಿಂದ ಧರ್ಮಗುರು ಭಕ್ತಿಯೊಂದಿಗೆ ರಾಷ್ಟ್ರ ನಿಷ್ಠೆಯನ್ನು ಹೊಂದಿದ ಶಿಸ್ತು ಬದ್ಧ ಶರಣ-ಶರಣೆಯರ ಒಕ್ಕೂಟವೇ ರಾಷ್ಟ್ರೀಯ ಬಸವ ದಳ ಎಂದು ಕರೆಯಲ್ಪಡುತ್ತದೆ. ಇದು ಪರಮ ಪೂಜ್ಯ ಅಪ್ಪಾಜಿ ಮಾತಾಜಿಯವರ ಕಲ್ಪನೆಯ ಕೂಸು. ಈಗ ಇದಕ್ಕೆ 23 ವರ್ಷ ತುಂಬಿದೆ. ಅಂದರೆ ಯೌವನಾವಸ್ಥೆಯನ್ನು ಪ್ರವೇಶಿಸಿದೆ. ಯೌವನದ ಸಮಯವು ಅಂದುಕೊಂಡದ್ದನ್ನು ಸಾಧಿಸುವ ಮಹತ್ವದ ಸಮಯ. ಆದ್ದರಿಂದ ಸಂಘಟನೆಯ ದೃಷ್ಟಿಯಿಂದ ಯೌವನಾವಸ್ಥೆಯಲ್ಲಿರುವ ನಾವು ಅಂದುಕೊಂಡದನ್ನು ಸಾಧಿಸಲೇ ಬೇಕು. ಈಗ ನಮ್ಮ ಮುಂದಿರುವ ಗುರಿ ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮನ್ನಣೆಯನ್ನು ಪಡೆಯುವುದೇ ಆಗಿದೆ. ಅದು ರಾಷ್ಟ್ರೀಯ ಬಸವ ದಳದಿಂದ ಮಾತ್ರ ಸಾಧ್ಯ. 23ನೆಯ ಯೌವನಕ್ಕೆ ಪಾದಾರ್ಪಣೆ ಮಾಡಿರುವ ರಾಷ್ಟ್ರೀಯ ಬಸವ ದಳ ಈ ಮಹಾಮಣಹವನ್ನು ಪೂರೈಸಲೇ ಬೇಕು. ಪೂಜ್ಯ ಮಾತಾಜಿಯವರು ಯಾವುದಕ್ಕೆ ಹೆಸರಿನ್ನಿಟ್ಟರೂ ಅದು ಅರ್ಥಗರ್ಭಿತವಾಗಿರುತ್ತದೆ. ರಾಷ್ಟ್ರೀಯ ಬಸವ ದಳ ಹೆಸರು ಹೇಗೆ ಅರ್ಥಪೂರ್ಣವಾಗಿದೆಯೋ ಹಾಗೆಯೇ ಶರಣ ಮೇಳ, ಕಲ್ಯಾಣ ಪರ್ವ, ಗಣ ಮೇಳ, ಶರಣ ಸಂಗಮ, ಶರಣ ಸಮಾಗಮ, ಬಸವ ಜ್ಯೋತಿ ಹೀಗೆ. ವೀರಶೈವ ವಾದಿಗಳನ್ನು, ಗುರು ಬಸವಣ್ಣನವರ ಧರ್ಮಗುರುತ್ವ ಒಪ್ಪದವರನ್ನು ನಮ್ಮ ಸಂಘಟನೆಯೊಳಗೆ ಕೈ ಹಾಕದಂತೆ ಕಾಯ್ದುಕೊಳ್ಳಬೇಕು. ವೇಷಧಾರಿಗಳನ್ನು ನಂಬಿ ಅವರಿಗೆ ಅವಕಾಶ ಕಲ್ಪಿಸುವುದು ಸಂಘಟನೆಗೆ ಅಪಾಯಕಾರಿ ಎಂಬುದನ್ನು ಅರ್ಥೈಸಿಕೊಳ್ಳಬೇಕೆಂದು ಪೂಜ್ಯ ಸ್ವಾಮೀಜಿ ನುಡಿದರು. ಆಂಧ್ರಪ್ರದೇಶದ ಕರ್ಚಲ್ ಅಕ್ಕಮಹಾದೇವಿ ಮಠದ ಚನ್ನಮಲ್ಲಿಕಾರ್ಜುನ ಸ್ವಾಮಿಗಳು ಬಸವ ಧ್ವಜಾರೋಹಣ ಮಾಡಿದರು. ಸವದತ್ತಿಯ ಗಣ್ಯ ವರ್ತಕ ಆನಂದ ಚೋಪ್ರಾ, ಬೈಲಹೊಂಗಲದ ಗಣ್ಯ ವರ್ತಕ ವೀರೇಶ್ ಕಿವುಡ್ ಸಣ್ಣವರ್, ಡಿ.ಸಿ.ಸಿ.ಬ್ಯಾಂಕ್ ಉಪಾಧ್ಯಕ್ಷ ಎಲ್.ಎಂ.ಪಾಟೀಲ್, ಸವದತ್ತಿಯ ಹಿರಿಯ ನ್ಯಾಯವಾದಿ ಎಂ.ಎಂ.ಹಿರಲಿಂಗಣ್ಣವರ್, ಕೆ.ಎ.ಎಸ್.ಅಧಿಕಾರಿ ಎಸ್.ದಿವಾಕರ್, ಕಲಬುರ್ಗಿ ಹೈಕೋರ್ಟ್ ಪೀಠದಲ್ಲಿ ಕೇಂದ್ರ ಸರ್ಕಾರದ ಪರ ವಕೀಲರಾದ ಗಂಗಶೆಟ್ಟಿ ಪಾಟೀಲ್, ಬೀದರ ಜಿ.ಪಂ ಶಿವರಾಜ್ ಹಾಸನ್‌ಕರ್, ಲಿಂಗಾಯತ ಮಹಾಸಭಾ ಉಪಾಧ್ಯಕ್ಷ ಶಿವರಾಜ ಪಾಟೀಲ್ ಅತಿವಾಳ, ಕುಶಲ್ ರಾವ್ ಪಾಟೀಲ್ ಉಪಸ್ಥಿತರಿದ್ದರು. ಆ.ಪ್ರ.ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷ ಧನರಾಜ ಜೀರಿಗೆ ಅಧ್ಯಕ್ಷತೆ ವಹಿಸಿದ್ದರು. ಕಲಬುರ್ಗಿ ರಾಷ್ಟ್ರೀಯ ಬಸವ ದಳದ ಆರ್.ಜಿ.ಶೆಟಗಾರ್ ಸ್ವಾಗತಿಸಿದರು. ಬೆಂಗಳೂರಿನ ಸುಜಾತ ಮೇಲೇಗೌಡ ಕಾರ್ಯಕ್ರಮ ನಿರೂಪಿಸಿದರು.

ಐತಿಹಾಸಿಕ ಶರಣ ಮೇಳಕ್ಕೆ ವಿಧ್ಯುಕ್ತ ಚಾಲನೆ

ಕಾರ್ಲ್‌ಮಾರ್ಕ್ಸ್ ಮೇಲೆ ಬಸವ ತತ್ವದ ಪ್ರಭಾವ - ಧರ್ಮಸಿಂಗ್

"12ನೇ ಶತಮಾನದಲ್ಲಿ ಸಮಾನತೆಯನ್ನು ಸಾರಿದ ವಿಶ್ವಗುರು ಬಸವಣ್ಣನವರ ತತ್ವಗಳು

ಇಡೀ ಜಗತ್ತನ್ನೇ ಪ್ರಭಾವಿತ ಗೊಳಿಸಿದವು. ಅದರಲ್ಲೂ ಕಾರ್ಲ್‌ಮಾರ್ಕ್ಸ್‌ರವರ ಮೇಲೆ ಬಸವಣ್ಣನವರ ತತ್ವದ ಪ್ರಭಾವ ಉಂಟಾಗಿರುವುದು ವಿಶೇಷ" ಎಂದು ಮಾಜಿ ಮುಖ್ಯಮಂತ್ರಿ ಬೀದರ್‌ನ ಹಾಲೀ ಸಂಸದ ಎನ್.ಧರ್ಮಸಿಂಗ್ ನುಡಿದರು. ಅವರು ಐತಿಹಾಸಿಕ ಶರಣ ಮೇಳವನ್ನು ವಿಧ್ಯುಕ್ತವಾಗಿ ಉದ್ಘಾಟಿಸಿ ಮಾತನಾಡುತ್ತಿದ್ದರು. ಗುರು ಬಸವಣ್ಣನವರ ತತ್ವಗಳು ಪ್ರಗತಿಪರ ಚಿಂತನೆಯನ್ನು ಒಳಗೊಂಡಿದ್ದು ಅವುಗಳನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇ ಆದರೆ ನಮ್ಮ ಬದುಕು ಸರ್ವಾಂಗ ಸುಂದರವಾಗಿ ರೂಪುಗೊಳ್ಳುವುದು ಎಂದು. ಇಂದು ಕ್ರಾಂತಿಕಾರಕ ವಿಚಾರಧಾರೆಗಳ ಅವಶ್ಯಕತೆ ಇದೆ ಎಂದರು. ಇವು ವ್ಯಕ್ತಿ ವ್ಯಕ್ತಿಗಳ ಆ ಮೂಲಕ ಸಮಾಜದ ಮನೋಬಲವನ್ನು ಹೆಚ್ಚಿಸುತ್ತದೆ ಎಂದ ಅವರು 12ನೇ ಶತಮಾನದಲ್ಲಿ ಸಮಾನತೆಯ ಸಂದೇಶ ಸಾರಿ ಅಂಧಶ್ರದ್ಧೆ ಮೂಢನಂಬಿಕೆ ನಿವಾರಿಸಲು ಶ್ರಮಿಸಿದ್ದ ಬಸವಣ್ಣನವರು ಸಮಾಜದಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ಮಾಡಿದರು. ಇಂತಹ ಮಹಾನ್‌ವ್ಯಕ್ತಿಯ ವಿಚಾರಧಾರೆಗಳ ಅಧ್ಯಯನ ದೇಶ ವಿದೇಶಗಳಲ್ಲಿ ನಡೆಯುತ್ತಿರುವುದು ಅದ್ಭುತ ಎಂದು ಬಣ್ಣಿಸಿದರು.

ಪೂಜ್ಯ ಮಾತಾಜಿಯವರು ಬಸವಣ್ಣನವರ ತತ್ವಗಳನ್ನು ಪ್ರಚಾರ ಮಾಡುವಂತಹ ಮಹತ್ವದ ಕಾರ್ಯದಲ್ಲಿ ತೊಡಗಿರುವುದು ಶ್ಲಾಘನೀಯವಾದುದು. ಐತಿಹಾಸಿಕವಾಗಿರುವ ಶರಣ ಮೇಳ ಎಂಬ ಅದ್ಭುತ ಧಾರ್ಮಿಕ ಕಾರ್ಯಕ್ರಮದ ಮೂಲಕ ದಕ್ಷಿಣ ಭಾರತದ ಜನರು ಗುರು ಬಸವಣ್ಣನವರ ತತ್ವಗಳ ಬಗ್ಗೆ ತಿಳುವಳಿಕೆ ನೀಡುವ ಬಗ್ಗೆ ಕೈಂಕರ್ಯ ಹಾಗೂ ಬಸವ ಭಕ್ತಿಯನ್ನು ಮನದಲ್ಲಿ ಹಾಗೂ ಬಸವ ತತ್ವವನ್ನು ಬದುಕಿನಲ್ಲಿ ಅಳವಡಿಸಿಕೊಂಡಿರುವ ನಿಮ್ಮಂತಹ ಲಕ್ಷಾಂತರ ಶರಣ ಸಮೂಹವನ್ನು ಸಂಘಟಿಸಿರುವುದು ಮಾತಾಜಿಯವರ ಅದ್ಭುತ ಸಂಘಟನಾ ಶಕ್ತಿಗೆ ನಿದರ್ಶನ ಎಂದು ಅವರು ಬಣ್ಣಿಸಿದರು.

ಲಿಂಗಾಯತ ಧರ್ಮಕ್ಕೆ ಸಂವಿಧಾನಾತ್ಮಕ ಮನ್ನಣೆಯನ್ನು ದೊರಕಿಸುವ ಸಲುವಾಗಿ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ ಎಂದು ಲೋಕಸಭೆಯ ಚುನಾವಣೆಗೆ ನಾನು ಅಭ್ಯರ್ಥಿಯಾದ ಸಂದರ್ಭದಲ್ಲಿ ನಿಮಗೆಲ್ಲ ವಚನ ಕೊಟ್ಟಿದ್ದೇನೆ. ನನ್ನನ್ನು ನೀವೆಲ್ಲ ಹರಸಿ ಆಯ್ಕೆ ಗೊಳಿಸಿದ್ದೀರಿ. ನಾನು ಖಂಡಿತವಾಗಿಯೂ ಲೋಕ ಸಭೆಯಲ್ಲಿ ಸೂಕ್ತ ಸಂದರ್ಭದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಅದು ಅಂಗೀಕಾರವಾಗುವಂತೆ ನನ್ನ ಶಕ್ತಿಯನ್ನು ಮೀರಿ ಪ್ರಯತ್ನ ಪಡುತ್ತೇನೆ. ಇಲ್ಲಿಯೇ ನಮ್ಮ ಜೊತೆಯಲ್ಲಿ ಮಂಜುನಾಥ ಕುನ್ನೂರು ಅವರು ಉಪಸ್ಥಿತರಿದ್ದಾರೆ. ಅವರಿಗೆ ಅಪಾರವಾದ ಸಾಮಾಜಿಕ ಕಳಕಳಿ ಇದೆ. ಸದಾ ಕ್ರಿಯಾಶೀಲನಾಗಿರುವ ಯುವಕ. ಅವರು ಧಾರವಾಡ ಕ್ಷೇತ್ರದಿಂದ ಗೆಲ್ಲಬೇಕಗಿತ್ತು. ಅವರು ವಿಜಯಿಯಾಗಿದ್ದರೆ ನಾವಿಬ್ಬರೂ ಗಟ್ಟಿ ಧ್ವನಿಯಿಂದ ಲೋಕಸಭೆಯಲ್ಲಿ ಈ ವಿಚಾರ ಪ್ರಸ್ತಾಪಿಸಲು ಅನುಕೂಲವಾಗುತ್ತಿತ್ತು. ನನಗೂ ಬಲ ಬರುತ್ತಿತ್ತು. ಆದರೆ ಅವರಂಥ ಕ್ರಿಯಾಶೀಲ ವಿಚಾರವಂತ ಜನರನ್ನು ಸೋಲಿಸಿ ಆ ಕ್ಷೇತ್ರದ ಜನತೆ ತಪ್ಪುಮಾಡಿದ್ದಾರೆ ಎಂದೇ ನನ್ನ ಭಾವನೆ. ಮುಂದಿನ ದಿನಗಳಲ್ಲಿ ಈ ತಪ್ಪನ್ನು ತಿದ್ದಿಕೊಂಡು ಅವರನ್ನು ಆಯ್ಕೆ ಗೊಳಿಸುವುದು ಆ ಕ್ಷೇತ್ರದ ಪ್ರಜ್ಞಾವಂತ ಜನತೆಯ ಜವಾಬ್ದಾರಿಯಾಗಿದೆ ಎಂದರು. ಬಸವ ಕಲ್ಯಾಣ ನನ್ನ ಲೋಕ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿಯೇ ಬರುತ್ತದೆ. ಅಲ್ಲಿ ಪೂಜ್ಯ ಮಾತಾಜಿಯವರು ನಿರ್ಮಿಸುತ್ತಿರುವ 108 ಅಡಿ ಗುರು ಬಸವಣ್ಣನವರ ಪ್ರತಿಮೆಗೆ ನಾನು ಸರ್ವರೀತಿಯಿಂದ ಸಹಕಾರ, ಸೇವೆ ಸಲ್ಲಿಸುತ್ತೇನೆ ಎಂದರು.

ಮುಖ್ಯ ಅತಿಥಿಗಳಾಗಿದ್ದ ಮಾಜಿ ಸಂಸದ ಮಂಜುನಾಥ ಕುನ್ನೂರು ಮಾತನಾಡಿ ಶರಣ ಮೇಳ ಉತ್ಸವವು ಮಿನಿ ಭಾರತವಿದ್ದ ಹಾಗೆ. ಏಕೆಂದರೆ ಇಲ್ಲಿ ಎಲ್ಲ ಜಾತಿಯ ಸಹೃದಯರು ಮಾತ್ರವಲ್ಲದೆ ಆಂಧ್ರ ಮಹಾರಾಷ್ಟ್ರ ತಮಿಳುನಾಡು ದೂರದ ನವದೆಹಲಿಯಿಂದಲೂ ಬಸವ ಭಕ್ತರು ಆಗಮಿಸಿದ್ದು ಮಾತ್ರವಲ್ಲದೆ ನಮ್ಮ ರಾಜ್ಯದ ಪ್ರತಿ ಜಿಲ್ಲೆಗಳಿಂದಲೂ ಲಕ್ಷಾಂತರ ಶರಣ ಶರಣೆಯರು ಇಲ್ಲಿ ಸಮಾವೇಶಗೊಂಡಿದ್ದೀರಿ. ಇದು ಮಾತಾಜಿಯವರ ಅದ್ಭುತ ಸಾಧನೆ. ವಚನ ಸಾಹಿತ್ಯವನ್ನು ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಜಾತಿವಾದಿಗಳಿಂದ ಸಂರಕ್ಷಿಸಲು ಶ್ರೀ ಚನ್ನಬಸವಣ್ಣನವರು ಪಶ್ಚಿಮ ಘಟ್ಟಗಳ ಘೋರ ಅರಣ್ಯದ ಮಧ್ಯದಲ್ಲಿ ಬಂದು ಉಳಿಯುತ್ತಾರೆ. ಅಂದು ಕಾಡಿನಲ್ಲಿ ಉಳಿದ ಸಾಹಿತ್ಯ ಇಂದು ನಾಡಿನಾದ್ಯಂತ ಪ್ರಚಾರಗೊಂಡು ಇಷ್ಟೆಲ್ಲ ಸಂಸ್ಕಾರ ಸಂಘಟನೆ ಆಗಲು

ಪರಮ ಪೂಜ್ಯ ಮಾತಾಜಿಯವರೇ ಕಾರಣಕರ್ತರು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.

ಬಸವ ಕಲ್ಯಾಣದಲ್ಲಿ ಪೂಜ್ಯ ಮಾತಾಜಿಯವರು ನಿರ್ಮಿಸುತ್ತಿರುವ 108 ಅಡಿ ಗುರು ಬಸವಣ್ಣನವರ ಪ್ರತಿಮೆಗೆ ನಾನು 1 ಲಕ್ಷ ರೂಗಳನ್ನು ನೀಡುತ್ತೇನೆ. ಇದು ನನ್ನ ರಾಜಕೀಯ ಗುರುಗಳಾದ ಸನ್ಮಾನ್ಯ ಧರ್ಮಸಿಂಗ್ ಅವರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿಯೇ ಬರುವುದರಿಂದ ಗುರುವಿನ ಋಣ ತೀರಿಸಲು ಇದೊಂದು ಅವಕಾಶ ಎಂದು ಭಾವಿಸಿ ಬಸವ ಕಲ್ಯಾಣದಲ್ಲಿ ಪೂಜ್ಯ ಮಾತಾಜಿಯವರು ಹಮ್ಮಿಕೊಳ್ಳುವ ಎಲ್ಲ ಯೋಜನೆಗಳಿಗೆ ನನ್ನ ಶಕ್ತಿ ಮೀರಿ ಸೇವೆ ಸಲ್ಲಿಸುತ್ತೇನೆ ಎಂದು ನುಡಿದರು.

ಅತಿಥಿಗಳಾಗಿ ಆಗಮಿಸಿದ್ದ ಬೀದರ್ ಜಿ.ಪಂ ಉಪಾಧ್ಯಕ್ಷೆ ಮೀನಾಕ್ಷಿ ಸಂಗ್ರಾಮ್ ಅವರು ಶರಣ ಮೇಳವು ಸಮಾನತೆಯ ಸಂದೇಶವನ್ನು ಸಾರುತ್ತಿದೆ. ಸಮಸ್ತ ಮಹಿಳಾ ಸಂಕುಲದ ಧಾರ್ಮಿಕ ಸ್ವಾತಂತ್ರ್ಯದ ಹೆಗ್ಗುರುತಾಗಿರುವ ಪೂಜ್ಯ ಮಾತಾಜಿಯವರ ಮಾತೃ ಹೃದಯದ ಕರೆಯೇ ತಾವೆಲ್ಲ ಶರಣ ಬಂಧುಗಳು ಇಲ್ಲಿ ಸಮಾವೇಶಗೊಳ್ಳುವಂತೆ ಮಾಡಿದೆ. ಇದೇನು ಸಣ್ಣ ಸಾಧನೆಯಲ್ಲ ಎಂದು ಬಣ್ಣಿಸಿದರು. ಬೆಂಗಳೂರು ದೂರದರ್ಶನದ ಕಾರ್ಯಕ್ರಮ ನಿರ್ವಾಹಕರಾದ ಶ್ರೀಮತಿ ನಿರ್ಮಲಾ ಎಲಿಗಾರ್ ಮಾತನಾಡಿ ನಾನು ಚಿಕ್ಕವಳಿದ್ದಾಗ ನನ್ನ ತಂದೆಯವರೊಂದಿಗೆ ಪೂಜ್ಯ ಮಾತಾಜಿಯವರ ಪ್ರವಚನ ಕೇಳಲು ಹೋಗುತ್ತಿದ್ದೆ. ಆಗ ನಾನೊಂದು ಚಿಕ್ಕ ವಚನವನ್ನು ಬಾಯಿಪಾಠ ಮಾಡಿ ಪೂಜ್ಯ ಮಾತಾಜಿಯವರ ಎದುರಿಗೆ ಹೇಳಿದಾಗ ಅವರು ತುಂಬಾ ಸಂತೋಷಗೊಂಡು ನನ್ನ ಮೇಲೆ ತಮ್ಮ ಕೃಪಾದೃಷ್ಟಿ ಬೀರಿ ತಮ್ಮ ಆಶೀರ್ವಾದದ ಸಂಕೇತವಾಗಿ ಮಾಲೆಯನ್ನು ನನಗೆ ಹಾಕಿದರು. ಅವರ ಆ ಆಶೀರ್ವಾದದ ಮಾಲೆಯೇ ನನ್ನನ್ನು ಇಂದು ಉನ್ನತ ಹುದ್ದೆಗೆ ಬರುವಂತೆ ಮಾಡಿದೆ. ಅವರು ಸಮಸ್ತ ಮಹಿಳಾ ಸಂಕುಲದ ಹೆಮ್ಮೆಯ ಪ್ರತಿನಿಧಿಯಾಗಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯ ಮಧ್ಯೆ ತನ್ನ ಭಕ್ತಿ, ಜ್ಞಾನ, ವೈರಾಗ್ಯದ ಮೂಲಕ ಧಾರ್ಮಿಕ ಕ್ಷೇತ್ರದ ಉತ್ತುಂಗ ಶಿಖರವನ್ನೇರಿ ನಮಗೆಲ್ಲ ಆದರ್ಶ ಪ್ರಾಯರಾಗಿದ್ದಾರೆ. ಅವರ ಭಕ್ತರಾದ ನಾವು ನೀವೆಲ್ಲ ಹೆಗಲ ಮೇಲೆ ಧರಿಸಿರುವ ಈ ಬಸವ ಮಂತ್ರ ಸಹಿತ ಷಟ್ಕೋನ ರಕ್ಷೆಯು ಏನನ್ನು ಸೂಚಿಸುತ್ತದೆ ಎಂದರೆ ನಾವೆಲ್ಲರೂ ರಾಷ್ಟ್ರ ಪ್ರೇಮದೊಂದಿಗೆ ಧರ್ಮನಿಷ್ಠೆಯನ್ನು ಹೊಂದಿದ್ದೇವೆ ಎಂಬುದಾಗಿ. ಹೇಗೆ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ವ್ಯಕ್ತಿ ಗೌನು ಧರಿಸುತ್ತಾನೆಯೋ ಹಾಗೆಯೇ ಷಟ್ಕೋನ ಸಹಿತ ಬಸವ ಮಂತ್ರ ಹೊಂದಿದ ಸ್ಕಾರ್ಫ್ ಧರಿಸಿರುವ ನಾವು ನೀವೆಲ್ಲ ಬಸವ ಭಕ್ತಿಯ ಪದವಿಯನ್ನು ಪಡೆದಿದ್ದೇವೆ ಎಂದು ಭಾವ ತುಂಬಿ ನುಡಿದರು. ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಗುರುಪೀಠದ ಜಗದ್ಗುರು ಬಸವ ಜಯಮೃತ್ಯುಂಜಯ ಸ್ವಾಮಿಗಳು ಮಾತನಾಡಿ ಹಾದಿ ತಪ್ಪಿದ ಪಂಚಮಸಾಲಿ ಸಮಾಜದ ಕೆಲವರು ನಮಗೆ ಸಂಬಂಧವಿಲ್ಲದ ಪಂಚಾಚಾರ್ಯರ ಕಡೆಗೆ ವಾಲುತ್ತಿರುವುದನ್ನು ತಪ್ಪಿಸಿ ಅವರನ್ನು ನಮ್ಮ ಮೂಲಪಥವಾದ ಬಸವ ಪಥಕ್ಕೆ ಕರೆತರಲೆಂದೇ ಪಂಚಮಸಾಲಿ ಜಗದ್ಗುರು ಪೀಠವನ್ನು ಇಲ್ಲಿ ಸ್ಥಾಪಿಸಲಾಯಿತು. ಆದರೆ 25 ವರ್ಷಗಳ ಹಿಂದೆಯೇ ಈ ಧರ್ಮಕ್ಷೇತ್ರದಲ್ಲಿ ಬಸವ ಧರ್ಮ ಪೀಠವನ್ನು ಸ್ಥಾಪಿಸಿ ಸಮಾಜಕ್ಕೆ ಹೊಸ ಬೆಳಕು ಮೂಡಿಸಿದ ಪೂಜ್ಯ ಲಿಂಗಾನಂದ ಗುರೂಜಿ ಹಾಗೂ ಪೂಜ್ಯ ಮಾತಾಜಿಯವರು ನಮಗೆಲ್ಲ ಆದರ್ಶ ಪ್ರಾಯ ಎಂದು ಬಣ್ಣಿಸಿದರು. ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ, ಮುಂಬೈನ ಉದ್ಯಮಿ ಆರ್.ಬಿ. ಹೆಬ್ಬಳ್ಳಿ, ಮುಂತಾದವರು ಉಪಸ್ಥಿತರಿದ್ದರು. ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಬಸವ ಧ್ವಜಾರೋಹಣ ಮಾಡಿದರು. ಊಟಿಯ ಪುಷ್ಪಾ ಗುರುಬಸಪ್ಪ, ಸವದತ್ತಿಯ ಡಾ|| ಅನ್ನಪೂರ್ಣ ಹಿರಲಿಂಗಣ್ಣವರ್ ಧರ್ಮಗುರು ಬಸವ ಪೂಜೆ ಮಾಡಿದರು. ಬಸವ ಕುಮಾರ್ ಪಾಟೀಲ್ ಸ್ವಾಗತಿಸಿದರು. ಬೆಂಗಳೂರಿನ ರಾಷ್ಟ್ರೀಯ ಬಸವದಳದ ಕುಮಾರಿ ನಿಸರ್ಗ ನಾಗರಾಜು ಹಾಗೂ ಕುಮಾರಿ ಸ್ವಾತಿ ಶಿವಶರಣಪ್ಪ ಮುದ್ದೂರು ಅವರ ವಚನಾಭಿನಯ ಲಕ್ಷಾಂತರ ಜನರ ಮನಸೂರೆಗೊಂಡಿತು. ಅ.ಪ್ರ.ರಾಷ್ಟ್ರೀಯ ಬಸವ ದಳದ ಪ್ರಧಾನ ಕಾರ್ಯದರ್ಶಿ ಸುರೇಶ್ ಕೋರೆ ಅಧ್ಯಕ್ಷತೆ ವಹಿಸಿದ್ದರು. ಚಂದ್ರಮ್ಮ ಸದಾನಂದ ಸ್ವಾಮಿ ಸಭಾ ನಿರ್ವಹಣೆ ಮಾಡಿದರು.

ಬಸವ ಧರ್ಮದ ಮಹಾಜಗದ್ಗುರು ಪೀಠ
ಹದಿನೆಂಟನೆಯ ಪೀಠಾರೋಹಣೋತ್ಸವ

ಬಸವ ಪೀಠವು ಎದ್ದು। ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು ಧರೆಯವಗೆ।
ವಶವಾಗದಿಹುದೆ ಸರ್ವಜ್ಞ?

ಧರ್ಮಪಿತ ಶ್ರೀ ಗುರು ಬಸವ ತಂದೆಯ ದಿವ್ಯ ಪ್ರೇರಣೆಯಂತೆ ಅವರು ಐಕ್ಯರಾದ ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಬಸವ ಶಕೆ 858, ಸೋಮವಾರ 13-1-1992ರಂದು ಸಂಸ್ಥಾಪನೆ ಮಾಡಲಾಯಿತು. ಇದರ ಉದ್ದೇಶ ಬಸವ ತತ್ತ್ವದ ಪ್ರಚಾರ, ಸಮಾನತೆಯ ಪ್ರತಿಷ್ಠಾಪನೆ; ಜಾತಿ, ವರ್ಣ, ವರ್ಗ ಭೇದವಿಲ್ಲದೆ ಎಲ್ಲ ಮಾನವರ ಹಕ್ಕುಗಳನ್ನು ರಕ್ಷಿಸುವುದು; ಧರ್ಮನಿಷ್ಠೆ-ರಾಷ್ಟ್ರ ಪ್ರೇಮಗಳನ್ನು ಜನರಲ್ಲಿ ಬೆಳೆಸುವುದು. ಸಕಲ ಜೀವಾವಳಿಗೆ ಲೇಸನ್ನೆ ಬಯಸಿ, ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಲ್ಯಾಣ (ದೈವೀ) ರಾಜ್ಯವನ್ನು ಕಟ್ಟುವುದು. ಇಂತಹ ಧರ್ಮ ಪೀಠವನ್ನು ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಿ ಧರ್ಮ ಪ್ರಸಾರಕರು ಬಸವ ಯುಗ ನಿರ್ಮಾಪಕರು ಆದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು ಪ್ರಥಮ ಪೀಠಾಧೀಶರಾಗಿ ಆರೋಹಣ ಮಾಡಿ, ಅಪಾರ ಕಾರ್ಯ ಸಾಧನೆಗೈದು ದಿ.30-6-1995 ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನು ಹೊಂದಿದರು. ಪೂಜ್ಯ ಮಹಾಜಗದ್ಗುರುಗಳ ಸದಿಚ್ಛೆಯಂತೆ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಪೀಠದ ಪ್ರಥಮ ಮಹಿಳಾ ಜಗದ್ಗುರುವಾದ ಪೂಜ್ಯ ಶ್ರೀಮನ್ ನಿರಂಜನ ಮಹಾ ಜಗದ್ಗುರು ಮಾತೆ ಮಹಾದೇವಿಯವರು ಬಸವ ಧರ್ಮದ ಮಹಾಜಗದ್ಗುರು ಪೀಠದ ಎರಡನೆಯ ಅಧಿಕಾರಿಯಾಗಿ ಬಸವ ಶಕೆ.862, ಶನಿವಾರ ದಿ. 13-1-1996ರಂದು ಬೆಳಿಗ್ಗೆ 10-30ಕ್ಕೆ ಸತ್ ಸಂಕಲ್ಪದೊಡನೆ ಬಸವ ಧ್ವಜಾರೋಹಣ ಮಾಡಿ ಪೀಠಾರೋಹಣ ಮಾಡಿದ್ದಾರೆ. ಇದೀಗ ಪೀಠ ಸ್ಥಾಪನೆಯ 19ನೆಯ ಪೀಠಾರೋಹಣೋತ್ಸವನ್ನು ಆಚರಿಸಲಾಗುತ್ತಿದೆ. ಅದೇ ರೀತಿಯಲ್ಲಿ 13ರಂದು ಚನ್ನ (ಬುಧ) ವಾರ ದಂದು ಸಾಯಂಕಾಲ ನೆನಹು ಪ್ರಾರ್ಥನೆಯೊಂದಿಗೆ ಧರ್ಮ ಕ್ಷೇತ್ರದ ಪ್ರಶಾಂತ ವಾತಾವರಣದಲ್ಲಿ ಪೀಠಾರೋಹಣೋತ್ಸವ ಸಾಂಗವಾಗಿ ನೆರವೇರಿತು. ಈ ಪವಿತ್ರ ಸಂದರ್ಭದಲ್ಲಿ ಗುರುವಂದನೆ ಸಲ್ಲಿಸಿ ಮಾತನಾಡಿದ ಧಾರವಾಡ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠಾಧ್ಯಕ್ಷೆ ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಪರಮ ಪೂಜ್ಯ ಲಿಂಗಾನಂದ ಮಹಾಸ್ವಾಮಿಗಳವರ ಅವಿಶ್ರಾಂತ ಪರಿಶ್ರಮದಿಂದ ಲಿಂಗಾಯತ ಸಮಾಜವು ನವ ಚೈತನ್ಯ ಪಡೆಯಿತು. ಜಾತಿ ವ್ಯವಸ್ಥೆ, ಮೂಢ ನಂಬಿಕೆ, ಕಂದಾಚಾರಗಳ ವಿರುದ್ಧ ಸಿಂಹಘರ್ಜನೆ ಗೈದ ಶ್ರೀಗಳು ಸಂಪ್ರದಾಯವಾದಿ ಪೀಠಾಧೀಶರ ಪಾಲಿಗೆ ಸಿಂಹಸ್ವಪ್ನವಾಗಿದ್ದರು. ಅವರ ಕಾರ್ಯಕ್ಕೆ ಸಮವೇಗದಲ್ಲಿ ಸ್ಪಂದಿಸಿದವರು ಸಮರ್ಥ ಶಿಷ್ಯೆಯಾದ ಪೂಜ್ಯ ಮಾತಾಜಿಯವರು. ಅವರು ಆದಿ ಶರಣರ ಕಾಲಜ್ಞಾನದಲ್ಲಿ ಉಲ್ಲೇಖವಾದಂತೆ ಈ ಸಮಾಜದ ಶುದ್ಧೀಕರಣ ಮತ್ತು ಸಂಘಟನೆ ಗಾಗಿಯೇ ಜನ್ಮವೆತ್ತಿದ್ದಾರೆ. ಸಾಹಿತ್ಯ ಶಿಕ್ಷಣ, ಆಧ್ಯಾತ್ಮ ಇನ್ನೂ ವಿವಿಧ ರಂಗಗಳಲ್ಲಿಯೂ ತಮ್ಮ ಅಪಾರವಾದ ಪ್ರತಿಭೆಯನ್ನು ತೋರ್ಪಡಿಸುತ್ತಿರುವ ಪೂಜ್ಯ ಮಾತಾಜಿ ಮನುಕುಲವು ಮರೆಯದ ಮಾಣಿಕ್ಯವಾಗಿದ್ದಾರೆ ಎಂದರು.

ಗುರು ವಂದನೆ ಸಲ್ಲಿಸಿ ಮಾತನಾಡಿದ ಹಾವೇರಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಡಾ|| ರಾಜಣ್ಣ ವೈದ್ಯ ಅವರು - ಅಜ್ಞಾನಿಗಳಾದ ಕೆಲವು ಮಠಾಧೀಶರು ಬಸವ ಪಥದತ್ತ ಬರುವಂತೆ ಮಾಡುವಲ್ಲಿ ಲಿಂಗಾನಂದ ಸ್ವಾಮೀಜಿಯವರ ಪಾತ್ರ ಅದ್ಭುತವಾದದ್ದು. ಅವರಲ್ಲೊಂದು ಕೆಚ್ಚು ಮತ್ತು ಆತ್ಮಬಲವಿತ್ತು. ಅವರ ಸಮರ್ಥ ಶಿಷ್ಯರಾದ ಪೂಜ್ಯ ಮಾತಾಜಿಯವರು ಈ ಜಗತ್ತಿನ ಏಕೈಕ ಮಹಿಳಾ ಜಗದ್ಗುರುವಾಗಿದ್ದಾರೆ. ಹಣ -ಅಧಿಕಾರ ಉಳ್ಳವರು ನಿಜವಾದ ಜಗದ್ಗುರುಗಳಲ್ಲ, ಬದಲಾಗಿ ಭಕ್ತಿ ಜ್ಞಾನ ವೈರಾಗ್ಯ ಉಳ್ಳವರೇ ನಿಜವಾದ ಜಗದ್ಗುರುಗಳು. ಪೂಜ್ಯ ಮಾತಾಜಿಯವರು ಭಕ್ತಿ ಜ್ಞಾನ ವೈರಾಗ್ಯಗಳ ತ್ರಿವೇಣಿ ಸಂಗಮವಾಗಿದ್ದಾರೆ" ಎಂದರು.

ಮೂರ್ಖನಿಗೆ ಮನೆಯಲ್ಲಿ ಮಾತ್ರ ಗೌರವವಿದ್ದರೆ ಶ್ರೀಮಂತನಿಗೆ ಅವನ ಊರಿನಲ್ಲಿ ಮಾತ್ರ ಗೌರವ ಇರುತದೆ. ಆದರೆ ಜ್ಞಾನಿಯಾದವನಿಗೆ ಎಲ್ಲ ಕಡೆಗೂ ಗೌರವವಿರುತ್ತದೆ. ಹಾಗೆಯೇ ಪೂಜ್ಯ

ಮಾತಾಜಿಯವರಿಗೆ ಇಂದು ವಿಶ್ವದ ಎಲ್ಲಾ ಭಾಗಗಳಲ್ಲಿಯೂ ಗೌರವ ಭಕ್ತಿ ಪ್ರಾಪ್ತವಾಗುತ್ತಿದೆ. ಇದಕ್ಕೆ ಕಾರಣವೇನೆಂದರೆ ಅವರಲ್ಲಿರುವ ಭಕ್ತಿ ಜ್ಞಾನ ವೈರಾಗ್ಯಗಳೇ ಆಗಿವೆ. ಅವರ ಪಾದ ಸ್ಪರ್ಶದಿಂದ ನಮ್ಮ ಬದುಕು ಪಾವನವಾಗುವುದು" ಎಂದರು.

ಬೆಂಗಳೂರು ದೂರದರ್ಶನ ಕೇಂದ್ರದ ಕಾರ್ಯಕ್ರಮ ನಿರ್ವಾಹಕಿ ನಿರ್ಮಲಾ ಸಿ. ಎಲಿಗಾರ್. ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮುಂಬೈನ ಉದ್ಯಮಿ ಆರ್.ಬಿ.ಹೆಬ್ಬಳ್ಳಿ, ಕೋಯಿ ಮತ್ತೂರಿನ ಸಿ.ಆರ್.ಆರುಮುಗಂ ಭಾಗವಹಿಸಿದ್ದರು. ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಹಾಗೂ ಗಣನಾಯಕ - ನಾಯಕಿಯರೆಲ್ಲರ ಸಮ್ಮುಖದಲ್ಲಿ ಬಸವ ಧರ್ಮದ ಮಹಾಜಗದ್ಗುರು ಪೀಠದ ಮೇಲೆ ಲಿಂಗಾಯತ ಧರ್ಮ ಸಂಸ್ಥಾಪಕ ಗುರು ಬಸವಣ್ಣನವರ ಪುತ್ಥಳಿಯನಿಟ್ಟು ಭಕ್ತಿಯಿಂದ ಪೂಜೆ ಸಲ್ಲಿಸಲಾಯಿತು. ನಂತರ ಲಿಂ.ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮೀಜಿಯವರ ಪುತ್ಥಳಿಯನ್ನಿಟ್ಟು ಪೂಜೆ ಸಲ್ಲಿಸಲಾಯಿತು. ಅನಂತರ ಲಕ್ಷಾಂತರ ಬಸವ ಭಕ್ತರ ಜಯಕಾರದ ಮಧ್ಯೆ ತ್ಯಾಗಾಂಗ, ಭೋಗಾಂಗ, ಯೋಗಾಂಗಗಳೆಂಬ ಮೂರು ಹಂತಗಳನ್ನು ದಾಟಿ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಆರೋಹಣಗೈದ ಚಲಿಸುವ ವಿಶ್ವವಿದ್ಯಾಲಯ ವಾದ ಲಿಂಗಾಯತ ಧರ್ಮದ ಏಕೈಕ ಆಶಾಕಿರಣವಾದ ಪರಮ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರಿಗೆ ಜಂಗಮ ಮೂರ್ತಿಗಳು ಮತ್ತು ಗಣನಾಯಕ ನಾಯಕಿಯರು ವೈರಾಗ್ಯದ ಸಂಕೇತವಾದ ರುದ್ರಾಕ್ಷಿ ಮುಕುಟವನ್ನು ಧರಿಸಿ ಷಟ್‌ಸೂತ್ರಗಳನ್ನು ಸಾಂಕೇತಿಕವಾಗಿ ಅರ್ಪಿಸಿ ಮಂತ್ರದಂಡವನ್ನು ನೀಡಿ ಮಹಾಗುರುವಿಗೆ ಭಕ್ತಿಯಿಂದ ಪುಷ್ಪಮಾಲೆ ಗಳನ್ನರ್ಪಿಸಿ ಆರತಿಗಳನ್ನು ಬೆಳಗಿ ಮನದಣಿಯೆ ಹಾಡಿ ಪಾಡಿ ನಲಿದು ಪುಷ್ಪವೃಷ್ಟಿ ಗೈದು ಗುರುವಂದನೆಯೊಂದಿಗೆ ಗುರುಕಾಣಿಕೆಯನ್ನು ಸಲ್ಲಿಸಿ ಕೃತಾರ್ಥ ಭಾವ ಹೊಂದುತ್ತಿದ್ದ ಆ ದೈವೀ ದೃಶ್ಯ ಧರ್ಮ ಕ್ಷೇತ್ರ ಕೂಡಲ ಸಂಗಮದಲ್ಲಿ ಅಂದಿನ ಕಲ್ಯಾಣದ ಅನುಭವ ಮಂಟಪದಲ್ಲಿ ಶ್ರೀಮದ್ ಅನಾದಿ ನಿರಂಜನ ಜಗದ್ಗುರು ಅಲ್ಲಮಪ್ರಭುದೇವರು ಶೂನ್ಯ ಪೀಠಾರೋಹಣ ಗೈದ ಶುಭ ಪ್ರಸಂಗದಲ್ಲಿ ಎಲ್ಲ ಶರಣ ಬಂಧುಗಳು ಹೀಗೆಯೇ ನಲಿದಾಡಿರಬಹುದಲ್ಲವೇ.......? ಅಂದು ನಾವು ನೋಡದಿದ್ದರೇನಂತೆ ಇಂದು ನಾವೆಲ್ಲ ಆ ದೃಶ್ಯವನ್ನು ನೋಡಿ ಧನ್ಯರಾಗಿದ್ದೇವೆ. ಪೀಠಾರೋಹಣದ ಪರಮ ಪೂಜ್ಯ ಮಾತಾಜಿಯವರು ನೀಡಿದ ಬಳಿಕ ದೈವೀ ಸಂದೇಶವನ್ನು ಅವರ ಗುರುವಾಣಿ ಮಾತೃವಾಣಿಯಿಂದಲೇ ಆಲಿಸೋಣ ಬನ್ನಿ........

ಸೃಷ್ಟಿಕರ್ತ ಲಿಂಗದೇವನನ್ನು ಹೃನ್ಮಂದಿರದಲ್ಲಿ ಸ್ಮರಿಸಿ, ಧರ್ಮಕರ್ತ ಮಂತ್ರಪುರುಷ ಗುರು ಬಸವಣ್ಣನವರನ್ನು ಹೃದಯದಲ್ಲಿ ಧ್ಯಾನಿಸಿ, ಪರಮಪೂಜ್ಯರಾದ ಲಿಂ.ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರನ್ನು ಮನದಲ್ಲಿ ನೆನೆದು ವೇದಿಕೆಯ ಮೇಲೆ ಆಸೀನರಾಗಿರುವ ಎಲ್ಲಾ ಪೂಜ್ಯ ಜಂಗಮ ಮೂರ್ತಿಗಳೇ ಮತ್ತು ರಾಷ್ಟ್ರೀಯ ಬಸವ ದಳದ ಪ್ರಮುಖರೇ, ಗಣ್ಯರೇ, ಸಭೆಯಲ್ಲಿ ಸಮಾವೇಶವಾಗಿರುವ ಎಲ್ಲಾ ಶರಣ ಬಂಧುಗಳೇ ತಮ್ಮೆಲ್ಲರಿಗೂ ಶರಣ ಶರಣಾರ್ಥಿ.

ಕಿವಿಯ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ
ಕಂಗಳ ಸೂತಕ ಹೋಯಿತ್ತು ಸದಕ್ಷರ ಕಂಡೆನಾಗಿ
ಕಾಯದ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ
ನಾನಾ ಸೂತಕ ಹೋಯಿತ್ತು ನಿಮ್ಮ ಶರಣರ ಅನುಭಾವಿಯಾಗಿ
ಲಿಂಗದೇವ ಕೇಳಯ್ಯ, ಎನ್ನ ಮನದ ಸೂತಕ ಹೋಯಿತ್ತು
ನೀವಲ್ಲದೆ ಇಲ್ಲವೆಂದು ಅರಿದೆನಾಗಿ.

ಈವರೆಗೆ ತಾವೆಲ್ಲ ತುಂಬಾ ಅಭಿಮಾನವಿಟ್ಟು ಈ ಪೀಠಾರೋಹಣ ಕಾರ್ಯಕ್ರಮವನ್ನು ನಡೆಸಿದ್ದೀರಿ. ನನಗೆ ನಿಜಕ್ಕೂ ಬಸವಣ್ಣನವರು ಹೇಳುವ ಹಾಗೆ "ಹೊಗಳಿ ಹೊಗಳಿ ಎನ್ನ ಹೊನ್ನ ಶೂಲದಲ್ಲಿಕ್ಕಿದರು" ಎನ್ನುವ ರೀತಿಯಲ್ಲಿ ಡಾ|| ರಾಜಣ್ಣ ವೈದ್ಯ ಅವರು ಹೊಗಳಿದ್ದು, ಪೂಜ್ಯ ಗಂಗಾಮಾತಾಜಿ ಹೊಗಳಿದ್ದು ನೋಡಿದಾಗ ನನಗೆ ತುಂಬಾ ಸಂಕೋಚ, ನಾಚಿಕೆಯಾಗ್ತಾ ಇದೆ. ಏಕೆಂದರೆ ನಾವು ನಡೆದು ಬಂದಿರುವ ದಾರಿ ಎಷ್ಟಿದೆಯೋ ಅದಕ್ಕಿಂತ ನಡೆಯಬೇಕಾದ ದಾರಿಯೇ

ಬಹಳ ಇದೆ. ಮಾಡಿದ ಕೆಲಸ ಎಷ್ಟಿದೆಯೋ ಅದಕ್ಕಿಂತ ಮಾಡಬೇಕಾದ ಕೆಲಸವೇ ಜಾಸ್ತಿ ಇದೆ. ಅಂದಾಗ ಈಗಲೇ ಇಷ್ಟು ಹೊಗಳಿಬಿಟ್ಟರೆ ಹೇಗೆ? ಅಂತ. ಇದಕ್ಕೆ ನಾನಂದು ಕೊಳ್ತಿನಿ, ನಾನೀ ಕಾರ್ಯವನ್ನು ಮಾಡಿದ್ದಕ್ಕಾಗಿ ಹೊಗಳಿದರು ಅಂತಾ ಅಲ್ಲ, ನಿಮ್ಮೆಲ್ಲರ ಒಂದು ಅಭಿಮಾನ. ನಿಜಕ್ಕೂ ಇದಕ್ಕೆ ಬೆಲೆ ಕಟ್ಟೋಕಾಗೋದಿಲ್ಲ! ನೀವೆಲ್ಲ ತೋರಿಸುತ್ತಿರುವ ಭಕ್ತಿ ಶ್ರದ್ಧೆ ಅಭಿಮಾನ ಒಂದು ಕರೆ ಕೊಟ್ಟರೆ ನೀವೆಲ್ಲಾ ಧಾವಿಸಿಬರುವಂತಹ ಆತುರ ಪ್ರೀತಿ ನೋಡಿದಾಗ ನಿಜಕ್ಕೂ ಕೂಡಾ ಬೆಲೆ ಕಟ್ಟಲಾಗದಂಥ ಭಕ್ತಿ ಅಂತಾ ಅನ್ನಿಸ್ತಾ ಇದೆ. ಒಂದು ಆಕಳ ಮೇಯ್ದು ಬರ್ತದೆ ನಿಮಗೆ ಗೊತ್ತಿದೆ. ಆಕಳಿರಲಿ, ಎಮ್ಮೆ ಇರಲಿ, ಯಾವುದೇ ಪ್ರಾಣಿಯಿರಲಿ ಅರಣ್ಯಕ್ಕೆ ಹೋಗಿ ಮೇಯ್ದು ಬರುತ್ತದೆ. ಅದು ಬಂದು ಯಾವಾಗ ಹಾಲು ಕುಡಿಸ್ತೀನೋ ಹಾಲು ಕುಡಿಸ್ತೀನೋ ಅಂತಾ ಮನಸ್ಸಿನಲ್ಲಿ ತುಡೀತಾ ಇರುತ್ತದೆ. ಅದೇ ರೀತಿ ಮನೆಯಲ್ಲಿ ಕಟ್ಟಿದಂತಹ ಕರು ಯಾವಾಗ ಬರುತ್ತೋ ಅಮ್ಮ ಎಂದು, ಯಾವಾಗ ಹಾಲು ಕುಡಿಸುತ್ತೋ ಅಂತಾ ಅಂಬಾ ಅಂಬಾ ಅನ್ನುತ್ತಿರುತ್ತದೆ.

ದನಗಳು ಮನೆಗೆ ಬರುವಾಗ ಮನೆಯಲ್ಲಿರುವ ಕರುಗಳು ಸದ್ದು ಮಾಡುವುದನ್ನು ನೋಡಬೇಕು. ನಿಜಕ್ಕೂ ಗ್ರಾಮೀಣ ಚಿತ್ರಣ ತುಂಬಾ ಸೊಗಸಾಗಿರುತ್ತದೆ. ಅಂಬಾ ಅಂಬಾ ಅಂಬಾ ಅಂತಾ ಒಂದೇ ಸಮನೆ ಕರು ಸದ್ದು ಮಾಡ್ತಾ ಇರುತ್ತದೆ. ನೀವೆಲ್ಲ ಅದನ್ನು ಅನುಭವಿಸುತ್ತಿದ್ದೀರಾ. ನೋಡಕೆ ಒಂದು ಚಂದ ಅದು. ಅದೇ ರೀತಿಯಲ್ಲಿ ವರ್ಷಕ್ಕೊಂದು ಸಲ ನಾವು ನಮ್ಮ ವಿಚಾರಗಳನ್ನು ನಮ್ಮ ಹೃದಯದ ಭಾವನೆಗಳನ್ನು ನಿಮ್ಮ ಮುಂದೆ ಇಡಬೇಕು. ನಮ್ಮ ಧ್ಯೇಯೋದ್ದೇಶಗಳನ್ನು ನಿಮ್ಮ ಮುಂದೆ ಇಡಬೇಕು. ಏಕೆಂದರೆ ಶಾಲೆಯಲ್ಲಿ ಮಕ್ಕಳು ಓದ್ತಾ ಇರುವಾಗ ಏನ್‌ಮಾಡ್ತಾರೆ; ತಿಂಗಳಿಗೊಮ್ಮೆ ಟೆಸ್ಟ್ ಮಾಡ್ತಾರೆ; ನಂತರ ಪ್ರೋಗ್ರೆಸ್ ರಿಪೋರ್ಟ್ ಅಂತ್ಹೇಳಿ ಒಂದು ಕಾರ್ಡ್ ಮಾಡಿರ್ತಾರೆ. ಆ ಕಾರ್ಡ್ ಕೊಟ್ಟು ಏನ್ ಮಾಡ್ತಾರೆ ಅಂದ್ರೆ ಹೋಗಿ ತಾಯಿ-ತಂದೆ ಕೈಲಿ ಸೈನ್ ಮಾಡಿಸಿಕೊಂಡ್ ಬಾ ಅಂತಾ ಹೇಳ್ತಾರೆ. ಹೌದಲ್ಲೋ. ನಾವು ವರ್ಷದಿಂದ ವರ್ಷಕ್ಕೆ ನಮ್ ಕೆಲಸ ಮಾಡ್ತಾ ಇದ್ದೀವಲ್ಲಾ ಇದಕ್ಕೆಲ್ಲಾ ಸೈನ್ ಮಾಡಬೇಕಾದ Parents ಯಾರು ಅಂದರೆ ನೀವೇನೆ. ಒಂದು ವರ್ಷದಿಂದ ಇನ್ನೊಂದು ವರ್ಷಕ್ಕೆ ಎಷ್ಟು ಕೆಲಸಗಳನ್ನು ನೀವು ಮಾಡಿದ್ದೀರಿ ಅಂತ್ಹೇಳಿ ನೀವ್ ಸಹಿ ಮಾಡಿದ್ರೇನೇ ಮುಂದಿನದು ನಮ್ಮದು Progress ಸಾಧ್ಯ ಇದೆ. ಅದಕ್ಕಾಗಿ ಹೇಗೆ ಹಸುವಿಗೆ ಆತುರವೋ ನಮ್ಮ ವಿಚಾರಗಳನ್ನು ನಿಮ್ಮ ಮುಂದೆ ಇಡಬೇಕು ಅನ್ನುವಂತಹ ಆತುರ ನಮಗೆ. ಅದೇ ರೀತಿ ಮೂಲೆ-ಮೂಲೆಯಿಂದ ಇವತ್ತು ಎಲ್ಲ ಭಕ್ತಾದಿಗಳು ಇಷ್ಟೊಂದು ಜನರು ಬಂದಿದ್ದೀರಿ. ಆಂಧ್ರದಿಂದ ಎಷ್ಟೊಂದು ಜನ, ಮಹಾರಾಷ್ಟ್ರದಿಂದ ಎಷ್ಟೊಂದು ಜನ ಬಂದಿದ್ದಾರೆ. ಎಲ್ಲ ಜಿಲ್ಲೆಗಳಿಂದ ಬಂದಿದ್ದಾರೆ. ನಮಗನಿಸ್ತಿದೆ, ಗುರುಗಳು ಕೊಡುವ ಜ್ಞಾನವನ್ನು ಪಡೆದು ಕೊಳ್ಳಬೇಕು ಎನ್ನುವಂಥ ಆತುರ - ಕಾತುರ ಆ ಕರುವಿನಲ್ಲಿ ಇದ್ದ ಹಾಗೆ; ಇಂತಹ ಸಂಬಂಧವೇ ಗುರು -ಶಿಷ್ಯ ಸಂಬಂಧ ಅಂದ್ರೆ. ಸ್ವಾಮಿ - ಭೃತ್ಯ ಸಂಬಂಧ ಎಂತಿಹುದಯ್ಯ ಅಂತಾ ಗುರು ಬಸವಣ್ಣನವರು ಹೇಳ್ತಾರೆ. ಗುರುವಿಗೆ ಜ್ಞಾನವನ್ನು ಕೊಡಬೇಕೆನ್ನುವ ಹಂಬಲ ಇರಬೇಕು. ಶಿಷ್ಯನಿಗೆ ಜ್ಞಾನವನ್ನು ಸ್ವೀಕಾರ ಮಾಡಬೇಕು ಎನ್ನುವಂತಹ ಆತುರ ಇರಬೇಕು ಅಂತಾ. ಎಲ್ಲರೂ ಹೇಳ್ತಾರೆ ನಿಮ್ಮ ಸಭೆಗಳಂಥ ಸಭೆಗಳನ್ನೇ ನಾವು ಎಲ್ಲೂ ನೋಡೋದಿಲ್ಲಾ ಅಂತಾ! ಅಂದ್ರೆ ಅಷ್ಟೊಂದು ಆಸಕ್ತಿಯಿಂದ ರಾತ್ರಿ ಎಷ್ಟೊತ್ತೇ ಆಗಲಿ ಊಟ, ನಿದ್ರೆ, ಹಸಿವು, ತೃಷೆ ಎಲ್ಲವನ್ನು ಮರೆತು ಕುಳಿತು ಕೊಳ್ಳುವಂತದ್ದು ಇದಕ್ಕೆ ಮುಖ್ಯ ಕಾರಣ ಗುರು ಬಸವಣ್ಣನವರು ನಿಮ್ಮಮೇಲೆ ಹರಿಸುತ್ತಿರುವಂತಹ ಒಂದು ಅನುಗ್ರಹ. ಇದು ಕೇವಲ ಕಂಬಗಳಿಂದ ನಿರ್ಮಾಣವಾದ ಬಟ್ಟೆಗಳಿಂದ ನಿರ್ಮಾಣವಾದಂತಹ ಒಂದು ಪೆಂಡಾಲ್ ಎಂದಷ್ಟೇ ತಿಳಿದುಕೊಳ್ಳಬೇಡಿರಿ. ಪ್ರತಿ ಕ್ಷಣಕ್ಷಣಕ್ಕೂ ಕೂಡ ಸೃಷ್ಟಿಕರ್ತ ಲಿಂಗದೇವಾ, ಧರ್ಮಗುರು ಬಸವಣ್ಣನವರು ನಿಮ್ಮ ಮೇಲೆ ಆ ಕರುಣೆಯ ಧಾರೆಯನ್ನು ಸದಾ ಅವರು ಹರಿಸುತ್ತಿದ್ದಾರೆ. ಶರಣರ ಮಧ್ಯದಲ್ಲಿ ಒಡನಾಡುತ್ತಾ ಇರುವಂತಹ ನಿಮ್ಮೆಲ್ಲರ ಮೇಲೆ ಅವರ ಒಂದು ಪ್ರೇಮದ ದೃಷ್ಟಿ ಖಂಡಿತವಾಗಿಯೂ ಸಹ ಬೀಳ್ತಾ ಇದೆ. ಅದಕ್ಕಾಗಿ ಅವರು ಹೇಳಿದ್ದಾರೆ. ಶರಣ ಮೇಳಕ್ಕೆ ನಾವು ಯಾಕೆ ಬರಬೇಕು, ಶರಣ ಮೇಳಕ್ಕೆ ಏನಕ್ಕಾಗಿ ಬರಬೇಕು ಅಂದ್ರೆ, ನಮ್ಮ ಧರ್ಮಗುರು ಬಸವಣ್ಣನವರು ಹೇಳ್ತಾರೆ:

ಕಿವಿಯ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ

ಕಿವಿಯ ಸೂತಕ - ಈ ಕಿವಿ ಇರುತ್ತಲ್ಲಾ ಇದು ಬಹಳ ವಿಚಿತ್ರವಾದ ಅಂಗ. ಎಲ್ಲಾ ಅಂಗಾಂಗಗಳಿಗೂ ಕೂಡ ಬಾಗಿಲಿದೆ; ಆದರೆ ಈ ಕಿವಿಗೆ ಬಾಗಿಲನೇ ಇಲ್ಲ. ನಿಮಗೆಲ್ಲ ಇದೆಯೇನು? ಇದೆಯಾ? ನೋಡಿ ಕಣ್ಣಿಗೆ ಇದೆ, ರೆಪ್ಪೆ ಇದೆ ನಾವು ಮುಚ್ಚಿಕೊಳ್ಳಬಹುದು. ಆದರೆ ಕಿವೀನ ಮುಚ್ಚಿಕೊಳ್ಳೋಕೆ ಬರುತ್ತಾ ಇಲ್ಲ. ಅದಕ್ಕಾಗಿ ಅದು ತುಂಬಾ ತರಲೇ ಕೆಲಸ ಮಾಡ್ತಾ ಇರುತ್ತೆ. ಅದೇನು ಮಾಡುತ್ತೆ? ಬೇಕಾದ್ದು ಬೇಡವಾದ್ದು ಎಲ್ಲವನ್ನೂ ಕೇಳ್ತಾ ಇರುತ್ತದೆ. ಏಕೇಂದ್ರೆ ಅದಕ್ಕೆ ಬಾಗಿಲೇ ಇಲ್ಲ. ಅದಕ್ಕಾಗಿ ಅದು ಯಾರಾದ್ರೂ ನಿಂದೆ ಮಾಡ್ತಿದ್ದರೆ ಅದನ್ನು ಕೇಳುತ್ತೆ. ಯಾವುದೇ ಒಂದು ಅಶ್ಲೀಲವಾದ ಹಾಡಿರುತ್ತಾ ಅದನ್ನು ಕೇಳುತ್ತೆ. ಪಾಪ ಅದಕ್ಕೆ ಬೇರೆ ಮಾರ್ಗವೇ ಇಲ್ಲ. ಹೀಗಾಗಿ ಈ ಕಿವಿ ಏನ್ ಮಾಡ್ತಾ ಇರುತ್ತೇ ಅಂದ್ರೆ ಕೊಳೆ ಮಾಡ್ತಾ ಇರುತ್ತೆ; ಸೂತಕವಾಗುತ್ತದೆ ಅದಕ್ಕೆ ಮೈಲಿಗೆ ಆಗ್ತಾ ಇರುತ್ತೆ ಹಾಗಾದ್ರೆ ಈ ಕಿವಿಯ ಮೈಲಿಗೆಯನ್ನು ನಾವು ಕಳೆದುಕೊಳ್ಳೋ ವಿಧಾನ ಹೇಗೆ ಅಂದ್ರೆ ವರ್ಷಕ್ಕೊಂದು ಸಲ ಶರಣ ಮೇಳಕ್ಕೆ ಬಂದು ಸದ್ಗುರುವಿನ ವಚನಗಳನ್ನು ಕೇಳುವ ಮೂಲಕ ಕಿವಿಯ ಸೂತಕವನ್ನು ಕಳೆದುಕೊಳ್ಳಬೇಕು. ಆವಾಗ ನೀವೆನ್ನಬಹುದು. ಆಯ್ತು ಬಿಡ್ರಿ ವರ್ಷಕ್ಕೊಂದು ಸಲ ಹೆಂಗಾರ ಮಾಡ್ಕೊಂಡ್ ಬರ್ತೀವಿ..... ಸಾಲದು. ವಾರಕ್ಕೊಮ್ಮೆ ಸೇರಬೇಕು ಬಸವ ಮಂಟಪಗಳನ್ನು ಮಾಡಿಕೊಂಡು, ಪ್ರಾರ್ಥನಾ ಸಭೆಗಳನ್ನು ಮಾಡಿಕೊಂಡು ವಾರಕ್ಕೊಂದು ಸಲವಾದರೂ ನೀವೆಲ್ಲರೂ ಸೇರಬೇಕು.ಎಲ್ಲರೂ ಸೇರಿ ಕಿವಿಯ ಸೂತಕವನ್ನು ಕಳೆದು ಕೊಳ್ಳಬೇಕು. ಎಷ್ಟು ಚೆನ್ನಾಗಿ ಹೇಳ್ತಾರೆ ಗುರು ಬಸವಣ್ಣನವರು. ಒಂದೊಂದು ವಚನ ವಾಕ್ಯವೂ ಎಂತಹ ಅಮೃತ ಸಂಜೀವಿನಿಗಳು. ಅದಕ್ಕಾಗಿ ನಾನು ಕಲ್ಯಾಣ ಕಿರಣ ಎಂಬ ಮಾಸ ಪತ್ರಿಕೆಯಲ್ಲಿ ಗುರು ಬಸವಣ್ಣನವರ ವಚನಗಳಿಗೆ ವ್ಯಾಖ್ಯಾನವನ್ನು ಭಾವಾರ್ಥವನ್ನು ಬರೀತಾ ಇದ್ದೇನೆ. ಈಗ ಭಾಗ 1-2 ಪುಸ್ತಕವೂ ಸಹ ಪ್ರಿಂಟಾಗಿದೆ. ಭಾಗ 3 ಇವತ್ತು ಬೆಳಿಗ್ಗೆ ಬಿಡುಗಡೆ ಮಾಡ್‌ಬೇಕಿತ್ತು. ಆದ್ರೆ ಟೈಂ ಸಾಕಾಗಲಿಲ್ಲ. ಪುಸ್ತಕ ಬಿಡುಗಡೆ ಆಗದಿದ್ದರೇನಂತೆ ಓದುವುದು ಮುಖ್ಯ. ಆದ್ದರಿಂದ ಈ ಮೂರು ಪುಸ್ತಕಗಳಲ್ಲಿ ಸುಮಾರು 325 ವಚನಗಳಿಗೆ ಅರ್ಥ ನಿಮಗೆ ಒಂದೇ ಧಾರಾವಾಹಿಯಾಗಿ ಸಿಗುತ್ತೆ. ಈಗ ಕಲ್ಯಾಣ ಕಿರಣ ಮಾಸ ಪತ್ರಿಕೆಯಲ್ಲಿ ನಾನು ಸತತವಾಗಿ ವಚನಗಳಿಗೆ ವ್ಯಾಖ್ಯಾನವನ್ನು ಬರೀತಾ ಇದ್ದೇನೆ. ಒಂದೊಂದು ವಚನವೂ ಕೂಡ ಅಮೃತ ಬಿಂದು ಇದ್ದ ಹಾಗೆ. ಯಾಕೇಂದ್ರೆ ನಾವು ನೋಡ್ತೀವಿ ಹಿಂದೆ ದೇವತೆಗಳು ರಾಕ್ಷಸರು ಮಥನ ಮಾಡಿದಾಗ ಅಮೃತ ಉತ್ಪತ್ತಿ ಯಾಯಿತಂತೆ. ಈ ಅಮೃತಕ್ಕಾಗಿ ದೇವತೆಗಳೂ, ರಾಕ್ಷಸರೂ ಬಡಿದಾಡಿದರು. ಆನಂತರ ಸಾಕಷ್ಟು ಸಾವು ನೋವಾಯಿತು. ಆದರೆ ಅಮೃತವನ್ನು ಕುಡಿದು ದೇವತೆಗಳು ಅಮರರಾದರೋ ಬಿಟ್ಟರೋ. ಒಂದು ವೇಳೆ ಅವರು ಅಮರರೇ ಆಗಿದ್ದರೆ ನಮ್ಮ ಕಣ್ಣಿಗೆ ಎಲ್ಲಾದರೂ ಸಿಗಬೇಕಾಗಿತ್ತು ಅವರು. ಸಿಕ್ಕಿಲ್ಲ ಅಂದರೆ ದೇವತೆಗಳೂ ಕೂಡಾ ಯಾರು ಇಲ್ಲಾ ಸತ್ತು ಹೋಗಿದ್ದಾರೆ- ಅಮರರಾಗಿಲ್ಲ. ಆದರೆ "ವಚನಾಮೃತಗಳು" ಎಂಬ ಅಮೃತ ಬಿಂದುಗಳನ್ನು ಕುಡಿದವರು ಮಾತ್ರ ಖಂಡಿತಾ ಅಮರಾತ್ಮರಾಗ್ತಾ ಇದ್ದಾರೆ. ಅವರು ಸತ್ತು ಬದುಕುವ ಜನ ಆಗ್ತಾರೇ ಹೊರತು ಬದುಕಿ ಸಾಯುವ ಜನ ಆಗುವುದಿಲ್ಲ. ಬದುಕಿ ಸಾಯುವವರು ಕೋಟಿ -ಕೋಟಿಗಟ್ಟಲೇ ಜನ; ಆದರೆ ಸತ್ತೂ ಸಹ ಬದುಕುವವರು ಕೆಲವರೇ ಕೆಲವರು. ಅದಕ್ಕಾಗಿ ಶರಣ ಬಂಧುಗಳೇ ವಚನಗಳು ಮಾತೃಭಾಷೆಯಾದ ಅಚ್ಚ ಕನ್ನಡದಲ್ಲಿ, ತೆಲುಗಿನಲ್ಲಿ, ತಮಿಳುನಲ್ಲಿ ಮರಾಠಿಯಲ್ಲಿ ಹೀಗೆ ಅವರವರ ಮಾತೃಭಾಷೆಗೆ ಭಾಷಾಂತರವಾಗಿವೆ. ಈ ವಚನಾಮೃತ ಬಿಂದುಗಳನ್ನು ಪಾನ ಮಾಡಿದ್ದೇ ಆದರೆ ನಿಮ್ಮ ಜೀವನ ಖಂಡಿತಾ ಪವಿತ್ರವಾಗುತ್ತದೆ. ಪರಿವರ್ತನೆಗೊಳ್ತದೆ. ನೀವು ಹೊಸ ಮನುಷ್ಯರಾಗ್ತಾ ಇದ್ದೀರಾ. ಅದಕ್ಕಾಗಿ ಇಲ್ಲಿ ಧರ್ಮಗುರು ಬಸವಣ್ಣನವರು ಹೇಳ್ತಾರೆ ಕಿವಿಯ ಸೂತಕ ಹೋಯಿತ್ತು ಸದ್ಗುರುವಿನ ವಚನದಿಂದ. ಮುಂದೆ ಹೇಳ್ತಾರೆ -

ಕಂಗಳ ಸೂತಕ ಹೋಯಿತ್ತು ಸದ್ಭಕ್ತರ ಕಂಡೆನಾಗಿ

ನೋಡಿದ್ರಾ ಕಂಗಳ ಸೂತಕ ಹೋಯಿತ್ತು. ಕಣ್ಣು ಮೈಲಿಗೆಯನ್ನು ಮಾಡ್ತಾ ಇದೆ. ಏಕೇಂದ್ರೆ

ಅದು ಬೇಡವಾದ ಅಂದರೆ ನಿಮ್ಮ ಅಂತರಾತ್ಮ ಬೇಡಾ ಅಂತಾ ಹೇಳ್ತಾ ಇದ್ರೂ ಕೂಡಾ ರಸ್ತೆಗಳಲ್ಲಿ ಹಾಕಿರುವ ಅಶ್ಲೀಲವಾದಂತಹ ಕೆಲವು ಸಿನಿಮಾ ಪೋಸ್ಟರ್‌ಗಳನ್ನು ನೋಡ್ತಾ ಕಣ್ಣು ಪಾಪ ಮಾಡಿಬಿಡ್ತದೆ. ನೋಡಬಾರದ ಯಾವುದೇ ದೃಶ್ಯವನ್ನು ಇಷ್ಟವಿಲ್ಲದಿದ್ದರೂ ತಾನು ಕಣ್ಣಿಗೆ ಬಿದ್ದು ಬಿಡುತ್ತೆ. ಹಾಗಾದ್ರೆ ಇಂಥ ಕಣ್ಣಿನ ಮಾಲಿನ್ಯವನ್ನು ನಾವು ಕಳೆದುಕೊಳ್ಳುವ ವಿಧಾನ ಹೇಗೆ ಅಂದ್ರೆ ಸದ್ಭಕ್ತರ ಕಂಡೆನಾಗಿ, ಶರಣರನ್ನು ನೋಡಿ ಇಲ್ಲಿ ಬಂದು ಶರಣರ ದರ್ಶನವನ್ನು ಒಬ್ಬರಿಗೊಬ್ಬರು ಶರಣು ಶರಣಾರ್ಥಿಗಳನ್ನು ಮಾಡಿ ವಚನ ಪಠಣ ಮಾಡಿದಾಗ ಇಂತಹ ಪವಿತ್ರ ಸದ್ಭಕ್ತರ ದರ್ಶನದಿಂದ ಕಣ್ಣಿನ ಸೂತಕ ಹೋಗುತ್ತದಂತೆ.

ಕಾಯದ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ

ಶರೀರದ ಸೂತಕವೇ ಮಾಯೆ, ಮೈಲಿಗೆ. ಈ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ.ಶರಣ ಬಂಧುಗಳೇ ಲಕ್ಷ್ಯ ಕೊಟ್ಟು ಕೇಳ್‌ಕೊಳ್ರಿ. ನೋಡ್ರಿ ಇವತ್ತು ಸರ್ಕಾರ ಅನೇಕ ರೀತಿಯ ಸೌಲಭ್ಯಗಳನ್ನು ಕೊಡಬಹುದು. ಫ್ರೀ ಎಜುಕೇಷನ್ ಕೊಡ್ತಿರಬಹುದು. ಮೀಸಲಾತಿ ಕೊಡ್ತಿರಬಹುದು; ಬೇಕಾದಷ್ಟು ಫೆಸಿಲಿಟಿ ಕೊಡಬಹುದು. ಆದ್ರೆ ಸರ್ಕಾರ ಧರ್ಮ ಸಂಸ್ಕಾರ ಕೊಡೋದಿಲ್ಲ, ಸರ್ಕಾರ ನೈತಿಕ ಸಂಸ್ಕೃತಿ ಕೊಡೋದಿಲ್ಲ, ಪ್ರತಿಯೊಬ್ಬರಿಗೂ ಬೇಕಾದಂತಹುದು ಆತ್ಮೋದ್ಧಾರದ ಮಾರ್ಗ. ಆದ್ದರಿಂದ ದಿನನಿತ್ಯ ಸುಪ್ರಭಾತ ಸಮಯದಲ್ಲಿ ಪ್ರತಿಯೊಬ್ಬರೂ ನಾವು ಲಿಂಗಾಯತ ಧರ್ಮೀಯರು ಎಂದು ತಿಳಿದು ಸುಪ್ರಭಾತ ಸಮಯದಲ್ಲಿ ಇಷ್ಟಲಿಂಗ ಪೂಜೆಯನ್ನು ಮಾಡಿ ತೀರ್ಥ ಪ್ರಸಾದವನ್ನು ತೆಗೆದುಕೊಳ್ಳಬೇಕು. ಇಷ್ಟಲಿಂಗ ಪೂಜೆಯನ್ನು ಸುಪ್ರಭಾತದಲ್ಲಿ ಮಾಡಿ ಮೂರು ಸಲ ತೀರ್ಥವನ್ನು ಹಾಕಿ ಕಲ್ಲುಸಕ್ಕರೆಯೋ, ದ್ರಾಕ್ಷಿಯೋ ಇಷ್ಟಲಿಂಗದ ಮುಂದೆ ಪ್ರಸಾದ ರೂಪದಲ್ಲಿ ಇಟ್ಟುಕೊಂಡು ಬಸವ ಕರುಣೋದಕ, ಲಿಂಗ ಕರುಣೋದಕ, ಶರಣ ಕರುಣೋದಕ ಅಂತಾ ಮೂರು ಬಾರಿ ಇಷ್ಟಲಿಂಗಕ್ಕೆ ಎರೆದು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕು. ಅದಕ್ಕೆ ಇಲ್ಲಿ ಹೇಳ್ತಾರೆ ಕಾಯಕ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ. ಅಂದರೆ ಪರಮಾತ್ಮನಿಗೆ ಮೊದಲು ಸಲ್ಲಿಸಿ ನಂತರ ನಾವು ಸ್ವೀಕಾರ ಮಾಡ್ತೀವಿ. ಆವಾಗ ನೀವೆನ್ನಬಹುದು. ತುಂಬ ಜನ ಬಂದಿದ್ದಾರೆ ಬೇರೆ ಜನಾಂಗದವರೆಲ್ಲರೂ ಕೂಡ. ನಮ್ಮ ಶರಣ ಮೇಳದ ವೈಶಿಷ್ಟ್ಯವೇನು ಅಂದರೆ ಈಗ ಮೆಕ್ಕಾಗೆ ಹೋಗ್ತಾರೆ. ಮೆಕ್ಕಾಗೆ ಹೊಗಬೇಕಾದ್ರೆ ಒಂದು ರೂಲ್ಸ್ ಏನಂದ್ರೆ ಮುಸ್ಲಿಂ ಧರ್ಮವನ್ನು ಸ್ವೀಕಾರ ಮಾಡಿದವರು ಮಾತ್ರ ಮೆಕ್ಕಾಗೆ ಹೋಗಲು ಸಾಧ್ಯ. ಹಜ್ ಯಾತ್ರೆಗೆ ಹೋಗಿ ಮೆಕ್ಕಾದಲ್ಲಿ 4 ದ್ವಾರಗಳನ್ನು ಗುರ್ತಿಸಿದ್ದಾರೆ. ಅವುಗಳ ಮೂಲಕವೇ ಹೋಗಬೇಕು. ಆ ದಾರಿಯ ಮೂಲಕ ಹೋಗ್ಬೇಕು. ಮುಸ್ಲೀಂ ಅಲ್ಲದವರು ಮೆಕ್ಕಾದ ಒಳಗೆ ಹೊಗಲಿಕ್ಕೆ ಸಾಧ್ಯವೇ ಇಲ್ಲ. ಆದರೆ ಜಗತ್ತಿನಲ್ಲಿಯೇ ನಮ್ಮ ಶರಣ ಮೇಳದ ವೈಶಿಷ್ಟ್ಯವೇನು ಎಂದರೆ ಜಾತಿ - ಮತ - ಪಂಥ- ಬೇಧವಿಲ್ಲದೇ ಎಲ್ಲರೂ ಶರಣ ಮೇಳಕ್ಕೆ ಆಗಮಿಸುತ್ತಿದ್ದಾರೆ. ಅದೂ ನಮ್ಮ ಒಂದು ವಿಶೇಷವಾದಂತಹ ಕಾರ್ಯಕ್ರಮ ಗುರು ಬಸವಣ್ಣನವರು ನಮಗೆ ಏನು ಕಲಿಸಿಕೊಟ್ಟರೆಂದರೆ ಇವನಾರವ - ಇವನಾರವ - ಇವನಾರವ ನೆಂದೆನಿಸದಿರು ಇವನಮ್ಮವ ಇವನಮ್ಮವ ಇವನಮ್ಮವ ಅನ್ನು. ಈ ಜಗತ್ತು ದೇವರ ಸೃಷ್ಟಿ ಮಾಡಿರುವ ಮಹಾಮನೆ. ಈ ಮಹಾಮನೆಯ ಮಕ್ಕಳು ನಾವಾಗಬೇಕಂತ್ಲೇ ಇದ್ರೆ ನಾವು ಎಲ್ಲರನ್ನು ಆದರಿಸಲಿಕ್ಕೆ ಕಲಿಯಬೇಕು. ಇವನು ಯಾವ ಜಾತಿಯವನು ? ಅಂತಾ ದೂರ ಮಾಡಬಾರದು. ಇವರು ಬಡವರು -ಶ್ರೀಮಂತರು ಅಂತಾ ದೂರ ಮಾಡಬಾರದು. ಇವನು ಏನು ಉದ್ಯೋಗವನ್ನು ಮಾಡ್ತಾನೆ ? ಶ್ರೇಷ್ಠ ಉದ್ಯೋಗವನ್ನು ಮಾಡ್ತಾನೋ ಕನಿಷ್ಠ ಉದ್ಯೋಗವನ್ನು ಮಾಡ್ತಾನೋ ಅಂತಾ ಭೇದ ಮಾಡಬಾರದು. ಇವನಮ್ಮವ ಇವನಮ್ಮವ ಇವನಮ್ಮವ ಎಲ್ಲರಲ್ಲಿ ಪರಮಾತ್ಮನ ಒಂದು ಅಂಶ ಇದೆ. ಎಲ್ಲರ ಕಣ್ಣುಗಳಲ್ಲಿ ಪರಮಾತ್ಮ ನೋಡ್ತಾ ಇದಾನೆ. ಪ್ರತಿಯೊಬ್ಬರ ಕಣ್ಣಿನ ಮೂಲಕವಾಗಿಯೇ ಅವರ ಒಳಗಡೆ ಇರುವ ಆತ್ಮದ ಮೂಲಕ ದೇವರು ನಮ್ಮನ್ನು ನೋಡ್ತಾ ಇದ್ದಾನೆ. ಅಂದಾಗ ಆ ಆತ್ಮ ಚೈತನ್ಯಕ್ಕೆ ನಾವು ಬೆಲೆ ಕೊಡಬೇಕು. ಅದಕ್ಕಾಗಿ ಪರಮಾತ್ಮನ ಮಹಾಮನೆಯ ಮಕ್ಕಳಾಗಬೇಕಾದರೆ ನಾವೆಲ್ಲರನ್ನು ಆದರಿಸಬೇಕು ಅನ್ನುವಂತಾದ್ದು. ನಿನ್ನೆಯ ದಿನ ಹಿಂದುಳಿದ ವರ್ಗದವರ ಒಂದು ಕಾರ್ಯಕ್ರಮವನ್ನು ನಾವು ಇಟ್ಟುಕೊಂಡಿದ್ವಿ. ಇಟ್ಟುಕೊಂಡಾಗ ಎಲ್ಲಾ

ಜಾತಿ, ಜನಾಂಗದವರೂ ಬಂದಿದ್ದರು. ದೊಂಬಿ ದಾಸರು, ಹೆಳವರು, ಹರಿಜನರು, ದಲಿತರು, ನಾಯಕರು ಎಲ್ಲಾ ಜನಾಂಗದವರೂ ಬಂದಿದ್ದರು. ಬಂದಾಗ ಅಲ್ಲಿ ಪ್ರಸಾದ ನಿಲಯಕ್ಕೆ ಹೋದಾಗ ನಮ್ಮಲ್ಲಿ ಯಾವ ಭೇದವೂ ಇಲ್ಲ. ಎಲ್ಲರೂ ಪ್ರಸಾದವನ್ನು ಒಂದೇ ಕಡೆ ಸ್ವೀಕಾರ ಮಾಡ್ತಾರೆ. ನೀವೆಲ್ಲ ಅನೇಕ ಶರಣರು ಅವರ ತಟ್ಟೆಗಳನ್ನು ಈಸ್ಕೊಂಡು ನೀವದನ್ನು ತೊಳೆದಿದ್ದೀರಿ. ಅದನ್ನು ನೋಡಿ ಕೆಲವು ದಲಿತ ತರುಣರು, ದಲಿತ ಸಂಘರ್ಷ ಸಮಿತಿಯ ತರುಣರು ಆನಂದ ಬಾಷ್ಪವನ್ನು ಸುರಿಸಿ ಇವತ್ತು ನಾವು ನಿಜವಾದ ಬಸವ ತತ್ವವನ್ನು ನೋಡಿದೆವು. ಇಲ್ಲಿಯವರೆಗೆ ಬರೀ ಹೇಳುವುದನ್ನು ಮಾತ್ರ ನೋಡಿದ್ದೆವು. ಇವತ್ತು ನೀವೆಲ್ಲ ಶರಣರು ಎಂಥ ವರ್ತನೆಯನ್ನು ಮಾಡಿದಿರಿ ಎಂದು ಕೆಲವರ ಕಣ್ಣುಗಳಲ್ಲಿ ಆನಂದ ಬಾಷ್ಪ ಬಂದಿತ್ತಂತೆ. ಅಂತಾ ಹೇಳ್ತಾ ಇದ್ರು ಇವತ್ತು. ಅಂದಾಗ ನಾವು ಜಗತ್ತನ್ನು ಪ್ರೇಮದಿಂದ-ಪ್ರೀತಿಯಿಂದ ಗೆಲ್ಲಲಿಕ್ಕೆ ಸಾಧ್ಯವೇ ಹೊರತು ಜಾತಿ, ಭೇದದಿಂದ ವಿಷಮತೆಯಿಂದ ಅಲ್ಲ. ಅಂದಾಗ ಎಲ್ಲಾ ಧರ್ಮದವರೂ ಇಲ್ಲಿ ಬರ್ತಾರೆ. ಹಾಗಾದರೆ ನಮಗೇನು ದಾರಿಯಿಲ್ಲವೇನ್ರೀ ಮಾತಾಜಿ. ಲಿಂಗಾಯತರು ಬೆಳಿಗ್ಗೆ ಎದ್ದು ಪೂಜೆ ಮಾಡಿ ತೀರ್ಥವನ್ನು ತೆಗೆದುಕೊಳ್ಳಬೇಕು ಎಂದು ಹೇಳಿಬಿಟ್ರಿ. ಹಾಗಾದ್ರೆ ನಮಗೇನು ದಾರಿ ಇಲ್ವೆ. ಖಂಡಿತ ನಿಮಗೆ ದಾರಿ ಇದೆ. ಉಳಿದಂತಹ ಪ್ರತಿಯೊಬ್ಬರೂ ಯಾವುದೇ ಜಾತಿಯವರಿರಲಿ, ನಾಯಕರಿರಲಿ, ಕಡು ಬಡವರಿರಲಿ, ಹರಿಜನರಿರಲಿ, ಯಾರೇ ಇರಲಿ ಸುಪ್ರಭಾತ ಸಮಯದಲ್ಲಿ ಕೈಕಾಲು-ಮುಖ ತೊಳೆದುಕೊಂಡು ಸ್ನಾನ ಮಾಡಿಕೊಳ್ಳಲು ಅನುಕೂಲತೆ ಇದ್ದರೆ ಸ್ನಾನ ಮಾಡಿರಿ, ಭಸ್ಮ ಧಾರಣೆಯನ್ನು ಮಾಡಿಕೊಳ್ಳಿರಿ. ಮಂತ್ರವನ್ನು ಜಪ ಮಾಡಿರಿ "ಓಂ ಶ್ರೀ ಗುರು ಬಸವ ಲಿಂಗಾಯ ನಮಃ" ಎಲ್ಲಾ ಭವರೋಗಗಳನ್ನು ಕಳೆಯುವಂತಹ ಮಹಾಮಂತ್ರ.

ಗುರು ಬಸವಣ್ಣನವರು ಮಾತೃಹೃದಯಿ; ಎಲ್ಲರನ್ನು ಅಪ್ಪನು ನಮ್ಮ ಮಾದಾರ ಚನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ, ಚಿಕ್ಕಯ್ಯ ನಮ್ಮಯ್ಯ ಕಾಣಿರಯ್ಯ ಎಂದು ಅಪ್ಪಿಕೊಂಡಂತ ಮಹಾನ್ ವ್ಯಕ್ತಿ ಅವರು. ಆದ್ದರಿಂದ ಅವರು ಮಂತ್ರ ಪುರುಷರಾದರು. "ಓಂ ಶ್ರೀ ಗುರು ಬಸವ ಲಿಂಗಾಯ ನಮಃ"ಅನ್ನುವಂತಹ ಪವಿತ್ರ ಮಂತ್ರವನ್ನು ದಿನನಿತ್ಯ ಯಾರೇ ಇರಲಿ, ಪಠಣ ಮಾಡಿರಿ, ಧರ್ಮ ಯಾರ ಸೊತ್ತು ಅಲ್ಲ-ಯಾರೊಬ್ಬರ ಗುತ್ತಿಗೆಯೂ ಅಲ್ಲ. ದೇವನ ಅನುಗ್ರಹ ಎಲ್ಲರ ಮೇಲೆಯೇ ಇದೆ. ಪ್ರತಿಯೊಬ್ಬನ ಮನೆಯ ಮೇಲೂ ಸೂರ್ಯನ ಬೆಳಕು ಬೀಳುತ್ತದೆ. ಆದರೆ ನೀವೇನು ಮಾಡಬೇಕು. ಅಂದ್ರೆ ಬಾಗಿಲ ಕಿಟಕಿ ತೆಗೆಯಬೇಕಷ್ಟೆ.

ಕಿಟಕಿ-ಬಾಗಿಲು ತೆಗೆಯದೇ ನಮ್ಮ ಮನೆಯಲ್ಲಿ ಬೆಳಕು ಬರಲಿಲ್ಲ ಅಂದ್ರೆ ಏನು ಮಾಡಬೇಕು. ಬಾಗಿಲು ಕಿಟಕಿ ತೆಗೆದರೆ ತಾನೇ ಬೆಳಕು ಬರಬೇಕು. ಹಾಗೆಯೇ ಗಾಳಿ ಎಲ್ಲರ ಮನೆಯ ಮೇಲೂ ಬೀಸುತ್ತದೆ. ಒಬ್ಬ ಶ್ರೀಮಂತನ ಬಂಗಲೆ ಮೇಲೂ ಬೀಸುತ್ತೆ, ಬಡವನ ಗುಡಿಸಲ ಮೇಲೂ ಬೀಸುತ್ತೆ. ಆದರೆ ಯಾರ ಕಿಟಕಿ ಬಾಗಿಲು ತೆಗೆದುಕೊಳ್ತಾರಲ್ಲ. ಅವರ ಮನೆ ಒಳಗೆ ಗಾಳಿ ಪ್ರವೇಶ ಮಾಡುತ್ತದೆ. ಹಾಗೆಯೇ ಪರಮಾತ್ಮನ ಅನುಗ್ರಹದ ಬೆಳಕು ಎಲ್ಲ ಜೀವರಾಶಿಯ ಮೇಲೆ ಇದೆ. ನಿಮ್ಮ ಹೃದಯದ ಬಾಗಿಲನ್ನು ಬುದ್ಧಿಯ ಕಿಟಕಿಯನ್ನು ತೆರೆಯಿರಿ. ಪರಮಾತ್ಮನ ಅನುಗ್ರಹದ ಗಾಳಿ ಒಳಗೆ ಬರುತ್ತದೆ. ಸುಪ್ರಭಾತ ಸಮಯದಲ್ಲಿ ನೀವು ವಿಭೂತಿಯನ್ನು ಧರಿಸಿಕೊಳ್ಳಿರಿ ಮಂತ್ರಜಪವನ್ನು ಮಾಡಿರಿ. ಆ ಮೇಲೆ ಪ್ರತಿಯೊಬ್ಬರೂ ತೀರ್ಥವನ್ನು ಮಾಡಿಕೊಳ್ಳಿರಿ. ಎಲ್ಲಾ ಜಾತಿ-ಜನಾಂಗದವರೂ ಪ್ರತಿಯೊಬ್ಬರೂ ತೀರ್ಥವನ್ನು ತೆಗೆದುಕೊಳ್ಳಿರಿ. ಗುರು ಬಸವಣ್ಣನವರ ಅನುಗ್ರಹ, ಸೃಷ್ಟಿಕರ್ತನ ಅನುಗ್ರಹ, ಶರಣರ ಅನುಗ್ರಹ ಅಂತಾ ಹೇಳಿ ತೀರ್ಥ ಪ್ರಸಾದವನ್ನು ನೀವು ತೆಗೆದುಕೊಳ್ಳಿರಿ. ನಿಮಗೆ ಯಾವಾಗ ಇಷ್ಟಲಿಂಗ ದೀಕ್ಷೆಯನ್ನು ತೊಗೋಬೇಕು ಅನ್ನಿಸುತ್ತೋ ಆವಾಗ ನೀವು ಇಷ್ಟಲಿಂಗ ದೀಕ್ಷೆ ತೊಗೋಳ್ರಿ. ಅಲ್ಲಿಯವರೆಗೂ ಬರಿದೇ ಇರಬೇಡ್ರಿ, ದೇವರ ಸ್ಮರಣೆ ಮಾಡದೇ ಇರಬೇಡ್ರಿ, ಪ್ರತಿದಿನ ಬೆಳಿಗ್ಗೆ ಎದ್ದು ಬಸವ ಮಂತ್ರದಲ್ಲಿ ಶ್ರೀಗುರು ಬಸವಣ್ಣನವರ ಹೆಸರು ಇದೆ ಸೃಷ್ಟಿಕರ್ತ ಲಿಂಗದೇವನ ಹೆಸರೂ ಇದೆ. ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಓಂಕಾರದ ಪ್ರತಿನಿಧಿ ಸ್ವರೂಪರಾದ ಬಸವಣ್ಣನವರಿಗೆ ಮತ್ತು ಓಂಕಾರ ಸ್ವರೂಪನಾದ ಲಿಂಗದೇವನಿಗೆ ನಮಸ್ಕರಿಸುತ್ತೇನೆ. ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಇದು ದೇವ ಮಂತ್ರವೂ ಹೌದು-

ಗುರುಮಂತ್ರವೂ ಹೌದು. ಇವೆರಡನ್ನೂ ಕೂಡಿಸಿ ನಾವು ಪಠಣ ಮಾಡ್ತಾ ಇದ್ದೀವಿ. ಅದಕ್ಕಾಗಿ ಪ್ರತಿಯೊಬ್ಬರೂ ಕೂಡಾ ಪೂಜೆ ಮಾಡಿ ತೀರ್ಥ ಪ್ರಸಾದವನ್ನು ತೆಗೆದುಕೊಳ್ಳಿರಿ. ಧರ್ಮಗುರು ಎಲ್ಲಿದ್ದಾರೆ ? ಗುಡಿಗಳಿಗೆ ಹೋದರೆ ನಮ್ಮನ್ನು ಒಳಗೆ ಬಿಟ್ಟುಕೊಳ್ಳಲ್ಲ. ನಮಗೆ ಪೂಜೆ ಮಾಡುವ ಹಕ್ಕಿಲ್ಲ. ಅಥವಾ ತಿರುಪತಿಯಂತಹ ಗುಡಿಗೆ ಹೋದರೆ 4 ದಿನ ಕ್ಯೂ ನಿಲ್ಲಬೇಕು. ಹೆಚ್ಚಿನ ದುಡ್ಡು ಕೊಟ್ಟವರು ಒಳಗೆ ಹೋಗುವರು ಅನ್ನಬಹುದು. ನಮ್ಮ ಅಪ್ಪ ಬಸವಣ್ಣನವರು ಬಹಳ ಸುಲಭವಾಗಿ ಹೇಳಿದ್ದಾರೆ. ಹೊರಗಡೆ ಗುಡಿಗಿಂತಲೂ ನಿನ್ನ ದೇಹವನ್ನು ದೇವಾಲಯವನ್ನಾಗಿ ಮಾಡಿಕೊಳ್ಳುವಂತಹ ಸೂತ್ರವನ್ನು ಕೊಟ್ಟಿದ್ದಾರೆ. ನಿನ್ನ ದೇಹವೆಂಬ ದೇವಾಲಯದಲ್ಲಿ ಆತ್ಮವೆಂಬ ಚೈತನ್ಯವಿದೆ. ಇದಕ್ಕೆ ಕಾಲೇ ಕಂಬ. ದೇಹವೇ ದೇಗುಲ ಶಿರವೇ ಹೊನ್ನಿನ ಕಳಸವಯ್ಯ ಅಂತಾ ಹೇಳಿದ್ದಾರೆ. ಅದಕ್ಕಾಗಿ ಪ್ರತಿಯೊಬ್ಬರೂ ಕೂಡಾ ಶರಣ ಮೇಳಕ್ಕೆ ಸುಮ್ಮನೆ ಬಂದು ಹೋಗುವುದಲ್ಲ. ಇವತ್ತೇ ಪ್ರತಿಜ್ಞೆ ಮಾಡಬೇಕು. ಲಿಂಗಾಯತನಾದ ನಾನು ಇಷ್ಟಲಿಂಗವನ್ನು ಧರಿಸಿಕೊಳ್ತೇನೆ. ಬೆಳಿಗ್ಗೆ ಎದ್ದು ಪೂಜೆಯನ್ನು ಮಾಡ್ತಿವಿ ಅಂತಾ ಮಾಡಿದರೆ, ಲಿಂಗಾಯತೇತರರು ಬೆಳಿಗ್ಗೆ ಎದ್ದು ಇನ್ಮೇಲೆ ಭಸ್ಮಧಾರಣೆ ಮಾಡಿಕೊಂಡು ಓಂ ಶ್ರೀಗುರು ಬಸವ ಲಿಂಗಾಯ ನಮಃ ಎಂಬ ಮಂತ್ರವನ್ನು ಜಪ ಮಾಡ್ತೀವಿ ಅನ್ನುವಂತಹ ಪ್ರತಿಜ್ಞೆಯನ್ನು ನೀವು ಕೈಗೊಳ್ಳಿರಿ. ನೋಡಿ ನಿಮ್ಮ ಜೀವನ ಹೇಗಾಗುತ್ತೆ. ಮೊದಲು ನೀವು ಯಾವುದಾದರೂ ಕೆಲಸ ಮಾಡುವಾಗ ಕಷ್ಟ ಪಟ್ಟಿದ್ದರೆ ನೀವು ಇಷ್ಟೆಲ್ಲ ಮಾಡ್ರಿ ನಿಮ್ಮ ಕೆಲಸ ಹೂವಿನ ಸರ ಎತ್ತಿದಷ್ಟು ಹಗುರವಾಗುತ್ತೆ. ಒಂದು ಎತ್ತರವಾದ ಕಟ್ಟಡವನ್ನು ಹತ್ತುವಾಗ ಮೆಟ್ಟಿಲ ಮೇಲೆ ಹತ್ಕೊಳ್ತಾ ಹತ್ಕೊಳ್ತಾ ಹೋಗ್ತಿರಿ. ಒಂದು Lift ಇರುತ್ತೆ. ಅಂತಾ ಇಟ್ಟುಕೊಳ್ರಿ. Lift ಇದ್ದಾಗ ನಿಮಗೆ ಕಷ್ಟ ಆಗೋದಿಲ್ಲಾ. ಸರ್ऽऽऽ ಅಂತಾ ಮೇಲೆ ಹೋಗಿಬಿಡ್ತಿರಿ. ಮೆಟ್ಟಿಲ ಮೇಲೆ ಹತ್ತಿಕೊಂಡ್ ಹೋಗ್‌ಬಹುದು. ಆದರೆ ಬಹಳ ಕಷ್ಟದ ಹಾಗೆ ನಿಮ್ಮ ಸ್ವಪ್ರಯತ್ನದಿಂದ ನೀವು ಕಷ್ಟಪಟ್ಟು ಏನೋ ಒಂದು ಸಾಧನೆ ಮಾಡಬೇಕು. ನಾಲ್ಕು ಕಾಸು ಗಳಿಸಬೇಕು. ಬಡತನ ಕಳೆದುಕೊಳ್ಳಬೇಕು. ಇಂಥ ಕೆಲಸ ಆಗ್ಬೇಕು. ಅಂತ ಸ್ವಪ್ರಯತ್ನದಿಂದ ಮಾಡ್ತೀರಲ್ಲಾ ಈಗ ನೀವು ಪೂಜೆ ಮಾಡಿ ಅನುಗ್ರಹವನ್ನು ಪಡಕೊಳ್ರಿ. Liftನಲ್ಲಿ ಹೋದಷ್ಟು ಸುಲಭವಾಗಿ ನಿಮ್ಮ ಕಾರ್ಯಗಳು ಸಿದ್ಧಿ ಆಗುತ್ತವೆ. ಅದಕ್ಕಾಗಿ ಇಲ್ಲಿ ಗುರು ಬಸವಣ್ಣನವರು ಹೇಳ್ತಾರೆ 'ಎನ್ನ ಕಾಯದ ಸೂತಕ ಹೋಯಿತ್ತು ನಿಮ್ಮ ಒಕ್ಕುದ ಕೊಂಡೆನಾಗಿ.' ಎಂದು ಒಕ್ಕುದ ಕೊಂಡೆ ಅಂದ್ರೆ ಮೊದಲು ದೇವರಿಗೆ ಸಮರ್ಪಿಸಿ ನಾವು ತೆಗೆದುಕೊಳ್ಳುವ ಪ್ರಸಾದ. "ನಾನಾ ಸೂತಕ ಹೋಯಿತ್ತು ನಿಮ್ಮ ಶರಣರ ಅನುಭಾವಿಯಾಗಿ." ಶರಣ ಬಂಧುಗಳೇ ತಿಳ್ಕೊಳ್ರಿ, ನಾನಾ ಸೂತಕ ಹೋಯಿತ್ತು. ನಮಗೆ ಗೊತ್ತಿಲ್ಲದಷ್ಟು ಮೈಲಿಗೆಗಳು ಆಗಿರಬಹುದು. ಮೈಲಿಗೆ ಅಂದರೆ ಅವರನ್ನು ಮುಟ್ಕೋದು ಇಂಥಾ ಮೈಲಿಗೆ ಅದು ಮೂಢತ್ವ. ಶರಣರ ಸಂಗದಲ್ಲಿ ಒಡನಾಡ್ತಾ ಬಸವ ಮಂಟಪದಲ್ಲಿ ಪ್ರಾರ್ಥನಾ ಕೂಟಗಳಲ್ಲಿ ಸೇರ್ತಾ ಶರಣ ಮೇಳಕ್ಕೆ ಬರ್ತಾ ಈ ರೀತಿಯಾಗಿ ಮಾಡ್ತಾ ಹೋದಾಗ ನಾನಾ ಭಯ ಭ್ರಾಂತಿ ಹೋಗುತ್ತೆ. ನಿಮಗೆ ಗೊತ್ತಿಲ್ಲದಂತೆ ನಿಮ್ಮ ಜೀವನ ಪರಿವರ್ತನೆ ಆಗ್ತಾ ಆಗ್ತಾ ಹೋಗ್ತಾ ಇದೆ. ಹೇಗೆ ಪರುಷ ಮುಟ್ಟಿದರೆ ಕಬ್ಬಿಣ ಬಂಗಾರವಾಗ್ತದೋ ಹಾಗೆ ನಿಮಗೆ ಗೊತ್ತಿಲ್ಲದಂತೆ ನಿಮ್ಮ ಜೀವನ ದೈವೀಕರಣಗೊಳ್ತಾ ಇದೆ. ಅದಕ್ಕೇ ಹೇಳ್ತಾರೆ ಶರಣರ ಅನುಭಾವಿಯಾಗಿ ಎನ್ನ ಮನದ ಸೂತಕ ಹೋಯಿತ್ತು, ಲಿಂಗದೇವಾ ಕೇಳಯ್ಯ ಎನ್ನ ಮನದ ಸೂತಕ ಹೋಯಿತ್ತು ನೀವಲ್ಲದೇ ಎಂದು ಅರಿದೆನಾಗಿ ಎನ್ನ ಮನಸ್ಸಿನ ಸೂತಕ ಹೋಯ್ತು. ದೇವಾ ನೀನೊಬ್ಬನೇ ಸತ್ಯ ಉಳಿದೆಲ್ಲ ದೇವತೆಗಳು ಮಿಥ್ಯ. ನೋಡ್ರಿ ಇವತ್ತು ಶರಣ ಬಂಧುಗಳೇ ಬಹಳ ಜನ ಬಂದಿದೀರಿ. ನಮ್ಮ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೋಕಿನಲ್ಲಿ ನಾಯಕ ಜನಾಂಗದವರು ಬಹಳ ಜನ ಇದ್ದಾರೆ. ಇವತ್ತೂ ಆಂಧ್ರದಲ್ಲಿ ಅನೇಕ ಅನೇಕ ದೇವತೆಗಳ ಹೆಸರು ಹೇಳಿ ಅದರಲ್ಲೀ ಸ್ತ್ರೀ ದೇವತೆಗಳ ಹೆಸರನ್ನು ಹೇಳಿ ಉಗ್ರವಾದ ರೀತಿಯಲ್ಲಿ ಕೋಣವನ್ನು ಬಲಿಕೊಡೋದು, ಕುರಿಗಳನ್ನು ಬಲಿ ಕೊಡೋದು, ಕೋಣಗಳನ್ನು ಬಲಿಕೊಡೋದು ಇಂತಹ ದುಷ್ಕೃತ್ಯ ನಡೀತದೆ. ಕೆಲವರು ಏನ್ ತಿಳ್ಕೊಂಡಿದ್ದಾರೆ ಅಂದ್ರೆ ನಾವು ಅಂತಾ ಬಲಿಗಳನ್ನು ಕೊಟ್ಟು ಬಹಳ ಶ್ರೇಷ್ಠರಾಗ್ತೀವಿ ಅಂಥ. ಯಾವ ಮಟ್ಟಕ್ಕಿಳಿದಿದೆ ಇಂದು ಅಂದ್ರೆ, ದಾವಣಗೆರೆಯಂತಹ ಊರಿನಲ್ಲಿ ದುರ್ಗಾದೇವಿ ಅಬ್ಬಬ್ಬಾ ಎಂತ ಕೆಟ್ಟ

ದೇವತೆಯಪ್ಪಾ ಅದು ದಾವಣಗೆರೆ ನಗರದಲ್ಲಿದೆ. ಅದರ ಹೆಸರಿನಲ್ಲಿ ಸಾವಿರಾರು ಪ್ರಾಣಿಗಳ ರಕ್ತದ ಕೋಡಿ ಹರೀತದ್ರಿ. ಎಂತಹ ಪಾಪದ ಕೆಲಸಾ ರೀ ಇದು . ಒಂದು ವೇಳೆ ಯಾರಾದ್ರೂ ಏನ್ರಿ ಮಾಂಸಾಹಾರ ಒಂದು ಸಲಕ್ಕೆ ಬಿಡೋಕ್ಕೆ ಆಗುತ್ತೇನ್ರಿ ಅಂದ್ರೆ ಮನೆಯಲ್ಲಿ ಬೇಕಂದ್ರೆ ತಿನ್ಕೊಳ್ಳಿ ಏನ್ರಿ ರಕ್ತದ ಕಾಲುವೆ ಹರಿಸುವಷ್ಟು ಕಡಿಯೋದು. ರಾಣಿಬೆನ್ನೂರಿನ ಹತ್ರ ಒಂದು ಊರಿನಲ್ಲಿ ಲಿಂಗಾಯತರಲ್ಲಿ ಕೆಲ ಮೂರ್ಖರು ಹೋಗಿ ಹರಕೆ ಮಾಡಿಕೊಂಡು ಆ ದೇವತೆಗೆ ಕುರಿ ಕೋಳಿ ಕೊಟ್ಟು ಬರ್ತಾರಂತೆ, ಲಿಂಗಾಯತರು ಇವರಿಗೆ ಪಾಪ ಕಟ್ಟಿಟ್ಟ ಬುತ್ತಿ. ಜೈನ ಧರ್ಮದಲ್ಲಿ ಒಂದು ಉದಾಹರಣೆ ಬರುತ್ತದೆ. ಒಬ್ಬ ಅಜ್ಜಿ ಇರ್ತಾಳೆ ಅವಳು ಒಬ್ಬ ಮೂಢ ಹೆಂಗಸು. ಅವಳು ಜೈನ ಧರ್ಮದವಳು ಏನ್ ಮಾಡಿದಳು ಅಂದ್ರೆ. ನಮ್ಮಲ್ಲಿ ಸಾಕಷ್ಟು ಜನರು ಮೂಢರು ಇರ್ತಾರಲ್ಲ. ಆ ರೀತಿಯಲ್ಲಿ ಜೈನ್ ಧರ್ಮದಲ್ಲೂ ಇದ್ಲು. ಅವಳೇನ್ ಮಾಡಿದ್ಲು ಒಂದು ಹರಕೆ ಮಾಡಿಕೊಂಡ್ಲು. ಅವಳ ಮಗನಿಗೆ ಅರಾಮ ಇರಲಿಲ್ಲ. ಮಗನಿಗೆ ಆರಾಮಾದ್ರೆ ಒಂದು ಕೋಳಿ ಬಲಿ ಕೊಡ್ತೀನಿ ಅಂತಾ ಹರಕೆ ಮಾಡಿಕೊಂಡ್‌ಬಿಟ್ಲು. ಜೈನ ಗುರುಗಳಿಗೆ ಗೊತ್ತಾಯ್ತು. ಅವರು ಬಂದ್ರು. ಅಮ್ಮ ಇಂತಹ ಪಾಪದ ಕೆಲಸ ಮಾಡ್‌ತಿದ್ದೀಯಲ್ಲಾ ಜೈನ ಧರ್ಮೀಯಳಾಗಿ ಅಹಿಂಸಾ ಪರಮೋಧರ್ಮ. ಅಂತ ಹೇಳಿದ ಮಹಾವೀರ, ದಯವೇ ಧರ್ಮದ ಮೂಲ ಅಂತ ಬಸವಣ್ಣನವರು ಸಕಲ ಪ್ರಾಣಿಗಳಲ್ಲಿ ದಯವಿರಬೇಕು ಅಂತಾ ಹೇಳಿದ್ರು. ಈ ಕೆಲಸವನ್ನು ನೀವು ಮಾಡ್ತಾ ಇರೋದು ಸರಿಯಲ್ಲ ಅಂದ್ರು. ಆಗಲಿ ಗುರುಗಳೇ ಅಂತ ಮಾತು ಕೊಟ್ಟು. ಮುಂದೆ ಏನಾಯ್ತು ಅಂದ್ರೆ, ಅವಳಿಗೆ ಭಯ ಶುರುವಾಯ್ತು. ನಾ ಹರಕೆ ಮಾಡಿಕೊಂಡಿದ್ದೇ ಕೊಡಲಿಲ್ಲ. ಆದರೆ ಗುರುಗಳಿಗೆ ಮಾತು ಕೊಟ್ಟುಬಿಟ್ಟೆ ಕೊಡಂಗಿಲ್ಲ ಅಂತಾ ಈಗೇನ್ಮಾಡ್ಲಿ ಕಡೆಗೆ ಏನ್ ಮಾಡಿದ್ಲೂ ಅಂದ್ರೆ ಗೋಧಿ ಹಿಟ್ನಿಂದ ಒಂದು ಕೋಳಿ ಮಾಡಿ ಹೋಗಿ ಅದನ್ನು ಬಲಿ ಕೊಟ್ಟು ಬಂದ್ಲು. ಆದರೂ ಸಹ ಅದರಲ್ಲಿ ಬಲಿ ಅನ್ನುವ ಅರ್ಥ ಇದ್ದುದರಿಂದ ಆಕೆ ಏಳು ಪಾಪದ ಜನ್ಮಗಳನ್ನು ಎತ್ತಿ ಕಠೋರವಾದ ಜೀವನವನ್ನು ಬಡತನ, ಕಷ್ಟ, ಕಾರ್ಪಣ್ಯಗಳನ್ನು ಆಕೆ ಎದುರಿಸುತ್ತಾ ಇದ್ದಳು. ಇವತ್ತಿನ ಬಡತನ ಸಂಕಷ್ಟ ಅಜ್ಞಾನ ಇದೆಲ್ಲಕ್ಕೆ ಕಾರಣ ಏನು? ಹಿಂದಿನ ಜನ್ಮದಲ್ಲಿ ಮಾಡಿದಂತಹ ಪಾಪ ಕರ್ಮಗಳು; ಪುನಃ ಅದೇ ಪಾಪ ಕರ್ಮಗಳನ್ನು ಈಗ ಮಾಡುವದು ಅಂದ್ರೆ ಏನು ಮುಂದೆ ಮುಂದೆ ಕಡಿತಾ ಇರ್ತಾರಂತೆ. ಹಿಂದಿನ ಪ್ರಾಣಿಗಳು ಸಾಲಾಗಿ ನಿಂತಿದ್ದವು ಆಕ್ರಂದನ ಮಾಡ್ತಾ ಇರ್ತಾವಂತೆ. ಲೆಕ್ಕಾ ಹಾಕ್ರಿ; ಕಮ್ಮಾರನ ಮನೆಯಲ್ಲಿರುವಂತಹ ಒಂದು ತಿದಿ, ಅದನ್ನು ಒತ್ತಿದರೆ ಅದು ಉಸಿರು ಬಿಟ್ರೆ ಕಠೋರವಾದ ಕಬ್ಬಿಣ ಕರಗಿ ನೀರಾಗುತ್ತೆ. ಎಷ್ಟೋ ಜೀವಗಳು ಆ ದುಃಖದ ಆಕ್ರಂದನವನ್ನು ಮಾಡಿದ್ರೆ ಆ ಪ್ರಾಣಿಯ ಬಿಸಿ ಉಸಿರಿನಿಂದ ಎಂತಹ ಪಾಪ ಸಂಭವಿಸಬಹುದು ಅನ್ನೋದನ್ನು ವಿಚಾರ ಮಾಡ್ರಿ. ಅದಕ್ಕಾಗಿ ಪ್ರಾಣಿಗಳನ್ನು ದೇವತೆಗಳಿಗೆ ಬಲಿ ಕೊಡುವಂತಹ, ಜನ ಒಂದು ವೇಳೆ ಈ ಸಭೆಯಲ್ಲಿ ಇದ್ರೆ ಇವತ್ತೇ ಸಂಕಲ್ಪ ಮಾಡ್ರಿ ಎಂಥಾ ಪ್ರಸಂಗದಲ್ಲಿಯೂ ಇನ್ನು ದೇವತೆಗಳಿಗೆ ಪ್ರಾಣಿ ಬಲಿ ಕೊಡೋದಿಲ್ಲ ಅಂತ ದೃಢ ನಿಶ್ಚಯ ಮಾಡಬೇಕು. ನೋಡಿ ನಿಮ್ಮ ಜೀವನ ಎಷ್ಟೊಂದು ರೀತಿಯಲ್ಲಿ ಒಳ್ಳೇದು ಆಗ್ತದೆ. ಯಾಕಂದ್ರೆ ಒಂದು ಕಡೆ ಬಸವಣ್ಣನವರನ್ನು ವರ್ಣನೆ ಮಾಡ್ತಾ ಅಲ್ಲಮಪ್ರಭು ದೇವರು ಹೇಳ್ತಾರೆ.

ಯುಗದ ಉತ್ಸಾಹವ ನೋಡಿರೆ

ಯುಗದ ಉತ್ಸಾಹ ಅಂತೆ ಬಸವಣ್ಣನವರ ಅವತಾರವಾಗಿದ್ದು; ಪೂರ್ತಿ ವಚನ ಹೇಳಲು ಟೈಮಿಲ್ಲ ಇವಾಗ, ಕೊನೆಯಲ್ಲಿ ಒಂದು ಮಾತು ಹೇಳ್ತಾರೆ. ಪ್ರಾಣಿಗಳೆಲ್ಲವೂ ಪ್ರಣಾಮಂಗೈಯುತ್ತಿದ್ದವು. ಜೀವಿಗಳೆಲ್ಲವೂ ಜಯಾ ಜೀಯಾ ಎನ್ನುತ್ತಿದ್ದವು. ಬಸವಣ್ಣನವರಿಗೆ ಪ್ರಾಣಿಗಳೆಲ್ಲವೂ ಪ್ರಣಾಮ ಮಾಡುತ್ತಿದ್ದವಂತೆ, ನಮಸ್ಕಾರ ಮಾಡುತ್ತಿದ್ದವಂತೆ, ಜೀವಿಗಳೆಲ್ಲವೂ ಜಯಾ-ಜೀಯಾ ನಿನಗೆ ಒಳ್ಳೆದಾಗ್ಲಪ್ಪಾ ಅಪ್ಪಾ ಜಯವಾಗ್ಲಪ್ಪಾ ಬಸವಣ್ಣಾ ಅಂತಿದ್ವಂತೆ. ಯಾಕೆ ಹಿಂಗ ಅಂತಿದ್ವು ಪ್ರಾಣಿಗಳು ಅಂದ್ರೆ ನೋಡೀ ಬಸವಣ್ಣನವರು ಒಂದು ಧರ್ಮವನ್ನು ಕೊಟ್ಟದ್ದರಿಂದ ಇವತ್ತು ಕೋಟಿಗಟ್ಟಲೇ ಜನ ಮೊದಲು ಮಾಂಸಾಹಾರಿಗಳಾಗಿದ್ದವರು ಮಾಂಸಾಹಾರವನ್ನು ಬಿಟ್ಟು ಸಸ್ಯಾಹಾರಿಗಳಾದ್ರು. ಸಸ್ಯಾಹಾರಿಗಳಾಗಿದ್ರಿಂದ ಅಷ್ಟು ಜನ ನಮ್ಮನ್ನ ಕಡಿದು ತಿನ್ನೋದನ್ನು ಬಿಟ್ರು.

ಅಷ್ಟು ಪ್ರಾಣಿಗಳು ಜೀವ ಉಳೀತು. ಅದಕ್ಕಾಗಿ ಪ್ರಾಣಿಗಳೆಲ್ಲ ಅಂತಾವಂತೆ, ಅಪ್ಪಾ ಬಸವಣ್ಣ ನೀನಿಂತಹ ಧರ್ಮ ಕೊಟ್ಟಿದ್ರಿಂದ ನಮ್ಮ ಸಹಪಾಠಿಗಳಾದ ಎಷ್ಟೋ ಪ್ರಾಣಿಗಳ ಜೀವ ಉಳದ್ವಪ್ಪಾ. ಅದಕ್ಕಾಗಿ ನಾವು ನಿನಗೆ ನಮಸ್ಕಾರ ಮಾಡ್ತೀವಿ ಅಂತಾವಂತೆ. ಅಂದಾಗ ವಿಚಾರ ಮಾಡ್ರಿ, ದೇವರು ಪ್ರಾಣಿಯನ್ನು ಕೇಳೋದಿಲ್ಲ. ರಕ್ತದ ಬಲಿಯನ್ನು ಕೇಳೋದಿಲ್ಲ. ಇದು ಚಪಲ ಚಿತ್ತರಾದ ಮನುಷ್ಯರು ಮಾಡಿಕೊಂಡಂತಹ ಕೆಟ್ಟ ವ್ಯವಸ್ಥೆ. ಅದಕ್ಕಾಗಿ ನಾವ್ ಇವತ್ತಿನ ದಿನ ಸಾತ್ವಿಕವಾದ ಒಂದು ಧರ್ಮವನ್ನು ಅನುಸರಿಸಬೇಕು ಮತ್ತು ವಾರಕ್ಕೊಂದು ಸಲ ಪ್ರಾರ್ಥನೆಯನ್ನು ಮಾಡುವ ಪದ್ಧತಿಯನ್ನು ಬೆಳೆಸಿಕೊಳ್ರಿ. ದಿನ ನಿತ್ಯ ಮಂತ್ರ ಜಪವನ್ನು ಮಾಡ್ರಿ ಎಲ್ಲರೂನು. ನಂತರ ಬಸವ ಮಂಟಪಗಳನ್ನು ಊರೂರಿಗೆ ಕಟ್ಟಿ ಎಲ್ಲರನ್ನು ಬರಮಾಡಿಕೊಳ್ರಿ. ಶರಣ ಬಂಧುಗಳೇ ನಿನ್ನೆ ಕೂಡಾ ಹೇಳಿದ್ದೀನಿ. ನಮಗೆ ಎರಡು ರೀತಿಯ ಧರ್ಮ ಸಂಕಟ, ನಿಮ್ಮ ಮುಂದೆ ಕಳಕಳಿಯಿಂದ ಹೇಳ್ತಾ ಇದ್ದೀನಿ. ಒಂದು ಕಡೆಯಲ್ಲಿ ಲಿಂಗಾಯತ ಧರ್ಮ ಶ್ರೇಷ್ಠ ಧರ್ಮ, ಈ ಧರ್ಮವನ್ನು ಅನುಸರಿಸುತ್ತಿರುವ ಕೋಟಿಗಟ್ಟಲೆ ಜನ ಇದ್ದಾರೆ. ಇವರು ಒಂದು ಧರ್ಮದ ಅನುಯಾಯಿಗಳಾಗಿ ಯಾವತ್ತೋ ಒಂದು ದಿನ ಆಗಿ ಹೋಗಿದ್ದಾರೆ. ಇವತ್ತು ಅವರಲ್ಲಿ ಬಹುಪಾಲು ಜನ ಬಸವಣ್ಣನವರ ತತ್ವಗಳನ್ನು ಬಹುಪಾಲು ಅಜ್ಞಾನದಿಂದ ಆಚರಿಸಿದ್ರೂ ಕೂಡಾ ನಾವು ಒಂದು ಮಟ್ಟಿಗೆ ಪಾಲಿಷ್ ಕೊಟ್ರೆ ಸಾಕು. ಏನೋ ಸ್ವಲ್ಪ ಕಿಲುಬಾಗಿದೆ. ಕಿಲುಬಾಗಿರುವುದರಿಂದ ಪಿತಾಂಬರ ಹಾಕಿ ಸ್ವಲ್ಪ ಉಜ್ಜಿದರೆ ಸಾಕು ಬಹಳ ಬೇಗನೆ ಹೊಳಪು ಬಂದು ಬಿಡ್ತದೆ. ಹೀಗಾಗಿ ಲಿಂಗಾಯತ ಸಮಾಜವನ್ನು ಕೈ ಬಿಡಲಿಕ್ಕೆ ನಮ್ಮ ಅಂತರಾತ್ಮ ಒಪ್ಪುವುದಿಲ್ಲ. ಆದ್ರೆ ಇವತ್ತು ಬಹುದೊಡ್ಡದಾದ ಶೂದ್ರ ಜನಾಂಗ ಇದ್ದಾರೆ. ಅಸ್ಪೃಶ್ಯ ಜನಾಂಗ ಇದ್ದಾರೆ. ಅವರಿಗೆ ಯಾವ ಧರ್ಮ ಇಲ್ಲ. ದೇವರು ಇಲ್ಲ, ಸಂಸ್ಕಾರ ಇಲ್ಲ ಪ್ರಾಣಿಗಳಂತೆ ಉಣ್ಣೋದು ತಿನ್ನೋದು ಮಲಗೋದು ಮಕ್ಕಳನ್ನು ಹೆರೋದು ಯಾವದೋ ಒಂದು ರೀತಿಯ ಅಜ್ಞಾನದ ಜೀವನವನ್ನು ಬಾಳೋದು. ಒಂದು ದಿನ ಸಾಯೋದು. ಇಂತಹ ಅಜ್ಞಾನದಲ್ಲಿ ಇವತ್ತು ಅಸಂಖ್ಯಾತ ಶೂದ್ರ ಜನ, ಅಸ್ಪೃಶ್ಯ ಜನ ಇದ್ದಾರೆ ಅಂದಾಗ ಅವರ ಬಗ್ಗೆ ನಮಗೆ ಸಂಕಟ. ಇವರನ್ನೆಲ್ಲ ಯಾವಾಗ ನಾವು ಮೇಲಕ್ಕೆತ್ತುವುದು. ಅವರನ್ನು ಮೇಲಕ್ಕೆತ್ತಬೇಕಾದರೆ ಶರಣ ಬಂಧುಗಳೇ ತಿಳ್ಕೋಳಿ ಇದೊಂದು ದೊಡ್ಡ ಮಹಾಮನೆ, ಈ ದೊಡ್ಡ ಮಹಾಮನೆಯಲ್ಲಿ ನೀವು ಮೊದಲೇ ಈಗಾಗಲೇ 12ನೇ ಶತಮಾನದಿಂದ ಇಲ್ಲಿಯವರೆಗೆ ಬಂದು ಆಗಲೇ ಒಳಗಡೆ ರೈಲು ಗಾಡಿಯಲ್ಲಿ ಕೂತು ಬಿಟ್ಟದ್ದೀರಿ. ಶರಣ ಸಮಾಜ ಎನ್ನುವ ರೇಲ್ವೆ ಗಾಡಿಯಲ್ಲಿ ಲಿಂಗಾಯತರು, 12ನೇ ಶತಮಾನದ ಕೆಲವರು 13ನೇ ಶತಮಾನ,ಕೆಲವರು ಸಿದ್ಧಲಿಂಗೇಶ್ವರ ಕಾಲಮಾನ, ಕೆಲವರು ನಾಯಕನ ಹಟ್ಟಿಯ ತಿಪ್ಪೇರುದ್ರಸ್ವಾಮಿಯ ಕಾಲ ಹೀಗೆಲ್ಲ ಬಂದು ಬಂದು ಒಳಗೆ ಕುಳಿತುಕೊಂಡು ಬಿಟ್ಟೇದ್ದೀರಾ. ಆದರೆ ಒಳಗೆ ಕುಳಿತುಕೊಂಡು ಒಳಗೆ Bolt ಹಾಕ್ಕೊಂಡು ಬಿಟ್ಟದ್ದೀರಾ ನಾವೇನು ಮಾಡಬೇಕು ಈಗ. ಹೊರಗೆ ಪ್ಲಾಟ್‌ಫಾರಂ ಮೇಲೆ ಅಸಂಖ್ಯಾತ ಜನ ನಿಂತಿದ್ದಾರೆ. ಶೂದ್ರರು ಅಸ್ಪೃಶ್ಯರು, ನಾಯಕರು, ಕುರುಬರು, ಹರಿಜನರು, ರಡ್ಡೇರು ಸಾಕಷ್ಟು ಜನ ಇವರೆಲ್ಲ ಹೊರಗಡೆ platform ಮೇಲೆ ಇದ್ದಾರೆ. ಅಪ್ಪ ಬಸವಣ್ಣನವರು ಗಾಡಿ ಬಾಗಿಲನ್ನು ತೆಗೆಯಿರಿ ಅಂತಾ ಹೇಳ್ತಾರೆ. ಇವರು ನೋಡ್ರಿದೆ ಒಳಗಡೆ ಕೂಡು Reservation ಇಲ್ಲದಿದ್ದರೂ ಒಳಗಡೆ Bolt ಹಾಕ್ಕೊಂಡು ಕೂತುಕೊಂಡು ಬಿಟ್ಟದ್ದಾರೆ. ಈಗ ನಾವು ಹೆಂಗಾರ ಮಾಡಿ ಬಾಗಿಲ ತೆಗೆಸಬೇಕೋ ಬೇಡೋ? ಬಾಗಿಲ ತೆಗೆಸಿ ಹೊರಗಡೆ ಇರೋ ಜನರನ್ನು ಒಳಗಡೆ ಕರಕೊಳ್‌ಬೇಕು. ಇದು ನಮ್ಮ ಧರ್ಮ. ನಮ್ಮ ಅಂತರಂಗದ ಕಳಕಳಿ. ಇದನ್ನು ನಾವು ಮಾಡದಿದ್ದರೆ ನಮ್ಮ ದೇಶಕ್ಕೆ ವಿಪತ್ತಿದೆ. ನಮ್ಮ ಭಾರತ ಖಂಡಕ್ಕೆ ವಿಪತ್ತಿದೆ ಯಾಕಂದ್ರೆ ತಿರಸ್ಕಾರಕ್ಕೆ ಒಳಗಾದ ಶೂದ್ರ, ಅಸ್ಪೃಶ್ಯ ಜನಾಂಗ ಒಂದು ಅಧಿಕ ಸಂಖ್ಯೆಯಲ್ಲಿ ಕ್ರೈಸ್ತ-ಇಸ್ಲಾಂ ಧರ್ಮಕ್ಕೆ ಮತಾಂತರ ಹೊಂದಿದರೆ ನಮ್ಮ ಭಾರತ ದೇಶಕ್ಕೆ ಖಂಡಿತಾ ಮುಂದೆ ಅಪಾಯ ಇದೆ. ಅದರ ವಿಪತ್ತನ್ನು ನಾವು ಮೊದಲೇ ತಿಳಿದುಕೊಳ್ಳದೇ ಇದ್ರೆ ಬಹಳ ದೊಡ್ಡ ತಪ್ಪಾಗುತ್ತೇ ಅದಕ್ಕಾಗಿ ನೀವೆಲ್ಲ Missionary workನ್ನು ತೆಗೆದುಕೊಳ್ಳಬೇಕು. ಬಸವ ಮಂಟಪಗಳನ್ನು ಕಟ್ಟಿ. ಎಲ್ಲರಿಗೂ ಧರ್ಮಬೋಧೆಯನ್ನು ಮಾಡಿ ಬನ್ನಿ ನಾವೆಲ್ಲರನ್ನು ಪ್ರೀತಿಸ್ತೀವಿ. ಎಲ್ಲರನ್ನು ಕರೆದುಕೊಳ್ತೀವಿ.

ನೀವು ಪ್ರಾರ್ಥನೆಗೆ ಬನ್ನಿ, ನೀವೂ ಪೂಜೆ ಮಾಡ್ಕೊಳ್ರಿ." ಈ ರೀತಿಯಾಗಿ ನಾವು ಪರಿವರ್ತನೆ ಮಾಡಬೇಕು ಶರಣರೇ. ನಮ್ಮ ಮೇಲೊಂದು ಜವಾಬ್ದಾರಿ ಇದೆ. ಈಗ ನಮ್ಮ ದರ್ಶನಕ್ಕೆ ಯಾರೋ ಬರ್ತೀರಿ. ಒಂದು ಹಣ್ಣನ್ನು ನಿಮ್ಮ ಕೈಗೆ ಕೋಡ್ತೀವಿ. ಹಣ್ಣನ್ನು ಕೊಟ್ಟಾಗ ನೀವು ಅದನ್ನೆಲ್ಲ ತಿಂದ್ ಬಿಡಲ್ಲ; ಹೋಗಿ ಅಲ್ಲಿ ಕುಳಿತವರಿಗೆ ಬಾಳೆಹಣ್ಣು ಇಷ್ಟಿಷ್ಟು ಮುರಿದು ಪ್ರಸಾದ ಕೊಡ್ತೀರಿ. ಹಾಗೆ ಗುರು ಬಸವಣ್ಣನವರು ಧರ್ಮದ ಹಣ್ಣನ್ನು ನಮಗೆ ಕೊಟ್ಟು ಹೋಗಿದ್ದಾರೆ, ಇನ್ನು ಹಂಚಿ ತಿನಬೇಕಾದ್ದು ನಮ್ಮ ಧರ್ಮ ನಮ್ಮ ಕರ್ತವ್ಯ. ನಮಗೆ ಕೊಟ್ಟಿದ್ದಾರೆ ಎಂದು ನಾವು ಹಂಚ್ಕೊಂಡು ತಿನ್ನದ್ರೆ ಆಗ ಗುರು ಬಸವಣ್ಣನವರ ಹೃದಯಕ್ಕೆ ಖಂಡಿತಾ ಆನಂದ ಆಗಲ್ಲ- ಶಾಂತಿ ಸಿಕ್ಕೋದಿಲ್ಲ. ಇಂದು ನಮ್ಮ ದೇಶದ ಹಿತದೃಷ್ಟಿಯಿಂದ ಲಾದರೂ ಕೂಡ ನಾವು ಉದಾರವಾದಿಗಳಾಗಲೇ ಬೇಕು. ಎಲ್ಲರನ್ನು ಆದರಿಸಬೇಕು. ರಾಜಕೀಯ ವ್ಯಕ್ತಿಗಳಿಂದ ನಾವು ಅದನ್ನು ನಿರೀಕ್ಷೆ ಮಾಡ್ಲಿಕ್ಕೆ ಆಗೋದಿಲ್ಲ, ಶರಣರಿಂದ ಮಾತ್ರ ಪರಿವರ್ತನೆ ನಿರೀಕ್ಷೆ ಮಾಡಲು ಸಾಧ್ಯವಿದೆ. ಅದಕ್ಕಾಗಿ ಇಂತಹ ಒಂದು ಉದಾತ್ತ ಉದ್ದೇಶದಿಂದ ಶರಣಮೇಳವನ್ನು ನಾವು ಮಾಡ್ತಾ ಇದ್ದೇವೆ. ಅಂದು ಗುರು ಬಸವಣ್ಣನವರು ನಮಗೆ ಹೇಳಿದ್ದಾರೆ. ಭಕ್ತ-ಭಕ್ತನ ಮನೆಗೆ ಬಂದರೆ ಭೃತ್ಯಾಚಾರವ ಮಾಡಬೇಕು ಇದನ್ನು ಚನ್ನಾಗಿ ಶರಣ ಮೇಳದಲ್ಲಿ ನೀವು ನೋಡ್ತಾ ಇದ್ದೀರಾ. ಅಂದು ಅವರು ಕರೆ ಕೊಟ್ಟರು. ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ ಜನ ನೆರೆವರಯ್ಯಾ. ನಿಜವಾಗಿಯೂ ನಡೆದಿರುವ ಘಟನೆಗಳನ್ನು ಕೂತು ಮೆಲಕು ಹಾಕಿದರೆ ಎಂಥಾ ಪವಾಡ. ನಾವು ಕನಸು ಮನಸ್ಸಿನಲ್ಲಿಯೂ ನೆನೆಸಿರಲಿಲ್ಲ. ಇಂತಹ ಶರಣ ಮೇಳ ನಡೆಯಬಹುದು. ಕೂಡಲ ಸಂಗಮ ಕ್ಷೇತ್ರ ಕಣ್ಣು-ಹೃದಯ -ಮನಸ್ಸು ತುಂಬೋ ರೀತಿಯಲ್ಲಿ ಇದು ಬೆಳೆದು ನಿಲ್ಲಬಹುದು. ನೀವು ನಾವು ಇಲ್ಲಿ ಕೂತು ಇಷ್ಟೊಂದು ಪ್ರೀತಿಯಿಂದ ಬಸವಣ್ಣನವರನ್ನು ಹಾಡಿ -ಪಾಡಿ-ಕೊಂಡಾಡಿ ನಲಿದಾಡ್ತೀವಿ ಅನ್ನೋ ಕಲ್ಪನೆ ನಮಗೆ ಖಂಡಿತಾ ಇದ್ದಿರಲಿಲ್ಲ. ಆದರೆ ಬಸವಾದಿ ಪ್ರಮಥರಿಗೆ ಇತ್ತು ನಮ್ಮ ಮಕ್ಕಳು ಒಂದು ದಿನ ಎಲ್ಲಾ ಸೇರ್ತಾರೆ ಅಂತ ಅವರಿಗೆ ಗೊತ್ತಿತ್ತು ಅವರು ಕಾಲಜ್ಞಾನಿಗಳು, ಅವರಿಗೆ ಮುಂದೇನಾಗುತ್ತದೆ ಅಂತಾ ಗೊತ್ತು. ಅದಕ್ಕೆ ಮಡಿವಾಳ ಮಾಚಿದೇವರು ಹೇಳಿದ್ದರು. "ದಕ್ಷಿಣದ ಕೃಷ್ಣೆಗೆ ಕರೆವರಯ್ಯ ಜನ ನೆರೆವರಯ್ಯ. ಕೃಷ್ಣಾ ನದಿಯ ದಂಡೆಗೆ ಕರೀತಾರೆ ಜನ ಎಲ್ಲಾ ಸೇರ್ತಾರೆ ಅಂದಿದ್ದಾರೆ ಮಡಿವಾಳ ಮಾಚಿದೇವರು. 850 ವರ್ಷಗಳ ಹಿಂದೆ ಹೇಳಿದ್ದಾರೆ. ಉತ್ತರ-ದಕ್ಷಿಣ- ಪೂರ್ವ- ಪಶ್ಚಿಮ ಎಲ್ಲ ಕಡೆಗಳಿಂದ ಬರ್ತಾರೆ ಅಂತಾ ಹೇಳಿದ್ದಾರೆ, ಹೌದಲ್ಲೋ ದಿನದಿನಕ್ಕೆ ವಿಸ್ತಾರವಾಗ್ತಾ ಇದೆ. ಎಲ್ಲಾ ಕಡೆಯಿಂದ ಜನ ಬರ್ತಾರೆ ಕೇವಲ ಅಖಂಡ ಭಾರತದಿಂದ ಅಲ್ಲ ವಿಶ್ವದ ಎಲ್ಲ ಭಾಗಗಳಿಂದ ಬರಬೇಕು. ಅದು ನಮ್ಮ ಸಂಕಲ್ಪ ಆ ಮಟ್ಟವನ್ನು ನಾವು ಮುಟ್ಟಬೇಕಾದರೆ ಪರಿಧಾವಿಯೆಂಬ ಸಂವತ್ಸರಕ್ಕೆ ಎಲ್ಲರೂ ಬರುವರು ಅಂತಾ ಮಡಿವಾಳ ಮಾಚಿದೇವರು ಹೇಳಿದ್ದಾರೆ. ಈ ರೀತಿಯಾಗಿ ಎಲ್ಲರೂ ಸೇರಿದಾಗ ಭಕ್ತ-ಭಕ್ತನ ಮನೆಗೆ ಬಂದಡೆ ಭೃತ್ಯಾಚಾರವ ಮಾಡಬೇಕು. ಎಷ್ಟೊಂದು ಜನ ಸೇವೆ ಮಾಡ್ತಾ ಇದ್ದಾರೆ ನಮಗೆ ನಿಜವಾಗ್ಲೂ ಸಂತೋಷ ಅನ್ನಿಸ್ತಿದೆ. ನಮಗೇ ಇಷ್ಟು ಸಂತೋಷ ಆಗುತ್ತದೆ ಅಂದ್ರೆ ಅಪ್ಪ ಬಸವಣ್ಣನಿಗೆ ಇನ್ನಷ್ಟು ಸಂತೋಷವಾಗ್ತಾ ಇದೆಯೋ ಏನೋ! ಒಂದು ಮನೆಯಲ್ಲಿ ಮದುವೆ ಕಾರ್ಯ ಮಾಡಬೇಕಂದ್ರೆ ಜನ ಒದ್ದಾಡಿ ಹೋಗಿಬಿಡ್ತಾರೆ. ಒಂದು ಗೃಹ ಪ್ರವೇಶ ಮಾಡ್ಬೇಕಂದ್ರೆ, ಸಾಕಷ್ಟು ಬಳಲ್ತೀರಿ. ಇಂಥಾ ದೊಡ್ಡ ಕಾರ್ಯಕ್ರಮ ಎಷ್ಟು ನಿರಾಯಾಸವಾಗಿ ನಡೆಯುತ್ತಿದೆ. ಅಡಿಗೆ ಮಾಡುವ ಮಲ್ಲಪ್ಪ ಒಬ್ಬಹಳ್ಳಿಯ ಶರಣ ಆತ ಎಂಥಾ ನಿಷ್ಠೆಯಿಂದ ರಾತ್ರಿ 2 ಗಂಟೆಗೆ ನಿಮ್ಮ ಬಸ್ ಬಂದ್ರೂ, ಯಾವುದೇ ಬೇಸರ ಇಲ್ದೆ ಪ್ರಸಾದ ಮಾಡಿ ನೀಡ್ತಾನೆ ಇದ್ದಾನೆ. ಆತನ ಹಾಗೂ ಅವನ ಜೊತೆಗಿರುವವರು. ಅದೇ ರೀತಿ ನಮ್ಮ ರಾಷ್ಟ್ರೀಯ ಬಸವ ದಳದ ಶರಣ ಬಂಧುಗಳು ಸ್ಟೇಜ್ ರೆಡಿ ಮಾಡ್ತಾರೆ, ದಾಸೋಹ ಮಾಡಸ್ತಾರೆ. ಇಷ್ಟು ದೊಡ್ಡ ಕಾರ್ಯಕ್ರಮ ಇಷ್ಟೊಂದು ನಿರಾಯಾಸವಾಗಿ ನಡೀತಾ ಇದೆ ಅಂದ್ರೆ ಅದು ನಮ್ಮ ನಿಮ್ಮ ಶಕ್ತಿ ಅಲ್ಲ. ಅದು ಬಸವ ಶಕ್ತಿ, ಅದು ಆದಿ ಶರಣರ ಶಕ್ತಿ ಅವರ ಸಂಕಲ್ಪ; ಅದಕ್ಕಾಗಿ ಅವರು ಹೇಳಿದ್ರು ಭಕ್ತ-ಭಕ್ತನ ಮನೆಗೆ ಬಂದರೆ ಭೃತ್ಯಾಚಾರವ ಮಾಡಬೇಕು. ಕರ್ತನಾಗಿ ಕಾಲ ತೊಳೆಸಿಕೊಂಡರೆ ಹಿಂದೆ ಮಾಡಿದ ಭಕ್ತಿಗೆ ಹಾನಿ. ನಾನು ಬಹಳ ದೊಡ್ಡ ಮನುಷ್ಯ ಅಂತಾ ಭಾವಿಸಿಕೊಳ್ಳಬಾರದಂತೆ ಪ್ರತಿಯೊಬ್ಬರೂ ಭಕ್ತ ಉಳಿದುದು ಜಂಗಮ

ಅಂತಾ ತಿಳಿದುಕೊಳ್ಳಬೇಕಂತೆ. ಅದಕ್ಕಾಗಿ ಶರಣ ಬಂಧುಗಳೇ ತಾವೆಲ್ಲರೂ ಸಂಕಲ್ಪ ಮಾಡಿಕೊಳ್ರಿ ಏನಪ್ಪಾ ಅಂದ್ರೆ ನೀವು ಸಣ್ಣ ಶಕ್ತಿಯೇ ಇರಲಿ, ದೊಡ್ಡ ಶಕ್ತಿಯೇ ಇರಲಿ, ಇನ್ನು ಬರ್ತಾ ಬರ್ತಾ ಬರ್ತಾ ಶರಣ ಮೇಳ ಸ್ವಾವಲಂಬಿಯಾಗಿ ನಿರಂತರವಾಗಿ ನಡೆಯಬೇಕು. ಆದ್ದರಿಂದ ಒಂದು ವರ್ಷದಲ್ಲಿ ಕನಿಷ್ಠ 5000 ರೂಗಳನ್ನು ಅದಕ್ಕಿಂತ ಹೆಚ್ಚಿಗೆ ಶಕ್ತಿ ಇದ್ದವರು ಹೆಚ್ಚಿಗೆ ಕೊಡ್ರಿ. ಕನಿಷ್ಠ 5000 ರೂಗಳನ್ನು ಶರಣ ಮೇಳದ ದಾಸೋಹಕ್ಕೆ ನಾವು ಕೊಡ್ತೀವಿ ಅನ್ನೋ ಸಂಕಲ್ಪ ಮಾಡಿಕೊಂಡು ಇವಾಗಿನಿಂದಲೇ ನಾಲ್ಕು ಕಾಸು ಕೂಡಿಹಾಕ್ಕೊಳ್ತಾ ಹೋದ್ರು ಶರಣ ಮೇಳದ ಹೊತ್ತಿಗೆ ಸರಿಯಾಗಿ ಆ ಹಣ ಸೇರುತ್ತದೆ. ಇನ್ನು ಅಷ್ಟು ಶಕ್ತಿ ಇಲ್ಲದಿದ್ರೂ ಪರವಾಗಿಲ್ಲ. ನಿಮ್ಮ ಭಕ್ತಿ ಬಹಳ ದೊಡ್ಡದು. ಒಂದು ರೂಪಾಯಿಯೂ ಪರವಾಗಿಲ್ಲ. ಆದರೆ ಇದು ಪವಿತ್ರವಾದ ಹಣ ದಾಸೋಹಕ್ಕೆ ಸಲ್ಲಬೇಕು ಅಂತ ಬಡವರು ದಿನಾ ಒಂದು ರೂಪಾಯಿ, ಹೋಗ್ಲಿ ಎಂಟಾಣೆ ತೆಗೆದಿಡ್ರಿ. ಅದು ಪವಿತ್ರವಾದ ಕಾರ್ಯಕ್ಕೆ ಸಲ್ತಾ ಇದೆ. ಆ ಪುಣ್ಯದ ಫಲ ನಿಮಗೆ ಪುನಃ ಸಿಗ್ತಾ ಇದೆ. ಅದಕ್ಕಾಗಿ ನನಗೆ ಯಾರೋ ಹೇಳಿದ್ರೂ. ನೋಡ್ರಿ ಶರಣ ಮೇಳವನ್ನು ಈ ಸಾರಿ ಗ್ಯಾಪ್ ಮಾಡಿಬಿಡ್ರಿ ಅಂತ. ಪತ್ರಕರ್ತರೂ ಕೇಳಿದರು ಪತ್ರಿಕಾಗೋಷ್ಠಿಯಲ್ಲಿ. ನಾನು ಹೇಳ್ದೆ "ಶರಣ ಮೇಳ ವೈಭವದ ಉತ್ಸವ ಅಲ್ಲ. ಭಕ್ತಿಯ ಧಾರ್ಮಿಕ ವಿಧಿ. ಇಲ್ಲಿ ವೈಭವ -ಆಡಂಬರಕ್ಕೆ ಅವಕಾಶವಿಲ್ಲ. ಪೂಜೆ-ಪ್ರಾರ್ಥನೆ-ಸರಳವಾದ ಪ್ರಸಾದ ಈ ರೀತಿ. ಇದೊಂದು ಧಾರ್ಮಿಕ ವಿಧಿ, ಸೂರ್ಯ ಚಂದ್ರರಿರುವ ತನಕ ನಿರಂತರವಾಗಿ ಇದು ನಡೆಯಬೇಕೇ ಹೊರತು ಇದು ನಿಲ್ಲುವ ಹಾಗಿಲ್ಲ" ಅಂತಾ ನಾನು ಹೇಳಿದೆ. ಅದಕ್ಕಾಗಿ ಶರಣ ಬಂಧುಗಳೇ ತಾವು ನಿಮ್ಮ ಕಾರ್ಯಕ್ರಮ ಇದು ಎನ್ನುವ ಅಭಿಮಾನವನ್ನು ಬೆಳೆಸಿಕೊಳ್ಳಿರಿ. ಎಷ್ಟು ಸಾಧ್ಯವೋ ಸ್ವಯಂ ಪ್ರೇರಣೆಯಿಂದ ನೀವು ಕೊಡಿ. ಶರಣ ಮೇಳದ ನಂತರ ಇನ್ನೊಂದು ಕಾರ್ಯಕ್ರಮವನ್ನು ನಾವಿಟ್ಟುಕೊಂಡಿದ್ದೀವಿ, ಅಲ್ಲಮ ಗಿರಿಯಲ್ಲಿ ಗಣ ಮೇಳವನ್ನು ಮಾಡ್ತಾ ಇದ್ದೀವಿ. ಇದು ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೇ ತಾಲೋಕಿನ ಅಲ್ಲಮಪ್ರಭು ಡೋಂಗರ್‌ನಲ್ಲಿ ನಡೆಯುವಂಥ ಕಾರ್ಯಕ್ರಮ. ಮೀರಜ್ ರೈಲ್ವೆ ಸ್ಟೇಶನ್‌ದಿಂದ ಹಾತ್ ಕಣಂಗಲೇ ತನಕ ಬಸ್‌ಗಳು ಬರ್ತಾವೆ. ಯಾರಿಗೂ ನಾವು ಒತ್ತಾಯ ಮಾಡೋದಿಲ್ಲ. ಏಕೆಂದರೆ ಮಹಾರಾಷ್ಟ್ರದ ಜನರನ್ನು ಸಂಘಟನೆ ಮಾಡಲಿಕ್ಕೋಸ್ಕರ ನಾವು ಮಹಾರಾಷ್ಟ್ರದಲ್ಲಿ ಈ ಕಾರ್ಯಕ್ರಮ ಮಾಡ್ತಾ ಇದ್ದೇವೆ. ಇನ್ನೂ ಇದಾದ ನಂತರ ಇನ್ನೊಂದು ಕಾರ್ಯಕ್ರಮವನ್ನು ನಾವು ಹಾಕ್ಕೊಳ್ಳೋರಿದ್ದೀವಿ. ಬಹುಶಃ ಈ ವರ್ಷವೇ ಹಾಕ್ಕೊಳ್ಳಬಹುದು. ಅಥವಾ ಮುಂದಿನ ವರ್ಷ ಹಾಕ್ಕೊಳ್ತೀವೋ, ಬೆಂಗಳೂರಿಗೆ ಹೋಗಿ ನಿರ್ಧಾರ ಮಾಡ್ತೀವಿ. ಬಸವ ಜಯಂತಿ ಅಕ್ಷಯ ತೃತೀಯದಂದು ಬರ್ತದೆ. ಅಕ್ಷಯ ತೃತೀಯ ನಂತರದ ಹುಣ್ಣಿಮೆಯನ್ನು ನಾವು ಬಸವ ಪೌರ್ಣಿಮೆ ಅಂತಾ ಆಚರಿಸ್ತಾ ಇದ್ದೀವಿ. ಬಸವ ಪೌರ್ಣಿಮೆ ಆದ್ದರಿಂದ ಬೆಂಗಳೂರಿನ ಜನಕ್ಕೆ, ಬೆಂಗಳೂರು ಸುತ್ತ ಮುತ್ತ ಇರುವ ತುಮಕೂರು, ಮೈಸೂರು, ಮಂಡ್ಯ ಈ ಎಲ್ಲಾ ಜಿಲ್ಲೆಗಳವರಿಗೆ ಒಂದು ಧಾರ್ಮಿಕ ಬೋಧೆಯನ್ನು ಸತ್ಸಂಗವನ್ನು ಕೊಡಲಿಕ್ಕೋಸ್ಕರ ನಾನು ವಿಚಾರ ಮಾಡ್ತಾ ಇದ್ದೀನಿ. ಬುದ್ಧ ಪೌರ್ಣಿಮೆಯ ದಿನ ಒಂದು ದೊಡ್ಡ ಕಾರ್ಯಕ್ರಮವನ್ನು ಗಂಗೋತ್ರಿಯಲ್ಲಿ ಹಾಕಿಕೊಳ್ಳಬೇಕು ಅಂತಾ. ಯಾಕೇಂದ್ರೆ ಪೂಜ್ಯ ಬಸವ ಕುಮಾರ ಸ್ವಾಮಿಗಳು, ನಂತರ ಶರಣ ಶ್ರೀಕಂಠಕುಮಾರ್ ಮುಂತಾದ ಶರಣರು ಮಂಡ್ಯ ಜಿಲ್ಲೆಯಲ್ಲೆಲ್ಲಾ ಓಡಾಡಿ ಬಂದರು. ಆಗ ಅಲ್ಲಿಯ ಜನ ಏನ್ರಿ ಇಷ್ಟ್ ವರ್ಷ ಆದ್ರೂ ನಮಗೆ ಗೋತ್ತಿಲ್ಲವಲ್ರಿ, ಇಷ್ಟು ವರ್ಷ ಆದ್ರೂ ನಮ್ಮ ಹತ್ರಾ ಬಂದಿಲ್ವಲ್ರಿ ನಮ್ಮೂರಿಗೆ ಬರ್ರಿ, ನಮ್ಮೂರಿಗೆ ಬರ್ರಿ ಕಾಣಿಕೆ ಮಾಡಿಕೊಡ್ತೀವಿ ಅಂತಾ ಒತ್ತಾಯಿಸಿದರು. ನಮಗೆ ಹೋಗಕ್ಕೆ ಆಗಲಿಲ್ಲ. ಏಕೆಂದರೆ Pre-plan ಇರಲಿಲ್ಲ. ಯಾರೋ ಒಬ್ಬರು ರಸ್ತೆಯಲ್ಲಿ ಪ್ರಚಾರದ ಗಾಡಿ ನೋಡೋದು. ನಮ್ಮೂರಿಗೆ ಬರ್ರಿ ನಮ್ಮೂರಿನಲ್ಲಿ ತೂಗೊಂಡ್ ಹೋಗ್ರಿ ಕಾಣಿಕೇನಾ ಅನ್ನುವುದು. ಅದನ್ನು ನೋಡಿದಾಗ ಅನ್ನಿಸ್ತು. ಯಾಕೋ ನಾವ್ ಸ್ವಲ್ಪ ತಪ್ಪು ಮಾಡಿದೆವಲ್ಲಾ, ಬೆಂಗಳೂರು ಸುತ್ತ ಮುತ್ತ ಪ್ರದೇಶವನ್ನು ಮರೆತು ಬಿಟ್ಟೆವಲ್ಲ ಅಂತ ನನಗನ್ನಿಸಿದೆ ಅದಕ್ಕಾಗಿ ವೈಶಾಖ ಮಾಸದ ಪೌರ್ಣಿಮೆಗೆ (ಮೇ 27-28) ಒಂದು ಕಾರ್ಯಕ್ರಮ ವನ್ನು ಇಟ್ಕೋಬಹುದು ಅಂತಾ ನನ್ನ ಮನಸ್ಸಿಗೆ ಬಂದಿದೆ. ಅದನ್ನು ನಂತರ ನಮ್ಮ ಜಂಗಮ ಮೂರ್ತಿಗಳ ಜೊತೆಗೆ ಚರ್ಚೆಯನ್ನು ಮಾಡ್ತೀನಿ. ಇನ್ನು ಕಲ್ಯಾಣ

ಪರ್ವ. ಇದು ಆಶ್ವಯುಜ ಮಾಸದ ಪೌರ್ಣಿಮೆಯ ದಿನ; ಇದಕ್ಕೆ ಮೊದಲು 2 ದಿನಕ್ಕೆ ಶುರುವಾಗ್ತದೆ. ಬಸವ ಪುತ್ಥಳಿಯ ಕಾರ್ಯದ ಜೊತೆಗೆ ಪ್ರತಿವರ್ಷವೂ ಕೂಡಾ ಕಲ್ಯಾಣ ಪರ್ವ ಜರುಗ್ತಾ ಇದೆ. ಇದು ಆಶ್ವಯುಜ ಮಾಸದ 13ನೇ ದಿನ ಪ್ರಾರಂಭವಾಗಿ ಹುಣ್ಣಿಮೆಯ ದಿನ ಮುಕ್ತಾಯವಾಗ್ತಾ ಇದೆ. ಶರಣ ಮೇಳ ಮತ್ತು ಕಲ್ಯಾಣ ಪರ್ವ ಇವು Compulsary Subjects ಇನ್ನು ಬೆಂಗಳೂರಿನ ಸಮಾವೇಶ, ಮಹಾರಾಷ್ಟ್ರದ ಸಮಾವೇಶ ಇವು Optional Subjects. ಶರಣ ಮೇಳ ಮತ್ತು ಕಲ್ಯಾಣ ಪರ್ವವನ್ನು ಮಾತ್ರ ಎಂತಹ ಪ್ರಸಂಗದಲ್ಲೂ ತಪ್ಪಿಸುವ ಹಾಗಿಲ್ಲ. ಇದು ನಿಮ್ಮ ಜೀವನದ ಅವಿಭಾಜ್ಯ ಅಂಗವಾಗಬೇಕು. ಅದಕ್ಕಾಗಿ ಶರಣ ಬಂಧುಗಳೇ ಪ್ರತಿಒಬ್ಬರೂ ಕೂಡಾ ಅಂತಾ ಒಂದು ಸಂಕಲ್ಪವನ್ನು ಮಾಡ್ರಿ. ಈಗ ಗುರು ಬಸವಣ್ಣನವರ ಪುತ್ಥಳಿಯ ಕಾರ್ಯ ತ್ವರಿತಗತಿಯಿಂದ ನಡೀತಾ ಇದೆ. ಅದು ಆದಷ್ಟೂ ಬೇಗ ಪೂರೈಸಬೇಕು ಎಂದು ನಮ್ಮ ಒಂದು ಕಳಕಳಿಯ ಅಪೇಕ್ಷೆ; ಅದಕ್ಕಾಗಿ ಸ್ವಾಮೀಜಿ ನೆನಪಿಸ್ತಾ ಇದ್ದಾರೆ, ಮಹಾರಾಷ್ಟ್ರದ ಗಣಮೇಳವು ಮಹಾರಾಷ್ಟ್ರದವರಿಗೆ Compulsary ಯಾದರೆ ಶರಣ ಮೇಳ - ಕಲ್ಯಾಣ ಪರ್ವ ಎಲ್ಲರಿಗೂ Compulsary. ಇದರಲ್ಲಿ ಎಲ್ಲರೂ ಭಾಗವಹಿಸಲೇಬೇಕು.


ಲಿಂಗಾಯತೇತರು ತೀರ್ಥ ಪ್ರಸಾದ ಹೇಗೆ ತೆಗೆದುಕೊಳ್ಳಬೇಕು ಅಂತಾ ಕೇಳ್ತಾ ಇದ್ದಾರೆ. ಗುರು ಬಸವಣ್ಣನವರ ಭಾವಚಿತ್ರ ವಿಟ್ಟು, ಪೂಜೆ ಮಾಡಿ 108 ಸಲ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ಅಂತಾ ಮಂತ್ರಜಪವನ್ನು ಮಾಡಿ ಆದಾದ ನಂತರ ಕೈಯಲ್ಲಿ ದ್ರಾಕ್ಷಿನೋ, ಕಲ್ಲು ಸಕ್ಕರೆನೋ ಈ ರೀತಿ ಪ್ರಸಾದವನ್ನಿಟ್ಟುಕೊಂಡು 3 ಸಲ ಉದ್ಧರಣೆಯಿಂದ ಅಥವಾ ಚಮಚದಿಂದ ನೀರನ್ನು ಬಿಟ್ಟುಕೊಳ್ಳಬೇಕು. ಗುರು - ಲಿಂಗ - ಜಂಗಮ ಅಂತಾ ನಾವ್ ಹೇಳ್ತಿವಿ. ನೀವುಗಳು ಬಸವ ಕರುಣೋದಕ, ಲಿಂಗ ಕರುಣೋದಕ ಮತ್ತು ಶರಣ ಕರುಣೋದಕ ಅಂತಾ ಮೂರು ಸಲ ತೀರ್ಥವನ್ನು ಹಾಕಿ, ಆ ತೀರ್ಥ ಪ್ರಸಾದವನ್ನು ಸ್ವೀಕಾರ ಮಾಡಬೇಕು. ಯಾರು ಇವತ್ತು ಬಂದಿದ್ದೀರಿ ಇಲ್ಲಿ ಪ್ರತಿಜ್ಞೆ ಮಾಡ್ರಿ, ನಾಳೆಯಿಂದ ಶುರು ಮಾಡ್ರಿ, ನೋಡ್ರಿ ನಿಮ್ಮ ಜೀವನದಲ್ಲಿ ಒಂದು ವರ್ಷದ ಅವಧಿಯಲ್ಲಿ ಎಷ್ಟು ಬದಲಾವಣೆಗಳಾಗ್ತಾವೆ. ಸಮುದಾಯ ಪ್ರಾರ್ಥನೆ ನಾಳೆ. ಸಮುದಾಯ ಪ್ರಾರ್ಥನೆ ಮತ್ತು ವಚನ ಪಠಣ , ಪ್ರತಿಯೊಬ್ಬರೂ ಕಡ್ಡಾಯವಾಗಿ ಬಿಳಿ ಬಟ್ಟೆಗಳನ್ನು ಉಟ್ಟು, ಕಾವಿಯ ಸ್ಕಾರ್ಫ್‌ನ್ನು ಹೊದ್ದು ಅದರಲ್ಲಿ ಭಾಗಿಗಳಾಗಬೇಕು. ಬಹಳ ಮಹತ್ವಪೂರ್ಣವಾದದ್ದು. ಅದಾದ ನಂತರ ಪ್ರಸಾದವನ್ನು ಸ್ವೀಕಾರ ಮಾಡಿ ಮೆರವಣಿಗೆಯಲ್ಲಿ ಭಾಗಿಯಾಗಬೇಕು. ಬಸವಣ್ಣನವರ ಐಕ್ಯ ಮಂಟಪದಿಂದ ಇಲ್ಲಿಯತನಕ ಮೆರವಣಿಗೆ. ನೀವು ಹೋಗುವ ಪ್ರತಿಯೊಂದು ಹೆಜ್ಜೆಯೂ ಸಹ ದೇವರ ಸಾಮೀಪ್ಯಕ್ಕೆ ನಿಮ್ಮನ್ನು ಕರೆದುಕೊಂಡು ಹೋಗುವಂತ ಬಸವಣ್ಣನ ಕೈಗಳು ಅಂತಾ ತಿಳಿದುಕೊಳ್ಳಬೇಕು. ಎಲ್ಲರೂ ಮೆರವಣಿಗೆಯಲ್ಲಿ ಭಾಗವಹಿಸಬೇಕು. ತೀರಾ ಮುಪ್ಪಾದವರು ಮಾತ್ರ ಉಳಿದುಕೊಳ್ರಿ. ಸಾಯಂಕಾಲ ಸಾಮೂಹಿಕ ಇಷ್ಟಲಿಂಗಾರ್ಚನೆ ಇದೆ. ಆಗ ಮತ್ತೆ ನಾನು ಸ್ವಲ್ಪ ಪ್ರವಚನವನ್ನು ಹೇಳ್ತಾ ಇದ್ದೇನೆ. ಇಷ್ಟನ್ನು ಹೇಳ್ತಾ ಯಾರ್‍ಯಾರು ಶರಣ ಮೇಳದಲ್ಲಿ ಭಾಗಿಗಳಾಗಿದ್ದೀರಲ್ಲ ನೀವೆಲ್ಲ ನಿಜಕ್ಕೂ ಪವಿತ್ರಾತ್ಮರು. ಶರಣರು ಕೊಡುವ ವಚನಾಮೃತದ ಗಂಗೆಯಲ್ಲಿ ನೀವು ಮೀಯ್ತಾ ಇದ್ದೀರಾ, ಬಸವ ಸಾಗರದ ನೀರಿನಲ್ಲಿ ಮಿಂದು ನಿಮ್ಮ ಶರೀರ ಸ್ವಚ್ಛವಾದರೆ, ಏಕೆಂದರೆ ಬಸವ ಸಾಗರದ ನೀರು ಮಲೀನ ಆಗಿಲ್ಲ ಬೇರೆ ನದಿಗಳ ನೀರು ಮಲೀನ ವಾಗಿದೆ. ಆದರೆ ಬಸವ ಸಾಗರದ ನೀರು ಮಲೀನವಾಗಿಲ್ಲ, ಅಲ್ಲಿ ಮಿಂದು ನಿಮ್ಮ ಶರೀರ ಸ್ವಚ್ಛವಾದರೆ ಈ ಸಭಾ ಮಂಟಪದಲ್ಲಿ ಹರಿಯುವ ವಚನಾಮೃತ ಎಂಬ ಜ್ಞಾನ ಗಂಗೆಯಲ್ಲಿ ಮಿಂದು ನಿಮ್ಮ ಹೃದಯ ಮನ ಬುದ್ಧಿಗಳು ನಿರ್ಮಲವಾಗ್ತಾ ಇದ್ದಾವೆ. ಅದಕ್ಕಾಗಿ ಇಲ್ಲಿ ಭಾಗಿಗಳಾದ ನಿಮ್ಮೆಲ್ಲರಿಗೂ ಸೃಷ್ಟಿಕರ್ತ ಲಿಂಗದೇವ, ಧರ್ಮಗುರು ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ದಯಪಾಲಿಸಲಿ ಅಂತಾ ಹಾರೈಸಿ ನನ್ನ ಈ ಪೀಠಾರೋಹಣ ಸಂದೇಶವನ್ನು ಮುಗಿಸ್ತಾ ಇದ್ದೀನಿ. ಜೈಗುರು ಬಸವೇಶ ಹರಹರ ಮಹಾದೇವ.

ಹೀಗೆ ಪರಮ ಪೂಜ್ಯ ಮಾತಾಜಿಯವರು ತಮ್ಮ ದಿವ್ಯ ಸಂದೇಶ ನೀಡಿದರು. ಈ ಸಂದರ್ಭದಲ್ಲಿ ತಾಯಿ ಗಂಗಮ್ಮ ಬಸಪ್ಪ ಅವರನ್ನು ಪೂಜ್ಯ ಗಂಗಾ ಮಾತಾಜಿ ಶಾಲು ಹೊದ್ದಿಸಿ ಗೌರವಿಸಿದರು.

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥

866666

ಶರಣ ಭೂಮಿ ಬಸವ ಕಲ್ಯಾಣದ ಶರಣ ಶೈಲದ ಮೇಲೆ
108 ಅಡಿ ಗುರು ಬಸವಣ್ಣನವರ ಪುತ್ಥಳಿ
ಧನ ಸಹಾಯಕ್ಕಾಗಿ ಬಿನ್ನಹ



ಬಸವ ಧರ್ಮ ಪೀಠದ ಶರಣ ಲೋಕದಲ್ಲಿ ತ್ವರಿತಗತಿಯಿಂದ ಕಟ್ಟಡ ನಿರ್ಮಾಣ ಕಾರ್ಯ ಸಾಗಿರುವುದು ಸರ್ವ ವೇದ್ಯವಷ್ಟೆ. ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಕೆಲಸವು ಅರ್ಧಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಪೂರೈಸಿದ್ದು ಇನ್ನು ಒಂದು ವರ್ಷದಲ್ಲಿ ಅದು ಪೂರ್ಣಗೊಳ್ಳುವ ನಿರೀಕ್ಷೆ ಇದೆ.

1. ಒಂದು ಲಕ್ಷ ರೂ ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಅಲ್ಲದೆ ದಾನಿಗಳ ಅಥವಾ ಅವರು ಸೂಚಿಸಿದವರ ಭಾವಚಿತ್ರವನ್ನು ಪ್ರದರ್ಶಿಸಲಾಗುವುದು.
2. 50,000 (ಐವತ್ತು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
3. 25,000 (ಇಪ್ಪತ್ತೈದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಸಾಮೂಹಿಕವಾಗಿ ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು.
4. 11,000 (ಹನ್ನೊಂದು ಸಾವಿರ) ಮತ್ತು ಮೇಲೆ ಕೊಟ್ಟವರ ಹೆಸರನ್ನು ಬೋರ್ಡಿನ ಮೇಲೆ ಬರೆಸಲಾಗುವುದು.

ಈಗಾಗಲೇ ಅನೇಕರು ತಮ್ಮ ಶಕ್ತ್ಯಾನುಸಾರ ದೇಣಿಗೆ ಕೊಟ್ಟಿರಬಹುದು. ಕೆಲಸವು ಹಾಕಿಕೊಂಡ ಅಂದಾಜು ವೆಚ್ಚಕ್ಕಿಂತ ಹೆಚ್ಚಾಗಿ ಸಾಗುತ್ತಿರುವುದರಿಂದ ಈಗ ಕೊಟ್ಟವರು ಇನ್ನೂ ಹೆಚ್ಚಿನ ಮೊತ್ತವನ್ನು ಕೊಡಬಹುದು. ಮೂರ್ತಿಗೆ ಆಕಾರ ಕೊಡುವ ಕೆಲಸ ನಡೆದಿರುವುದರಿಂದ ಹಣವು ತ್ವರಿತಗತಿಯಲ್ಲಿ ಬೇಕಾಗಿದೆ.

ಸ್ವಯಂ ಪ್ರೇರಣೆಯಿಂದ ಕಟ್ಟಡ ನಿಧಿಗೆ ಶಕ್ತ್ಯಾನುಸಾರ ಮತ್ತು ಭಕ್ತ್ಯಾನುಸಾರ ಎಷ್ಟು ಬೇಕಾದರೂ ಕೊಡಬಹುದು.

108 ಸೋಪಾನದ ಯೋಜನೆ

ಗುರು ಬಸವಣ್ಣನವರ 108 ಅಡಿ ಪುತ್ಥಳಿಯ ಮುಂಭಾಗದಲ್ಲಿ ಏರಲು, ಇಳಿಯಲು ಮೆಟ್ಟಿಲನ್ನು ಮಾಡಲಾಗುತ್ತಿದೆ. ಏರಲು 108 ಇಳಿಯಲು 108 ಹೀಗೆ ಒಟ್ಟು 216 ಸೋಪಾನಗಳಾಗುತ್ತವೆ. ಅಳತೆ 10 ಅಡಿ ಉದ್ದ, 8 ಅಂಗುಲ ಎತ್ತರ, 1 ಅಡಿ ಅಗಲ, ಈ ಮೆಟ್ಟಿಲುಗಳಿಗೆ ಗ್ರಾನೈಟನ್ನು ಹಾಕಿಸುವ ಅಪೇಕ್ಷೆ ಇದೆ. 8 ಅಂಗುಲ ಎತ್ತರದ ಕಲ್ಲಿನ ಮೇಲೆ ದಾನಿಗಳ ಹೆಸರನ್ನು ಕೆತ್ತಿಸಲಾಗುವುದು. ಈ ಸೋಪಾನ ಯೋಜನೆಗೆ ಒಂದು ಮೆಟ್ಟಿಲಿಗೆ 15000 (ಹದಿನೈದು ಸಾವಿರ) ಕೊಟ್ಟರೆ ಧನ ದಾಸೋಹಿಗಳ ಹೆಸರನ್ನು ಗ್ರಾನೈಟ್ ಕಲ್ಲಿನ ಮೇಲೆ ಕೆತ್ತಿಸಲಾಗುವುದು. ಶರಣ ಬಂಧುಗಳು ಸ್ವಯಂ ಪ್ರೇರಣೆಯಿಂದ ದೇಣಿಗೆ ನೀಡಲು ಮುಂದಾಗ ಬೇಕೆಂದು ಕೋರುತ್ತೇವೆ.

ನವಲಿಂಗ ಸ್ಥಾವರ

ಏರುವ ಮತ್ತು ಇಳಿಯುವ ಮೆಟ್ಟಲಿನ ಮಧ್ಯೆ ಸುಂದರವಾದ ನವಲಿಂಗ ಸ್ಥಾವರವನ್ನು ನಿರ್ಮಿಸಲಾಗುತ್ತಿದೆ. ಒಂಬತ್ತು ಕಟ್ಟೆಗಳ ಮೇಲೆ 9 ಕಮಲದ ಹೂವುಗಳು ಅರಳಲಿದ್ದು, ಆ ಹೂವುಗಳ ಮೇಲೆ 9 ಮಂಟಪಗಳ ನಿರ್ಮಾಣವಾಗಲಿದೆ. ಅವುಗಳಲ್ಲಿ 9 ಜನ ಶರಣರ ಮೂರ್ತಿಗಳನ್ನು ಇಡಲಾಗುವುದು.

ಶೂನ್ಯ ಪೀಠ ಪರಂಪರೆಯನ್ನು ಬಿಂಬಿಸಲಿರುವ ಈ ನವಲಿಂಗ ಸ್ಥಾವರದಲ್ಲಿ ಕೂರಿಸಲಾಗುವ 9 ಮೂರ್ತಿಗಳೆಂದರೆ, ಮೇಲಿನಿಂದ ಕೆಳಕ್ಕೆ

1. ಶೂನ್ಯ ಪೀಠಾಧೀಶ ಅಲ್ಲಮಪ್ರಭುದೇವರು
2. ವೀರ ವಿರಾಗಿಣಿ ಅಕ್ಕಮಹಾದೇವಿ
3. ಚಿನ್ಮಯ ಜ್ಞಾನಿ ಚನ್ನಬಸವಣ್ಣ
4. ಲಿಂಗಾಂಗ ಯೋಗಿ ಸಿದ್ಧರಾಮೇಶ್ವರ
5. ವೈರಾಗ್ಯನಿಧಿ ಮಲೆಯ ಮಾದೇಶ್ವರ
6. ನಿರಂಜನ ಮೂರ್ತಿ ಮನ್ಮಥಸ್ವಾಮಿ (ಮಹಾರಾಷ್ಟ್ರ)
7. ಯಡೆಯೂರು ಸಿದ್ಧಲಿಂಗೇಶ್ವರ
8. ಜೇವರ್ಗಿಯ ಷಣ್ಮುಖ ಶಿವಯೋಗಿ
9. ಬಸವ ಕಂದ ಲಿಂಗಾನಂದ ಸ್ವಾಮಿಗಳು

ನಂತರ ಎರಡೂ ಬದಿಯಲ್ಲಿ ಅಶ್ವಾರೂಢರಾಗಿರುವ ವಚನ ಸಾಹಿತ್ಯ ಸಂರಕ್ಷಕರಾದ ವೀರ ಗಣಾಚಾರಿ ಮಡಿವಾಳ ಮಾಚಿದೇವರು ಮತ್ತು ವೀರ ಮಾತೆ ಅಕ್ಕನಾಗಲಾಂಬಿಕೆಯ ಮೂರ್ತಿಗಳು.

ನವ ಲಿಂಗ ಸ್ಥಾವರದ ಕಟ್ಟೆ, ಕಮಲ ಮಂಟಪ ಮತ್ತು ಶರಣರ ಮೂರ್ತಿ - ಎಲ್ಲಾ ಸೇರಿ ಒಂದೊಂದಕ್ಕೆ 4 ಲಕ್ಷ ರೂ ವೆಚ್ಚವಾಗುತ್ತದೆ. ಒಬ್ಬರು ಅಥವಾ ಇಬ್ಬರು ಭರಿಸಿದರೆ ದೊಡ್ಡದಾಗಿ ಹೆಸರು ಬರುತ್ತದೆ. ಇಲ್ಲದಿದ್ದರ ತಲಾ 50,000 (ಐವತ್ತು ಸಾವಿರ) ರೂ ಕೊಟ್ಟ 8 ಜನ ದಾನಿಗಳ ಹೆಸರಿನ ನಾಮಫಲಕಗಳನ್ನು ಗ್ರಾನೈಟನಲ್ಲಿ ಕೆತ್ತಿಸಿ ಒಂದೊಂದು ಹಂತಕ್ಕೆ ಹಾಕಲಾಗುವುದು.

ಕಲ್ಲಿನ ಬಾಗಿಲ ಚೌಕಟ್ಟು

ಲ್ಯಾಟರೈಟ್ ಕಲ್ಲಿನಲ್ಲಿ ಕೊರೆಸಲ್ಪಟ್ಟ ಬೃಹತ್ ಗವಿಯು ಅದ್ಭುತವಾಗಿ ಮೂಡಿ ಬಂದಿದ್ದು ಅದರ ಒಳಗೆ ಪುನಃ ಕೋವಿ(ಒಳ ಸುರಂಗ)ಗಳನ್ನು ಮಾಡಿ ಪ್ರಮುಖ ಶರಣ-ಶರಣೆಯರ ಮೂರ್ತಿಗಳನ್ನು ಕೂರಿಸಲಾಗಿದೆ. ಇನ್ನೂ ಕೆಲವು ಮೂರ್ತಿಗಳನ್ನು ಕೂರಿಸಿರುವ (ಮತ್ತು ಕೂರಿಸಲಿರುವ) ಸುರಂಗಗಳಿಗೆ ಕಲ್ಲಿನ ಬಾಗಿಲ ಚೌಕಟ್ಟನ್ನು ಶಿಲ್ಪಿಗಳಿಂದ ಕೆತ್ತಿಸಲಾಗಿದೆ; ಮತ್ತು ಕೆತ್ತಿಸಲಾಗುತ್ತಿದೆ. ಇಂಥ ಬಾಗಿಲ ಚೌಕಟ್ಟು ಒಂದಕ್ಕೆ 25000 (ಇಪ್ಪತ್ತೈದು ಸಾವಿರ) ರೂ ಆಗುತ್ತದೆ. ಇದಕ್ಕೆ ಕೊಡುವ ದಾನಿಗಳಿಗೆ ಬಾಗಿಲ ಚೌಕಟ್ಟಿನ ಮೇಲೆ ಹೆಸರನ್ನು ಕೆತ್ತಿಸಲಾಗುತ್ತದೆ. ಇಂಥ ಬಾಗಿಲ ಚೌಕಟ್ಟುಗಳು ಕೇವಲ 20 ಮಾತ್ರ ಇವೆ. ಆದ್ದರಿಂದ ಧನ ದಾಸೋಹಿಗಳು ಬೇಗನೆ ತಮ್ಮ ಹೆಸರನ್ನು ತಿಳಿಸಬೇಕು.

ವಿ.ಸೂ : ಈ ಯೋಜನೆಗಳನ್ನು ಘೋಷಿಸುವ ಮೊದಲು (1-2-2010) ಅನೇಕರು 25000(ಇಪ್ಪತ್ತೈದು ಸಾವಿರ) ಮತ್ತು 15000 (ಹದಿನೈದು ಸಾವಿರ) ರೂಗಳನ್ನು ದೇಣಿಗೆಯಾಗಿ ನೀಡಿದ್ದಾರೆ. ಅವರು ಈ ಹಣವನ್ನು ಬಾಗಿಲ ಚೌಕಟ್ಟಿಗೆ ಮೆಟ್ಟಿಲು ಯೋಜನೆಗೆ ಬಳಸಿಕೊಳ್ಳಿರಿ ಎಂದು ತಿಳಿಸಬಾರದು. ಏಕೆಂದರೆ ಆ ಹಣವನ್ನು ಬೃಹತ್ ಮೂರ್ತಿಯ ಕೆಲಸಕ್ಕೆ ಬಳಸಿಕೊಳ್ಳಲಾಗಿದೆ. ಈ ಯೋಜನೆಗೆ ಕೊಡಬೇಕೆನ್ನುವವರು ಹಣಕೊಡುವಾಗಲೇ ಉದ್ದೇಶವನ್ನು ತಿಳಿಸಬೇಕು.

ಶರಣ ಬಂಧುಗಳು ಲಕ್ಷ್ಯ ಕೊಟ್ಟು ಓದಿ ತಮ್ಮ ಶಕ್ತ್ಯಾನುಸಾರ ಯೋಜನೆಯನ್ನು ಆಯ್ಕೆ ಮಾಡಿಕೊಂಡು, ದೇಣಿಗೆಯನ್ನು ಕೊಟ್ಟು ಸಹಕರಿಸಬೇಕೆಂದು ಕೋರುತ್ತೇವೆ.

ಗುರು ಬಸವಣ್ಣನವರ ಜೀವನ ಚರಿತ್ರೆ, ಚಿತ್ರಣ

1. ಗುರು ಬಸವಣ್ಣನವರ 108 ಅಡಿ ಪುತ್ಥಳಿಗೆ 24 ಅಡಿ ಎತ್ತರದ ಅಡಿಪಾಯವಿದೆ. ಇಲ್ಲಿ ಧರ್ಮಪಿತರ ಜೀವನದ ಪ್ರಮುಖ ಘಟ್ಟಗಳನ್ನು ಮೂರ್ತಿಗಳ ಮೂಲಕ ಚಿತ್ರಿಸುವ ಯೋಜನೆ ಇದೆ. ಒಂದು ಅಂಕಣದಲ್ಲಿ ಒಂದು ಘಟನೆ ಅಥವಾ ಪ್ರಸಂಗವಿರುತ್ತದೆ. ಒಂದೊಂದು ಘಟನೆಯ ಚಿತ್ರಣಕ್ಕೆ ಒಂದೂವರೆ ಲಕ್ಷ ಖರ್ಚು ಬರಲಿದೆ. (ಮುರ್ಡೇಶ್ವರದಲ್ಲಿ ರಾವಣನ ಜೀವನದ ಪ್ರಸಂಗಗಳು, ಶಿವನ ಲೀಲೆಗಳನ್ನು ಚಿತ್ರಿಸಿರುವುದು ನಮ್ಮ ಯೋಜನೆಗೆ ಪ್ರೇರಣೆ) ಇದನ್ನು ಒಬ್ಬರೇ ದಾನಿಗಳು ವಹಿಸಿಕೊಳ್ಳಬಹುದು. ಅಥವಾ ಇಬ್ಬರು - ಮೂವರು ಸೇರಿ ವಹಿಸಿಕೊಳ್ಳಬಹುದು. ಅಥವಾ ಒಂದೊಂದು ರಾಷ್ಟ್ರೀಯ ಬಸವ ದಳದಿಂದ ಅಥವಾ ಒಂದೊಂದು ಊರಿನಿಂದ ಸಂಗ್ರಹಿಸಿ ದೇಣಿಗೆ ನೀಡಬಹುದು.

2. ಶರಣ ಗ್ರಾಮ: ವಿವಿಧ ಕಾಯಕದ ಶರಣರನ್ನು ಅವರ ಪರಿಸರದ ಜೊತೆಗೆ ಚಿತ್ರಿಸುವ ಕೆಲಸ ಆರಂಭವಾಗಿದೆ. ಒಬ್ಬ ಶರಣರ ಅಂಥ ಚಿತ್ರಣಕ್ಕೆ ಅಂದಾಜು 50,000 (ಐವತ್ತು ಸಾವಿರ) ರೂ ವೆಚ್ಚವಾಗುವುದು. ಕೊಟ್ಟವರ ಹೆಸರಿನ / ಊರಿನ ನಾಮಫಲಕವನ್ನು ಹಾಕಲಾಗುವುದು.

3. ಅಕ್ಕಮಹಾದೇವಿ ಗವಿ : ಜಗನ್ಮಾತಾ ಅಕ್ಕಮಹಾದೇವಿಯ ಹೆಸರಿನಲ್ಲಿ ಒಂದು ಬೃಹತ್ ಗವಿಯನ್ನು ಕೆತ್ತಿಸಲಾಗಿದ್ದು, ಇದರಲ್ಲಿ 30 ಜನ ವಚನಕಾರ್ತಿ ಶರಣೆಯರ ಮೂರ್ತಿಗಳನ್ನು ಕೂರಿಸುವ ಉದ್ದೇಶವಿದೆ. ಒಬ್ಬೊಬ್ಬ ಶರಣೆಯ ಮೂರ್ತಿಯನ್ನು ಆಕೆಯ ಪರಿಸರದೊಡನೆ ಚಿತ್ರಿಸಲು 25,000 (ಇಪ್ಪತ್ತೈದು ಸಾವಿರ) ರೂಗಳ ವೆಚ್ಚ ತಗುಲಲಿದೆ. ದಾನಿಗಳು ದೇಣಿಗೆ ಕೊಟ್ಟರೆ ಅಲ್ಲಿ ಅವರ ಹೆಸರಿನ ನಾಮಫಲಕವನ್ನು ಹಾಕಲಾಗುವುದು.

4. ಸರೋವರ: ಗುರು ಬಸವಣ್ಣನವರ ಪುತ್ಥಳಿಯ ಮುಂಭಾಗದಲ್ಲಿ ಒಂದು ಕೊಳವನ್ನು (ಅಂದಾಜು ವೆಚ್ಚ 5 ಲಕ್ಷ) ಮಾಡಿ, ಐಕ್ಯ ಮಂಟಪವನ್ನು (ಅಂದಾಜು ವೆಚ್ಚ 3 ಲಕ್ಷ) ನಿರ್ಮಿಸಲಾಗುತ್ತಿದೆ. ಇಡೀ ವೆಚ್ಚವನ್ನು ಒಬ್ಬರೇ ವಹಿಸಿಕೊಳ್ಳಬಹುದು. ಅಥವಾ ಇಬ್ಬರು ಪ್ರತ್ಯೇಕವಾಗಿ ವಹಿಸಿಕೊಳ್ಳಬಹುದು.

ಸಾಲದ ರೂಪದಲ್ಲಿ ಧನ ಸಹಾಯ

ಬೃಹತ್ ಪುತ್ಥಳಿಯ ಕೆಲಸವು ಬಹು ತೀವ್ರಗತಿಯಲ್ಲಿ ನಡೆದಿರುವ ಕಾರಣ ಹಣದ ವ್ಯವಸ್ಥೆಯನ್ನು ಮಾಡುವುದು ಅಗತ್ಯವಿದೆ. ಈ ಹಿಂದೆ 2006ರಲ್ಲಿ ನವ ದೆಹಲಿಯಲ್ಲಿ (ಬಸವ ಮಂಟಪ) ಕಟ್ಟಡ ಖರೀದಿ ಮಾಡುವಾಗ ಶರಣ ಬಂಧುಗಳು ಸಾಲ ರೂಪದಲ್ಲಿ ಹಣವನ್ನು ಒದಗಿಸಿದರು. ಒಂದೂವರೆ ತಿಂಗಳಲ್ಲೇ ಸಾಲ ರೂಪದಲ್ಲಿ ಹಣವನ್ನು ಸಂಗ್ರಹಿಸಿ ಕಟ್ಟಡವನ್ನು ಖರೀದಿಸಲಾಯಿತು. ಆ ಸಾಲದಲ್ಲಿ ಶೇಕಡಾ 80ರಷ್ಟು ತೀರಿಸಲಾಗಿದೆ. ಶರಣ ಬಂಧುಗಳ ಇಚ್ಛೆಯಂತೆ ಉಳಿದುದನ್ನು ಅವರು ಕೇಳಿದಾಗ ಕೊಡಲಾಗುವುದು. ಅದೇ ರೀತಿ ಈಗಲೂ ಶರಣ ಬಂಧುಗಳು ಸಾಲದ ರೂಪದಲ್ಲಿ ಬಸವ ಧರ್ಮ ಪೀಠ ಟ್ರಸ್ಟಿಗೆ ಹಣವನ್ನು ಕೊಡಬಹುದು. (ವಿ.ಸೂ: ಸಾಲದ ಹಣಕ್ಕೆ ರಸೀತಿ ಕೊಡಲಾಗುವುದು.) ಅದಕ್ಕೆ 12% ಬಡ್ಡಿಯನ್ನು ಸಹ ಕೊಡಲಾಗುವುದು. ತಮಗೆ ಹಣ ವಾಪಸ್ಸು ಬೇಕಾದಾಗ ಒಂದು ತಿಂಗಳು ಮೊದಲು ಬೇಡಿಕೆ ಸಲ್ಲಿಸಿದರೆ ವಾಪಸ್ಸು ನೀಡಲಾಗುವುದು. ಸಾಲ ನೀಡುವುದೂ ಸಹ ಉಪಕಾರದ ಕೆಲಸ ಎಂದು ಭಾವಿಸಿ, ಆರ್ಥಿಕ ಶಕ್ತಿ ಇರುವವರು ಸಾಲ ಕೊಡುವುದಕ್ಕೆ ಮುಂದೆ ಬರಬೇಕೆಂದು ವಿನಂತಿಸುತ್ತೇವೆ.

ಬೆಂಗಳೂರು ವಿಳಾಸ :
ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010
☎ : 080-22923736/23131476

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮ. ಪೀಠ (ರಿ.)
ಬಸವ ಮಹಾಮನೆ, ಬಸವಕಲ್ಯಾಣ- 585 327
ತಾ-ಬಸವ ಕಲ್ಯಾಣ, ಜಿಲ್ಲೆ-ಬೀದರ್
☎ : 08481-251921/252856

2010ರ ಫೆಬ್ರವರಿ - ಮಾರ್ಚ್ ತಿಂಗಳಲ್ಲಿ ಬರುವ
ಹಬ್ಬ - ಹುಣ್ಣಮೆ - ಉತ್ಸವಗಳು

ಶಿವರಾತ್ರಿ ಗಣಮೇಳ	-	ಫೆಬ್ರವರಿ 12
ಕಲ್ಯಾಣ ಕ್ರಾಂತಿ ಪೌರ್ಣಿಮೆ	-	ಫೆಬ್ರವರಿ 28
(ಹೋಳಿ ಹುಣ್ಣಮೆ)		-
ಪೂಜ್ಯ ಮಾತಾಜಿಯವರ 65ನೆಯ ವರ್ಧಂತಿ	-	ಮಾರ್ಚ್ 13
ಶೂನ್ಯ ಪೀಠಾಧೀಶ ಅಲ್ಲಮ ಪ್ರಭು ಜಯಂತಿ	-	ಮಾರ್ಚ್ 16
ಯುಗಾದಿ	-	ಮಾರ್ಚ್ 16
ಅಲ್ಲಮಗಿರಿಯಲ್ಲಿ ಗಣ ಮೇಳ	-	ಮಾರ್ಚ್ 16, 17, 18
ಜಗನ್ಮಾತಾ ಅಕ್ಕಮಹಾದೇವಿ ಜಯಂತಿ	-	ಮಾರ್ಚ್ 30

(ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಯ ಹಾತ್‌ಕಣಂಗಲೆ ತಾಲ್ಲೋಕಿನ ಅಲ್ಲಮಗಿರಿಯಲ್ಲಿ ವಿಶೇಷ ಗಣ ಸಮಾವೇಶ)

(ಅಕ್ಕಮಹಾದೇವಿ ಜಯಂತಿಯ ನಿಮಿತ್ತ 2010ರ ಮಾರ್ಚ್ 29, 30ರಂದು ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಮಠದಲ್ಲಿ ವಿಶೇಷ ಕಾರ್ಯಕ್ರಮ. 29ರ ಬೆಳಿಗ್ಗೆ ಉದ್ಘಾಟನೆ, ದಿ.30ರಂದು ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ)

















CPMG/KA/BGW/50/2009-2011-WPP(W)-17 R.NO.